## 2023–24 ಸಾಲಿನ ತರಬೇತಿ ಹಾಗೂ ಶಿಕ್ಷಣ ವಿಭಾಗದ ಮಾಹಿತಿ ಹಾಗೂ ಕಾರ್ಯಚಟುವಟಿಕೆಗಳ ವರದಿ

### ❖ ಕೇಂದ್ರ ಕಛೇರಿ :

➢ **ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ:** ದಿನಾಂಕ 18 ಮತ್ತು 19ನೇ ಏಪ್ರಿಲ್ 2023ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ಸಂಯುಕ್ತ ಸಹಕಾರಿಯ ಸೌಹಾರ್ದ ಸಹಕಾರಿ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಎರಡು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ **47** ಸೌಹಾರ್ದ ಸಹಕಾರಿಗಳಿಂದ **88** ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.



ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಕರ್ನಾಟಕ ಅಪೆಲೇಟ್ ಟ್ರಿಬ್ಯುನಲ್ ಸದಸ್ಯರು ಹಾಗೂ ಸಹಕಾರಿ ಇಲಾಖೆಯ ಅಪರ ನಿಬಂಧಕರಾದ ಶ್ರೀ ಎಸ್ ಅರುಣ ಕುಮಾರರವರು ಮಾತನಾಡಿ ಸಂಯುಕ್ತ ಸಹಕಾರಿಯ ಜೊತೆಗೆ ಕಳೆದ ಹಲವಾರು ವರ್ಷಗಳ ಒಡನಾಟದಲ್ಲಿದ್ದೇನೆ. ಸಂಯುಕ್ತ ಸಹಕಾರಿಯು ಉತ್ತಮ ತರಬೇತಿ ವ್ಯವಸ್ಥೆಯನ್ನು ಹೊಂದಿದ್ದಾರೆ. ಉತ್ತಮ ವಿಷಯಗಳ ಆಯ್ಕೆ ಇರುತ್ತದೆ. ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತಾರೆ. ಕಾರ್ಯಕ್ರಮಗಳನ್ನು ತುಂಬ ಅಚ್ಚುಕಟ್ಟಾಗಿ ನಡೆಸುತ್ತಾರೆ. ಇವತ್ತಿನ ಕಾರ್ಯಕ್ರಮ ಅತ್ಯಂತ ಮಹತ್ವದ್ದಾಗಿದೆ. ವಿಶೇಷವಾಗಿ ಸಹಕಾರಿ ಸಂಸ್ಥೆಗಳ ಸಾಲ ನೀಡುವುದು ಎಷ್ಟು ಮಹತ್ವದ್ದಾಗಿದೆಯೊ ಅಷ್ಟೆ ಮಹತ್ವದ್ದು. ಸಾಲ ವಸೂಲಾತಿ ಸಂದರ್ಭಗಳಲ್ಲಿ ದಾಖಲಾತಿ ಸರಿ ಇರದಿದ್ದರೆ ಸಾಲ ವಸೂಲಾತಿ ಆಗುವುದಿಲ್ಲ. ಹೀಗಾಗಿ ಸುಭದ್ರ ದಾಖಲಾತಿಗೆ ಹೆಚ್ಚು ಮಹತ್ವ ನೀಡುವುದು ಅಗತ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀ ಪ್ರಸಾದ ರೆಡ್ಡಿಯವರು ಮಾತನಾಡಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಜವಾಬ್ದಾರಿಗಳಿಗೆ ಹೆಚ್ಚಿನ ಮಹತ್ವ ಇದೆ. ಎಲ್ಲ ಸದಸ್ಯರ ನಿಕಟ ಸಂಪರ್ಕ, ಸಹಕಾರಿಯ ಆರ್ಥಿಕ ಚಟುವಟಿಕೆಗಳು ಅತ್ಯಂತ ಸುಭದ್ರವಾಗಿರಬೇಕಾದರೆ ಅವರಲ್ಲಿ ಆಡಳಿತ ಕೌಶಲ್ಯ

ಬೆಳೆಯಬೇಕು. ಇಂತಹ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಅವರಿಗೆ ಆಡಳಿತದಲ್ಲಿ ಪರಿಣಿತಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿಗಳ ಗುಣಮಟ್ಟ ರಕ್ಷಣೆಗೆ ರಾಜ್ಯದಾದ್ಯಂತ ವಿಭಾಗೀಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಹಮ್ಮಿಕೊಳ್ಳುತ್ತದೆ. ಅದರಲ್ಲೂ ವರ್ಷದ ಪ್ರಪ್ರಥಮ ಕಾರ್ಯಕ್ರಮವನ್ನು ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ಕಳೆದ ಹಲವಾರು ವರ್ಷಗಳಿಂದ ಹಮ್ಮಿಕೊಳ್ಳುತ್ತ ಬಂದಿದೆ. ಉತ್ತಮ ವಿಷಯಗಳ ಆಯ್ಕೆ ಮಾಡುತ್ತೇವೆ. ಉತ್ತಮ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ವ್ಯವಸ್ಥೆ ಇರುತ್ತದೆ. ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳು ಅಷ್ಟೆ ಉತ್ಸಾಹದಿಂದ ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇದರಿಂದಾಗಿ ಸೌಹಾರ್ದ ಸಹಕಾರಿಗಳ ಗುಣಮಟ್ಟ ವೃದ್ಧಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರರವರು ಸಹಕಾರ ಸಂಸ್ಥೆಗಳನ್ನು ಕಟ್ಟುವುದು ಬಹಳ ಸರಳ ಆದರೆ ಅವುಗಳನ್ನು ನಡೆಸಿಕೊಂಡು ಹೋಗುವುದು ಅತ್ಯಂತ ಮಹತ್ವದ್ದಾಗಿದೆ. ಸಹಕಾರ ಸಂಸ್ಥೆಗಳನ್ನು ನಡೆಸಿಕೊಂಡು ಹೋಗಲು ಅಧ್ಯಕ್ಷರಾದಿಯಾಗಿ ಎಲ್ಲ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು ಸಿಬ್ಬಂದಿಯವರು ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಅಧ್ಯಯನ ಮಾಡುವುದರ ಜೊತೆಗೆ ಅಗತ್ಯ ಜ್ಞಾನವನ್ನು ಹೊಂದಿರಬೇಕಾಗುತ್ತದೆ. ಅವರನ್ನೆಲ್ಲ ಉತ್ತಮ ಸಹಕಾರಿ ಜ್ಞಾನವಂತರನ್ನಾಗಿಸುವುದಕ್ಕಾಗಿ ಸಂಯುಕ್ತ ಸಹಕಾರಿ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ತರಬೇತಿ ಪಡೆದ ನಿರ್ದೇಶಕರುಗಳು ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ನೂತನ ವಿಷಯಗಳ ಅಳವಡಿಕೆಗೆ ಚಿಂತನೆ ಮಾಡಬೇಕು ಎಂದು ತಿಳಿಸಿ ಶಿವಮೊಗ್ಗ ಸೌಹಾರ್ದ ಸಹಕಾರಿಗಳ ಒಕ್ಕೂಟದ ನೇತೃತ್ವದಲ್ಲಿ ಕೊಡಚಾದ್ರಿಯ ಮಡಿಲಲ್ಲಿ ಒಂದು ಉತ್ತಮ ಅಂತರರಾಷ್ಟ್ರೀಯ ಮಟ್ಟದ ಸಹಕಾರ ತರಬೇತಿಗಳನ್ನು ನಡೆಸುವುದಕ್ಕಾಗಿ ರೆಸಾರ್ಟ್ ಮಾದರಿಯಲ್ಲಿ ಸಹಕಾರಿ ರೆಸಾರ್ಟ್ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದ ಎಲ್ಲ ಸಹಕಾರಿಗಳು ಈ ಕೇಂದ್ರದಲ್ಲಿ ಬಂದು ಸಭೆ ಸಮಾರಂಭಗಳನ್ನು ನಡೆಸಲು, ಸಭಾಂಗಣ, ವಸತಿ ವ್ಯವಸ್ಥೆ, ಊಟ ಉಪಹಾರಗಳ ವ್ಯವಸ್ಥೆ ಉತ್ತಮ ಪರಿಸರ ವ್ಯವಸ್ಥೆ ಇರುತ್ತದೆ ಎಂದು ತಿಳಿಸಿದರು. ಸ್ವಾಗತ ಕೋರಿದ ನಂತರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಪ್ರಾಸ್ತಾವಿಕ ನುಡಿಗಳನ್ನು ಹೇಳುತ್ತ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿ ಪ್ರತಿವರ್ಷ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಸೌಹಾರ್ದ ಸಹಕಾರಿಗಳ ಗುಣಮಟ್ಟ ಅಭಿವೃದ್ಧಿಯೇ ಸಂಯುಕ್ತ ಸಹಕಾರಿಯ ಗುರಿಯಾಗಿದೆ ಎಂದು ತಿಳಿಸುತ್ತ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ವಿವರಗಳನ್ನು ತಿಳಿಸಿದರು. ಕೊನೆಯಲ್ಲಿ ಶ್ರೀಮತಿ ಸವಿತ ಎನ್.ಇ. ಇವರು ವಂದನಾರ್ಪಣೆ ನೆರವೇರಿಸಿದರು. ಎರಡು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಡಾ. ಎಸ್.ಎ.ಸಿದ್ಧಾಂತಿ, ಡಾ ನಂದೀಶ ಹಿರೇಮಠ, ಶ್ರೀ ಮೀನಾಕ್ಷಿ ಖಂಡಿಮಠ, ಡಾ. ಹರೀಶ, ಶ್ರೀ ವೈ.ವಿ.ಗುಂಡೂರಾವ ಇವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

**ಸಮಾರೋಪ ಕಾರ್ಯಕ್ರಮ**



ಎರಡು ದಿನಗಳ ತರಬೇತಿ ಕೊನೆಯಲ್ಲಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಭ್ಯರ್ಥಿಗಳು ಕಾರ್ಯಕ್ರಮದ ವಿಷಯಗಳು, ಸಂಪನ್ಮೂಲ ವ್ಯಕ್ತಿಗಳು, ವ್ಯವಸ್ಥೆ ಎಲ್ಲವೂ ಉತ್ತಮವಾಗಿತ್ತು ಎಂದು ಅಭಿಪ್ರಾಯ ತಿಳಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಮಾರೋಪ ಭಾಷಣ ಮಾಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವರವರು ಎಲ್ಲಾ ಅಭ್ಯರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ಹಾಗೂ ಸಂಯುಕ್ತ ಸಹಕಾರಿಯ ವತಿಯಿಂದ ಒಂದು ನೆನಪಿನ ಕಾಣಿಕೆಯನ್ನು ನೀಡಿದ ನಂತರ ಮಾತನಾಡುತ್ತ ಸಹಕಾರಿ ಸಂಸ್ಥೆಗಳಲ್ಲಿ ನಿರ್ದೇಶಕ ಮಂಡಳಿಯವರಿಗೆ ಹೆಚ್ಚಿನ ಜವಾಬ್ದಾರಿ ಇದೆ. ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾದರೆ ವಿಷಯಗಳ ತಿಳುವಳಿಕೆ ಇರಬೇಕಾಗುತ್ತದೆ. ಅದಕ್ಕಾಗಿಯೇ ಇಂತಹ ತರಬೇತಿಗಳನ್ನು ಸಂಯುಕ್ತ ಸಹಕಾರಿಯ ವತಿಯಿಂದ ವ್ಯವಸ್ಥೆ ಮಾಡಲಾಗುತ್ತದೆ. ನಿರ್ದೇಶಕರುಗಳೆಂದರೆ ಒಂದು ಸಂಸ್ಥೆಯ ಧರ್ಮದರ್ಶಿಗಳಿದ್ದಂತೆ ಎಂದು ತಿಳಿಸಿದರು. ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಆರ್. ರಘುನಂದನ ಕಾರ್ಯಕ್ರಮದ ವಂದನಾರ್ಪಣೆ ಮಾಡಿದರು. ಸದರಿ ತರಬೇತಿಯಲ್ಲಿ 47 ಸೌಹಾರ್ದ ಸಹಕಾರಿಗಳಿಂದ 88 ಪ್ರತಿನಿಧಿಗಳು ಭಾಗವಹಿಸಿರುತ್ತಾರೆ.

- **ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ :** ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರಗಳಿಗಾಗಿ 2ನೇ ತಂಡದ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ ದಿನಾಂಕ 17, 18 ಮೇ 2023ರಂದು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಗೃಹ ನಿರ್ಮಾಣ ಹಾಗೂ ಇತರೆ ಸಹಕಾರ ಸಂಘಗಳ ವಿಭಾಗದ ಅಪರ ನಿಬಂಧಕರಾದ ಶ್ರೀ ಕೆ.ಎಸ್. ನವೀನರವರು ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರು ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಹಾಗು ಶ್ರೀ ಗುರುನಾಥ ಜ್ಯಾಂತೀಕರ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ 12 ಜಿಲ್ಲೆಗಳಿಂದ 43 ಸೌಹಾರ್ದ ಸಹಕಾರಿಗಳಿಂದ 88 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

## ➢ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸಿನ ಸಂಪರ್ಕವರ್ಗ ತರಗತಿಗಳು : ಬೆಂಗಳೂರು ಕೇಂದ್ರ :



ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲಾಗುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಡಿಪ್ಲೋಮೊ ಕೋರ್ಸಿನ ಸಂಪರ್ಕ ವರ್ಗವನ್ನು ದಿನಾಂಕ 13.05.2023 ರಂದು ಆಯೋಜಿಸಲಾಗಿತ್ತು. ಸಂಪರ್ಕ ವರ್ಗದ ಉದ್ಘಾಟನೆಯನ್ನು ಶ್ರೀ ಎಚ್ ಎಸ್ ನಾಗರಾಜಯ್ಯ ಮಾನ್ಯ ಸಹಕಾರಿಗಳ ಅಪರ ನಿಬಂಧಕರು(ನಿ)ಬೆಂಗಳೂರು, ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ನಾರಾಯಣ ಹೆಗಡೆ ಮಾನ್ಯ ಉಪಪ್ರದಾನ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಹಾಗೂ ಶ್ರೀ ಶ್ರೀಕಾಂತ್ ಬರುವೆ ಮಾನ್ಯ ಉಪ ಪ್ರದಾನ ವ್ಯವಸ್ಥಾಪಕರು ಬೆಂಗಳೂರು ಇವರು ವಹಿಸಿಕೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಬಿ.ಎಸ್. ಗುಂಡೂರಾವ್ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ತರಬೇತಿ ಅಧಿಕಾರಿಗಳಾದ ಶ್ರೀಮತಿ ಸವಿತ ಎನ್. ಇ. ಕಾರ್ಯಕ್ರಮದ ಉಸ್ತುವಾರಿ ಅಧಿಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಶ್ರೀ ವೆಂಕಟೇಶ್ ನಾಯ್ಕ್, ಪ್ರಾಸ್ತಾವಿಕವನ್ನು ಶ್ರೀ ಪಾಲರಾಜರವರು ನಡೆಸಿಕೊಟ್ಟರು ನಿರೂಪಣೆಯನ್ನು ಶ್ರೀ ಯದುನಂದನ್ ಎಸ್ ಇವರು ವಂದನಾರ್ಪಣೆಯನ್ನು ಶ್ರೀ ಅನಿಲಕುಮಾರ್‌ರವರು ನೆರವೇರಿಸಿದರು. ಬೆಂಗಳೂರು ಕೇಂದ್ರದಲ್ಲಿ ಒಟ್ಟು 80 ಅಭ್ಯರ್ಥಿಗಲ್ಲಿ 65 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ. ದಿನಾಂಕ 13 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಶ್ರೀ ಹೆಚ್ ಎಸ್ ನಾಗರಾಜಯ್ಯ ಮಾನ್ಯ ಸಹಕಾರಿಗಳ ಅಪರ ನಿಬಂಧಕರು(ನಿ) ಬೆಂಗಳೂರು ಎರಡನೇಯ ಅವಧಿಗೆ ಸಹಕಾರಿ ಪತ್ತು ನಿರ್ವಹಣೆ ಈ ವಿಷಯ ಕುರಿತು ಶ್ರೀ ಶ್ರೀಕಾಂತ್ ಬರುವೆ ಮಾನ್ಯ ಉಪಪ್ರದಾನ ವ್ಯವಸ್ಥಾಪಕರು ಬೆಂಗಳೂರು. ಇವರುಗಳು ಉಪನ್ಯಾಸ ನೀಡಿದರು, ಹಾಗೂ ಯೋಗ ಶಿಕ್ಷಣವನ್ನು ಶ್ರೀಮತಿ ದಾಕ್ಷಾಯಿಣಿ ಮಾನ್ಯ ಯೋಗ ತರಬೇತಿದಾರರು ಇವರು ನೆರವೇರಿಸಿದರು.

ದಿನಾಂಕ 14 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಶ್ರೀ ಶಶಿಧರ ಎಲೆ ಮಾನ್ಯ ಅಪರ

ನಿಬಂಧಕರು (ನಿ) ಬೆಂಗಳೂರು ಎರಡನೇಯ ಅವಧಿಗೆ ಸಾಂಸ್ಥಿಕ ಅಧ್ಯಯನ ವಿಷಯದ ಕುರಿತು ಶ್ರೀಮತಿ ಲಲಿತಾ ಪಾಟೀಲ ಮಾನ್ಯ ಪ್ರಾಧ್ಯಾಪಕರು ಬೆಂಗಳೂರು ಇವರುಗಳು ಉಪನ್ಯಾಸ ನೀಡಿದರು. ಬೆಂಗಳೂರು ಕೇಂದ್ರದಲ್ಲಿ ಒಟ್ಟು 80 ಅಭ್ಯರ್ಥಿಗಲ್ಲಿ 60 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ.

**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಕೇಂದ್ರ ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ** ಸಹಕಾರ ಹಾಗು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋಸನ್ನು ಪ್ರಾರಂಬಿಸಲಾಗಿದ್ದು, ದಿನಾಂಕ 13, 14 ಹಾಗು 27, 28ನೇ ಮೇ 2023ರಂದು ಬೆಂಗಳೂರು, ಹೊಸಪೇಟೆ, ಗದಗ, ಶಿರಸಿ, ಉಡುಪಿ, ಶಿವಮೊಗ್ಗ, ಬಳ್ಳಾರಿ, ಸಿಂಧನೂರು, ಜಮಖಂಡಿ ಹಾಗು ಬೆಲ್ಲದಬಾಗೇವಾಡಿ ಒಟ್ಟು 10 ಕೇಂದ್ರಗಳಲ್ಲಿ ಸಂಪರ್ಕವರ್ಗ ತರಗತಿಗಳನ್ನು ಆಯೋಜಿಸಲಾಗಿತ್ತು. ಬೆಂಗಳೂರು ಕೇಂದ್ರದಲ್ಲಿ 65 ಅಭ್ಯರ್ಥಿಗಳು, ಹೊಸಪೇಟೆ ಕೇಂದ್ರದಲ್ಲಿ 34 ಅಭ್ಯರ್ಥಿಗಳು, ಗದಗ ಕೇಂದ್ರದಲ್ಲಿ 96 ಅಭ್ಯರ್ಥಿಗಳು, ಶಿರಸಿ ಕೇಂದ್ರದಲ್ಲಿ 34 ಅಭ್ಯರ್ಥಿಗಳು, ಉಡುಪಿ ಕೇಂದ್ರದಲ್ಲಿ 54 ಆಭ್ಯರ್ಥಿಗಳು, ಶಿವಮೊಗ್ಗ ಕೇಂದ್ರದಲ್ಲಿ 53 ಅಭ್ಯರ್ಥಿಗಳು, ಬಳ್ಳಾರಿ ಕೇಂದ್ರದಲ್ಲಿ 34 ಅಭ್ಯರ್ಥಿಗಳು, ಸಿಂದನೂರು ಕೇಂದ್ರದಲ್ಲಿ 46 ಅಭ್ಯರ್ಥಿಗಳು, ಜಮಖಂಡಿ ಕೇಂದ್ರದಲ್ಲಿ 48 ಅಭ್ಯರ್ಥಿಗಳು ಹಾಗು ಬೆಲ್ಲದಬಾಗೇವಾಡಿ ಕೇಂದ್ರದಲ್ಲಿ 58 ಅಭ್ಯರ್ಥಿಗಳು ಭಾಗವಹಿಸಿದ್ದರು.

- **7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್:** ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಗಳಿಗಾಗಿ ದಿನಾಂಕ 17 ರಿಂದ 23ನೇ ಜೂನ್ 2023ರವರೆಗೆ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಉದ್ಘಾಟನಾ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ಅಧ್ಯಕ್ಷರು ಹಾಗು ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ವಹಿಸಿಕೊಂಡಿದ್ದರು.



ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನಡೆಸಿಕೊಟ್ಟರು. ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ವೈ ಹೆಚ್ ಗೋಪಾಲಕೃಷ್ಣ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ಹಾಗು ಶ್ರೀ ರಘುರಾಮರೆಡ್ಡಿ ಹಾಗು ಆರ್ಐಸಿಎಂ ಪ್ರಾಧ್ಯಾಪಕರಾದ ಡಾ. ಎಂ ಜಯಪ್ರಕಾಶ್ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ದಿನಾಂಕ 23.06.2023ರಂದು ಸಮಾರೋಪ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ನೆರವೇರಿಸಿದರು. ಸಮಾರೋಪ ಭಾಷಣವನ್ನು ಶ್ರೀಮತಿ ಮೀನಾಕ್ಷಿ ಗಡ್, ಮಾನ್ಯ ಜನರಲ್ ಮ್ಯಾನೇಜರ್, ಆರ್‌ಬಿಐ ಇವರು ನಡೆಸಿಕೊಟ್ಟರು. ವಿಕಾಸ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ ಹಿರೇಮಠ, ಸೂಕೋ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿ ಇವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಕೋರ್ಸಿನಲ್ಲಿ ಒಟ್ಟು 6 ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳಿಂದ 74 ಅಭ್ಯರ್ಥಿಗಳು ಭಾಗವಹಿಸಿದ್ದರು.

- **ಲೆಕ್ಕಪರಿಶೋಧನಾ ವರದಿ ನಮೂನೆ ಕುರಿತು ಆನ್‌ಲೈನ್ ತರಬೇತಿ :** ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿಗಳಿಂದ ದಿನಾಂಕ 19 ಹಾಗು 20ನೇ ಜೂನ್ 2023ರಂದು ಸೌಹಾರ್ದ ಸಹಕಾರಿಗಳಿಗಾಗಿ ಲೆಕ್ಕಪರಿಶೋಧನಾ ವರದಿ ನಮೂನೆ ಬದಲಾವಣೆಯಾಗಿರುವ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು.

- **ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ದಿನಾಂಕ 25, 26 ಮತ್ತು 27 ಜೂನ್ 2023 3 ದಿನಗಳ ಕಾಲ ಮೈಸೂರಿನಲ್ಲಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ಏರ್ಪಡಿಸಲಾಗಿತ್ತು.



ಕಾರ್ಯಕ್ರಮದ ಉದ್ಘಾಟನೆಯನ್ನು ಪರಮ ಪೂಜ್ಯ ಶ್ರೀ ಮುಕ್ತಿದಾನಂದಸ್ವಾಮಿಗಳು, ರಾಮಕೃಷ್ಣ ಆಶ್ರಮ, ಮೈಸೂರು ಇವರು ನೆರವೇರಿಸಿದರು. ಪರೋಪಕಾರಿ ಜೀವನ, ತೆಗೆದು ಕೊಡುವ ಸಹಕಾರ ಮನೋಭಾವನೆ ಬೆಳೆಸಿಕೊಳ್ಳಬೇಕು. ಮನುಷ್ಯ ಶಕ್ತಿಯುತ ವಾಗಲು ಸೌಹಾರ್ದತೆ ಅಗತ್ಯ ಶಿಕ್ಷಣವೇ ಶಕ್ತಿ

ಅದನ್ನು ಪಡೆಯಲು ಈ ರೀತಿಯ ಕಾರ್ಯಕ್ರಮಗಳು ಪೂರಕವಾಗುತ್ತವೆ ಎಂದು ಕಾರ್ಯಕ್ರಮಕ್ಕೆ ಶುಭಕೋರಿ ಆಶೀರ್ವದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ವಹಿಸಿಕೊಂಡು ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗಾಗಿ ನಮ್ಮೆಲ್ಲರ ಪಾಲ್ಗೊಳ್ಳುವಿಕೆ ಹಾಗೂ ಈ ಕಾಯ್ದೆಗೆ ಶ್ರಮವಹಿಸಿದ ಹಿರಿಯ ಸಹಕಾರಿಗಳ ಸಲಹೆ ಪಡೆದು ಈ ಚಳುವಳಿಯನ್ನು ಉತ್ತರೋತ್ತರ ಅಭಿವೃದ್ಧಿಪಡಿಸಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ ಎಂದು ತಿಳಿಸಿದರು.

ಮುಖ್ಯಅತಿಥಿಗಳಾಗಿ ಶ್ರೀ ಎ. ಆರ್. ಪ್ರಸನ್ನಕುಮಾರ್ ಮಾನ್ಯ ಉಪಾಧ್ಯಕ್ಷರು ಕ.ರಾ.ಸ.ಸಂ.ಸ.ನಿ., ಬೆಂಗಳೂರು ಇವರು ಭಾಗವಹಿಸಿದ್ದರು ಹಾಗೂ ಡಾ. ಹೆಚ್. ವಿ. ರಾಜೀವ್ ಮಾನ್ಯ ಮಾಜಿ ಅಧ್ಯಕ್ಷರು, ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ಸಹಕಾರಿಗಳಿಂದ ಸೇವೆ ಸಿಗಬೇಕು ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು.

### ಉಪನ್ಯಾಸಗಳು

ದಿನಾಂಕ 25, 26 ಮತ್ತು 27 ಜೂನ್ 2023 ರಂದು ಆಡಳಿತ ಮಂಡಳಿ ಸದಸ್ಯರುಗಳಿಗೆ ಹಮ್ಮಿಕೊಂಡಿದ್ದ ತರಬೇತಿಯಲ್ಲಿ ಉಪನ್ಯಾಸಕರಾಗಿ ಡಾ. ಯಶವಂತ ಡೋಂಗ್ರೆ, ಮಾನ್ಯ ಕುಲಪತಿಗಳು, ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು ಇವರು ರಾಷ್ಟ್ರೀಯ ಸಹಕಾರಿ ನೀತಿಯ ಆಶಯ ಮತ್ತು ಪ್ರಗತಿ ಬಗ್ಗೆ ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 25 ಹಾಗೂ ಕಲಂ(38) ಗಳ ಅನುಷ್ಠಾನ ಶ್ರೀ ಸಿ.ಎನ್. ಪರಶಿವಮೂರ್ತಿ, ಮಾನ್ಯ ಅಪರ ನಿಬಂಧಕರು(ನಿ) ಉಪನ್ಯಾಸ ನೀಡಿದರು. ಡಾ.ಎ. ಆರ್. ಶ್ರೀನಾಥ, ಮಾನ್ಯ ನಿರ್ದೇಶಕರು(ನಿ), ರಾಷ್ಟ್ರೀಯ ಸಹಕಾರಿ ಯೂನಿಯನ್ ನವದೆಹಲಿ ಇವರು ದೇಶದ ಸಹಕಾರ ಚಳುವಳಿಯ ಪ್ರಗತಿ, ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯದ ಪ್ರಾರಂಭದ ನಂತರದ ಬೆಳವಣಿಗೆಗಳ ಉಪನ್ಯಾಸ ನೀಡಿದರು.

### ಸಂವಾದ ಕಾರ್ಯಕ್ರಮ– Panel discussion

ದಿನಾಂಕ 26.06.2023 ರಂದು ಸ್ವಯಂ ನಿಯತ್ರಣಾತ್ಮಕ ಸಂಸ್ಥೆ (self regulatory organization)-ಆಶಯ–ಪ್ರಸ್ತುತತೆ ಮತ್ತು ಕಾರ್ಯಯೋಜನೆ ಕುರಿತು ಶ್ರೀ ಮನೋಹರ್ ಮಸ್ಕಿ, ಮಾನ್ಯ ಮಾಜಿ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಸಂಸ್ಥಾಪಕ ಅಧ್ಯಕ್ಷರು ಸುಕೋ ಬ್ಯಾಂಕ್ ಬಳ್ಳಾರಿ ಇವರು ಉಪನ್ಯಾಸ ನೀಡಿದರು.

### ಸಂಯುಕ್ತ ಸಹಕಾರಿಯ ವಿಷನ್–2030 ಸಂವಾದ ಕಾರ್ಯಕ್ರಮ

ಸಂಯುಕ್ತ ಸಹಕಾರಿಯ ವಿಷನ್–2030 ವಿಷಯ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಶ್ರೀ ಜಿ. ನಂಜನಗೌಡ ಮಾನ್ಯ ಅಧ್ಯಕ್ಷರು, ಕರಾಸೌಸಂಸನಿ., ವಹಿಸಿಕೊಂಡಿದ್ದರು. ಮುಖ್ಯತಿಥಿಗಳಾಗಿ ಶ್ರೀ ವಿಶ್ವನಾಥ ಚ. ಹಿರೇಮಠ, ಮಾನ್ಯ ಮಾಜಿ ಅಧ್ಯಕ್ಷರು, ಕರಾಸೌಸಂಸನಿ., ಶ್ರೀ ಎಸ್. ಆರ್. ಸತೀಶ್‌ಚಂದ್ರ, ಮಾನ್ಯ ಮಾಜಿ ಅಧ್ಯಕ್ಷರು, ಕರಾಸೌಸಂಸನಿ., ಶ್ರೀ ಗುರುನಾಥ ಜ್ಯಾಂತಿಕರ್ ಮಾನ್ಯ ಮಾಜಿ ಅಧ್ಯಕ್ಷರು, ಹಾಗೂ ಹಾಲಿ ನಿರ್ದೇಶಕರು ಕರಾಸೌಸಂಸನಿ., ಡಾ. ಹೆಚ್. ವಿ. ರಾಜೀವ್ ಮಾನ್ಯ ಮಾಜಿ ಅಧ್ಯಕ್ಷರು, ಹಾಗೂ ಹಾಲಿ ಶಿಕ್ಷಣ ನಿದಿ ಸಲಹಾ ಸಮಿತಿ

ಸದಸ್ಯರು, ಕರಾಸೌಸಂಸನಿ., ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಮಾನ್ಯ ಮಾಜಿ ಅಧ್ಯಕ್ಷರು, ಹಾಗೂ ಹಾಲಿ ನಿರ್ದೇಶಕರು ಕರಾಸೌಸಂಸನಿ., ಶ್ರೀ ಎ. ಆರ್. ಪ್ರಸನ್ನಕುಮಾರ್ ಮಾನ್ಯ ಉಪಾಧ್ಯಕ್ಷರು, ಕರಾಸೌಸಂಸನಿ., ಶ್ರೀ ಜಗದೀಶ್ ಕವಟಗಿಮಠ ಮಾನ್ಯ ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು ಸಂವಾದ ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಮಾನ್ಯ ಸದಸ್ಯರು, ಕರಾಸೌಸಂಸನಿ., ಬೆಂಗಳೂರು ಇವರು ಉಪಸ್ಥಿತಿರಿದ್ದರು. ಸದರಿ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವಿಷನ್–2030 ಈ ಕುರಿತು ಸಲಹೆ ಹಾಗೂ ಮಾರ್ಗದರ್ಶನ ಪಡೆಯಲಾಯಿತು.

**ಸಮಾರೋಪ ಕಾರ್ಯಕ್ರಮ :**

ಸಮಾರೋಪ ಕಾರ್ಯಕ್ರಮದಲ್ಲಿ ಸಮೂಹ ಚರ್ಚೆ ಹಾಗೂ ಅಭಿಪ್ರಾಯ ಸಂಗ್ರಹ ಮಾಡಲಾಯಿತು. ಕಾರ್ಯಕ್ರಮದ ಸ್ವಾಗತ ಹಾಗೂ ಪ್ರಾಸ್ತಾವಿಕವನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾಡಿದರು. ಶ್ರೀ ಜಿ. ಎನ್. ಪಾಟೀಲ್ ಮಾನ್ಯ ನಿರ್ದೇಶಕರು ವಂದನಾರ್ಪಣೆ ಮಾಡಿದರು. ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲ ನಿರ್ದೇಶಕರು ಕಾರ್ಯಕ್ರಮದಲ್ಲಿ ಅಳವಡಿಸಿದ ವಿಷಯಗಳು, ಸಂಪನ್ಮೂಲ ವ್ಯಕ್ತಿಗಳು, ಕಾರ್ಯಕ್ರಮದ ನಿರ್ವಹಣೆ, ವ್ಯವಸ್ಥೆಗಳು ಅತ್ಯಂತ ಉತ್ತಮವಾಗಿದ್ದವು ಪ್ರತಿ 3 ತಿಂಗಳಿಗೊಮ್ಮೆ ಆಡಳಿತ ಮಂಡಳಿ ಸದಸ್ಯರಿಗೆ ಬೇರೆ ಬೇರೆ ವಿಷಯಗಳ ಬಗ್ಗೆ ತರಬೇತಿ ವ್ಯವಸ್ಥೆಯನ್ನು ಮಾಡುವುದು ಅವಶ್ಯಕ ಎಂದು ಅಭಿಪ್ರಾಯ ನೀಡಿದರು.

➢ **22ನೇ ವಾರ್ಷಿಕ ಸಾಮಾನ್ಯ ಸಭೆ : ಧ್ವಜಾರೋಹಣ :** ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ಸಹಕಾರ ಧ್ವಜಾರೋಹಣ ಕಾರ್ಯಕ್ರಮವನ್ನು 9–45 ಕ್ಕೆ ನೆರವೇರಿಸಿ ರಾಷ್ಟ್ರ ಗೀತೆ ನಂತರ ಎಲ್ಲ ಸಹಕಾರಿಗಳಿಗೆ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಭೋದಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ಹಾಗು ಎಲ್ಲಾ ನಿರ್ದೇಶಕರು ಹಾಗು ವ್ಯವಸ್ಥಾಪಕ ನಿರ್ದೇಶಕರು ಮತ್ತು ರಾಜ್ಯದ ಜಿಲ್ಲೆಗಳ ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

**ತಂತ್ರಜ್ಞಾನ ಮೇಳ ಹಾಗೂ ವಸ್ತು ಪ್ರದರ್ಶಿನಿ ಉದ್ಘಾಟನೆ :** ತಂತ್ರಜ್ಞಾನ ಮೇಳವನ್ನು ಬೆಳಿಗ್ಗೆ 9–50ಕ್ಕೆ ಹಿರಿಯ ಸಹಕಾರಿ ಹಾಗು ಸಂಯುಕ್ತ ಸಹಕಾರಿಯ ಮಾಜಿ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಮತ್ತು ಹಿರಿಯ ಸಹಕಾರಿಗಳಾದ ಶ್ರೀ ಮಂಜಪ್ಪ ಹೊಸಬಾಳೆಯವರುಗಳು ಉದ್ಘಾಟಿಸಿದರು.



**ಸಾಮಾನ್ಯ ಸಭೆ** : ಸಂಯುಕ್ತ ಸಹಕಾರಿಯ 22 ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 29ನೇ ಅಗಷ್ಟ 2023ರಂದು "ಪ್ರಿನ್ಸೆಸ್ ಗಾಲ್ಫ್, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಂಗಳೂರು" ಇಲ್ಲಿ ಬೆಳಿಗ್ಗೆ 10.00ಕ್ಕೆ ಸರಿಯಾಗಿ ಅಮ್ಮರಾಮಚಂದ್ರ ಹಾಗು ತಂಡದವರಿಂದ ಪ್ರಾರ್ಥನೆ ಹಾಗೂ ಸಹಕಾರ ಗೀತೆ, ರೈತಗೀತೆ ಹಾಗೂ ನಾಡಗೀತೆ ಗೀತೆಯೊಂದಿಗೆ ಪ್ರಾರಂಭಿಸಲಾಯಿತು.

**ಸ್ವಾಗತ ಹಾಗು ಪರಿಚಯ** : ಸಭಾ ಕಾರ್ಯಕ್ರಮವನ್ನು ಅಮ್ಮರಾಮಚಂದ್ರ ಹಾಗೂ ತಂಡದವರಿಂದ ಪ್ರಾರ್ಥನೆ ಹಾಗೂ ಸಹಕಾರ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ಇವರು ಅತಿಥಿ ಗಣ್ಯರಿಗೆ, ಸಂಯುಕ್ತ ಸಹಕಾರಿಯ ಅಧ್ಯಕ್ಷರು ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ಎಲ್ಲಾ ಸಹಕಾರಿಗಳಿಗೆ ಸ್ವಾಗತ ಮಾಡಿದರು.

**ಉದ್ಘಾಟನೆ** : 22ನೇ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು.

**ಸಂತಾಪ ಕಾರ್ಯಕ್ರಮ** : ಪ್ರಸಕ್ತ ಸಾಲಿನಲ್ಲಿ ನಿಧನರಾಗಿರುವ ಗಣ್ಯರಿಗೆ ಹಾಗೂ ಸಹಕಾರಿಗಳಿಗೆ ಸಂತಾಪಸೂಚಿಸುವ ಕಾರ್ಯಕ್ರಮವನ್ನು ಎರಡು ನಿಮಿಷ ಮೌನ ಆಚರಿಸುವುದರೊಂದಿಗೆ ನಡೆಸಲಾಯಿತು. ನಿಧನರಾದ ಸೌಹಶರ್ದ ಸಹಕಾರಿಗಳ ಹೆಸರುಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಓದಿದರು.

**ಅಧ್ಯಕ್ಷರ ಪ್ರಾಸ್ತಾವಿಕ ಭಾಷಣ** : ಸಂಯುಕ್ತ ಸಹಕಾರಿಯ ಮಾನ ್ಯಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಭಾಷಣ ಮಾಡಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಗತಿ 2022-23ನೇ ಸಾಲಿನ ಶಾಸನ ಬದ್ಧ ಹಾಗೂ ಶಿಕ್ಷಣ ತರಬೇತಿ ತರಬೇತಿ ಕಾರ್ಯಕ್ರಮಗಳು, ಸಂಪರ್ಕ ಸಭೆಗಳು, ಪತ್ರಿಕಾಗೋಷ್ಠಿಗಳು, ವಾರ್ಷಿಕ ಸಾಮಾನ್ಯ ಸಭೆಯ ವೈಶಿಷ್ಠತೆ, ಟಾಸ್ಕ್‌ಫೋರ್ಸ್ ಕಾರ್ಯಚಟುವಟಿಕೆಗಳು ಹಾಗೂ ಸಂಯುಕ್ತ ಸಹಕಾರಿಯ ನೂತನ ಕಟ್ಟಡಗಳ ಉದ್ಘಾಟನೆ, ನೂತನ ಶಿಕ್ಷಣ ಚಟುವಟಿಕೆಗಳ ಪ್ರಾರಂಭ, ಸದಸ್ಯ ಶಿಕ್ಷಣಕ್ಕೆ ಆದ್ಯತೆ ಹೀಗೆ ಎಲ್ಲ ವಿಷಯಗಳನ್ನು ಸಾಮಾನ್ಯ ಸಭೆಯ ಗಮನಕ್ಕೆ ತಂದು ಎಲ್ಲ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

**ಸಾಮಾನ್ಯ ಸಭೆಯ ಕಾರ್ಯಕಲಾಪಗಳು** : ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳನ್ನು ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರ ಅಧ್ಯಕ್ಷತೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ವಿಷಯಗಳ ಪ್ರಸ್ತಾವನೆ ಮಾಡಿದರು. ಸಭೆಯು ಅರ್ಥಪೂರ್ಣ ಚರ್ಚೆ ನಡೆಸಿ ಸರ್ವಾನುಮತದಿಂದ ಎಲ್ಲಾ ವಿಷಯಗಳಿಗೆ ಅನುಮೋದನೆ ನೀಡಿತು.



22ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ 1500ಕ್ಕೂ ಹೆಚ್ಚೂ ಸಹಕಾರಿಗಳು ಭಾಗವಹಿಸಿದ್ದರು. ಸಾಮಾನ್ಯ ಸಭೆಯ ಅಂಗವಾಗಿ ಸದಸ್ಯ ಸಹಕಾರಿಗಳಿಗೆ ಹೆಚ್ಚಿನ ತಾಂತ್ರಿಕತೆಯನ್ನು ಪರಿಚಯಿಸುವುದಕ್ಕಾಗಿ ತಾಂತ್ರಿಕ ಮೇಳದ ವ್ಯವಸ್ಥೆ ಮಾಡಲಾಗಿತ್ತು. ಹಲವಾರು ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸದಸ್ಯರಿಂದ ಉತ್ಪಾದನೆವಾಗಿರುವ ವಸ್ತುಗಳ ಮಾರಾಟ ಮಳಿಗೆಯನ್ನೂ ಕೂಡ ವ್ಯವಸ್ಥೆ ಮಾಡಲಾಗಿತ್ತು.

- **ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ :** ದಿನಾಂಕ 23.09.2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮಲ್ಲೇಶ್ವರಂ ಬೆಂಗಳೂರು. ಇಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಉಪಸಿಬ್ಬಂದಿಯವರಿಗಾಗಿ "ಕೌಶಲ್ಯ ಅಭಿವೃದ್ಧಿ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪ್ರಾರ್ಥನೆಯನ್ನು ಶ್ರೀಮತಿ ವಿಜಯಶ್ರೀಯವರು ನೆರವೇರಿಸಿದರು. ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನಡೆಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಅಶ್ವಿನ್‌ಗೌಡ, ಐ ಆರ್ ಎಸ್ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೌಶಲ್ಯ ಅಭಿವೃದ್ದಿ ನಿಗಮ ಬೆಂಗಳೂರು ಇವರು ನೆರವೇರಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ ನಂಜನಗೌಡ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು.



ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಮತಿ ಹೆಚ್. ಜಿ. ಶೋಭ, ಸಂಪಾದಕರು ಸ್ತ್ರೀ ಜಾಗೃತಿ ಮಾಸ ಪತ್ರಿಕೆ ಬೆಂಗಳೂರು ಇವರು ಭಾಗವಹಿಸಿದ್ದರು. ತರಬೇತಿಯ ಮೊದಲ ಅವಧಿಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸಹಕಾರ ಪರಿಸರ– ಪ್ರಚಲಿತ ವಿಷಯಗಳು ಸೌಹಾರ್ದ ಸಹಕಾರಿ ಕಾಯ್ದೆ–

ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ವಿಶೇಷತೆಗಳ ಬಗ್ಗೆ ಉಪನ್ಯಾಸವನ್ನು ನೀಡಿದರು. ಎರಡನೇ ಅವಧಿಯಲ್ಲಿ ಶ್ರೀ ವೈ ವಿ ಗುಂಡೂರಾವ್ ಮಾನ್ಯ ಸಹ ಪ್ರದಾನ ವ್ಯವಸ್ಥಾಪಕರು(ನಿ) ನಬಾರ್ಡ್ ಬೆಂಗಳೂರು ಇವರು ಕಛೇರಿ ಆಡಳಿತದಲ್ಲಿ ಸಮಯ ಪಾಲನೆ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು. ನಂತರದ ಕೊನೆಯ ಅವಧಿಯಲ್ಲಿ ಶ್ರೀ ಸುಬ್ರಮಣ್ಯ ಕುಳೇದ ಕಾರ್ಪೋರೇಟ್ ತರಬೇತುದಾರ ಬೆಂಗಳೂರು ಇವರು ವ್ಯಕ್ತಿತ್ವ ವಿಕಸನ, ಸಮೂಹ ಕಾರ್ಯನಿರ್ವಹಣೆ, ಪರಿಣಾಮಕಾರಿ ಸಂವಹನ, ಆಂತರಿಕ ಸಂಬಂಧಗಳ ನಿರ್ವಹಣೆ ಈ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಶ್ರೀ ಎ ಆರ್ ಪ್ರಸನ್ನ ಕುಮಾರ್ ಮಾನ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ನೆರವೇರಿಸಿಕೊಟ್ಟರು. ಈ ತರಬೇತಿಯಲ್ಲಿ ಒಟ್ಟು 35 ಸೌಹಾರ್ದ ಸಹಕಾರಿಗಳಿಂದ 102 ಶಿಬಿರಾರ್ಥಿಗಳು ಭಾಗಿಯಾಗಿದ್ದರು.

- **ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ದಿನಾಂಕ 11 ಮತ್ತು 12 ಅಕ್ಟೋಬರ್ 2023 ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ ಎರಡು ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಶ್ರೀ ಸಿದ್ಧನಗೌಡ ನೀಲಪ್ಪನವರ್, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಆಡಳಿತ ಮತ್ತು ಅಭಿವೃದ್ಧಿ ವಿಭಾಗ, ನಿಬಂಧಕರ ಕಛೇರಿ, ಬೆಂಗಳೂರು. ಇವರು ನೆರವೇರಿಸಿದರು. ತರಬೇತಿ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ವಹಿಸಿಕೊಂಡಿದ್ದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನೆರೆವೇರಿಸಿದರು. ಶ್ರೀ ರಾಜಶೇಖರ ಹೂಗಾರ್ ಇವರು ವಂದನಾರ್ಪಣೆಯನ್ನು ಶ್ರೀ ಪಾಲರಾಜ ಎ. ಇವರು ನಿರೂಪಣೆಯನ್ನು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ 30 ಸೌಹಾರ್ದ ಸಹಕಾರಿಗಳಿಂದ 55 ಪ್ರತಿನಿಧಿಗಳು ಭಾಗವಹಿಸಿದ್ದರು.



- **70ನೇ ಅಖಿಲ ಭಾರತ ಸಹಕಾರ ಸಪ್ತಾಹ :** ಕಲಘಟಗಿ : 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 17 ನವೆಂಬರ್ 2023 ರಂದು ಕಲಘಟಗಿ ಪಟ್ಟಣದ ಹನ್ನೆರಡೆತ್ತಿನ ಮಠದ ಹತ್ತಿರ

ಧಾರವಾಡ ಜಿಲ್ಲೆ ಇಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕಾ ಮಹಾಮಂಡಳ ನಿ., ಬೆಂಗಳೂರು ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ನಿ., ಧಾರವಾಡ, ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಧಾರವಾಡ, ಜಿಲ್ಲಾ ಸಹಕಾರ ಯೂನಿಯನ್ ನಿ., ಧಾರವಾಡ, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ಹಾವೇರಿ, ಪಟ್ಟಣ ಸಹಕಾರ ಬ್ಯಾಂಕುಗಳು, ಪತ್ತಿನ ಸಹಕಾರ ಸಂಘಗಳು, ತಾಲ್ಲೂಕು ಮಾರಾಟ ಸಹಕಾರ ಸಂಘಗಳು, ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಸಂಸ್ಕರಣ ಸಹಕಾರ ಸಂಘಗಳು, ಮಹಿಳಾ ಸಹಕಾರ ಬ್ಯಾಂಕ್/ಸಂಘಗಳು, ಇತರೆ ಸಹಕಾರ ಸಂಘ–ಸಂಸ್ಥೆಗಳು ಸೌಹಾರ್ದ ಸಹಕಾರ ಸಂಘಗಳು ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಗಳು ಇವರುಗಳ ಸಹಯೋಗದೊಂದಿಗೆ ಕಲಘಟಗಿಯಲ್ಲಿ ವಿಜ್ರಂಭಣೆಯಿಂದ ಆಚರಿಸಲಾಯಿತು.

**ಸುಗಮ ಸಂಗೀತ :** ಬೆಳಿಗ್ಗೆ 9.00 ರಿಂದ 10.00 ಗಂಟೆಯವರೆಗೆ ಸುಗಮ ಸಂಗೀತವನ್ನು ಹರ್ಲಾಪುರ ತಂಡದವರಿಂದ ವ್ಯವಸ್ಥೆಮಾಡಲಾಗಿತ್ತು.

**ಸಹಕಾರಿ ಜಾಥಾ :** ಸಪ್ತಾಹವನ್ನು ನಗರದ ಬಸ್ ನಿಲ್ದಾಣದ ಅರಳಿಕಟ್ಟೆಯಿಂದ ಹನ್ನೆರಡೆತ್ತಿನ ಮಠದ ವರೆಗೆ ಅತ್ಯಂತ ವೈಭವಪೂರ್ಣ ಸಹಕಾರಿಗಳ ಜಾತಾದೊಂದಿದೆ ಪ್ರಾರಂಭಿಸಲಾಯಿತು. ಸ್ವಾಗತ ಸಮಿತಿ ಸದಸ್ಯರು ಹಾಗೂ ಮಾನ್ಯ ಕಾರ್ಮಿಕ ಸಚಿವರು ಹಾಗು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಸಹಕಾರ ಧ್ವಜವನ್ನು ಹಾರಾಡಿಸುವ ಮೂಲಕ ಜಾತಾಗೆ ಚಾಲನೆ ನೀಡಿದರು. ಹಲವಾರು ಅಧಿಕಾರಿಗಳು ಮತ್ತು ಸಹಕಾರಿ ಮುಖಂಡರ ನೇತೃತ್ವದಲ್ಲಿ ವಿವಿಧ ವಾದ್ಯ ಹಾಗೂ ಜಾನಪದ ಕಲಾ ತಂಡಗಳೊಂದಿದೆ ಸಹಕಾರಿ ಧ್ವಜಗಳ ಹಾಗೂ ಸಹಕಾರಿ ಕ್ಷೇತ್ರದ ಘೋಷಣೆಗಳೊಂದಿಗೆ ಬೆಳಿಗ್ಗೆ 10–00 ಘಂಟೆಗೆ ಪ್ರಾರಂಭವಾಯಿತು.



**ಉಪನ್ಯಾಸ :** ಬೆಳಿಗ್ಗೆ 10.00 ರಿಂದ 10.45 ರವರೆಗೆ ದಿನದ ವಿಷಯವಾದ "ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರೀಯೆ ಮತ್ತು ಉದಯೋನ್ಮುಖ ವಲಯಗಳು" ಈ ಬಗ್ಗೆ ಶ್ರೀಮತಿ ನಿರ್ಮಲಾ ಗುತ್ತಲ್, ಮಾನ್ಯ ಉಪನ್ಯಾಸಕರು, ಬೆಳಗಾವಿ ಇವರು ಉಪನ್ಯಾಸ ನೀಡಿದರು.

**ಗಣ್ಯರ ಹಾಗು ಸಹಕಾರಿಗಳಿಗೆ ಸ್ವಾಗತ :** ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಹಾಗು ಸಹಕಾರಿ ಇಲಾಖೆಯ ಅಧಿಕಾರಿಗಳನ್ನು ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರನ್ನು ಸಹಕಾರಿಗಳನ್ನು ಪೂರ್ಣಕುಂಭದೊಂದಿಗೆ ಕಾರ್ಯಕ್ರಮಕ್ಕೆ ಸ್ವಾಗತಿಸಲಾಯಿತು.

**ಧ್ವಜಾರೋಹಣ :** ಸಪ್ತವರ್ಣದ ಸಹಕಾರಿ ಧ್ವಜಾರೋಹಣವನ್ನು ಬೆಳಿಗ್ಗೆ 10.45 ಗಂಟೆಗೆ ಎಲ್ಲಾ ಸಹಕಾರಿಗಳ ಸಹಯೋಗದೊಂದಿಗೆ ನೆರವೇರಿಸಲಾಯಿತು.



**ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ :** ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಭೋದಿಸಿದರು.

**ವಸ್ತುಪ್ರದರ್ಶನ ಉದ್ಘಾಟನೆ :** ಮಾನ್ಯ ಕಾರ್ಮಿಕ ಸಚಿವರು ಹಾಗು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಸಂಯುಕ್ತ ಸಹಕಾರಿಯ ಮಳಿಗೆ ಉದ್ಘಾಟನೆಯನ್ನು ಮಾಡುವುದರ ಮೂಲಕ ನೆವೇರಿಸಿದರು.

**ಪುಷ್ಪನಮನ :** ರಾಷ್ಟ್ರಪಿತ ಶ್ರೀ ಮಹಾತ್ಮಾ ಗಾಂಧೀಜಿ, ಸಹಕಾರ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್, ಪ್ರಥಮ ಪ್ರಧಾನಿ ಪಂಡಿತ ಜವಾಹರಲಾಲ ನೆಹರುರವರ ಭಾವಚಿತ್ರಗಳಿಗೆ ಗಣ್ಯರು ಪುಷ್ಪಾರ್ಚನೆಯನ್ನು ಮಾಡುವುದರ ಮೂಲಕ ನಮನ ಸಲ್ಲಿಸಿದರು.

**ಸಂದೇಶ ವಾಚನ :** 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಶುಭಾಷಯಗಳನ್ನು ಕೋರಿ ಮಾನ್ಯ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು, ಉಪರಾಷ್ಟ್ರಪತಿಗಳಾದ ಜಗದೀಪ್ ಧನಕರ್, ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್ ಡಿ ದೇವೇಗೌಡ, ಗೃಹ ಹಾಗು ಸಹಕಾರ ಸಚಿವರಾದ ಶ್ರೀ ಅಮಿತ್ ಷಾ, ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್, ರಾಷ್ಟ್ರೀಯ

ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ದಿಲೀಪ್ ಸಂಘಾನಿ, ಸಭಾಪತಿಗಳಾದ ಬಸವರಾಜ ಹೊರಟ್ಟಿ, ಸಭಾಧ್ಯಕ್ಷರಾದ ಶ್ರೀ ಯು ಟಿ ಖಾದರ್ ಫರೀದ್, ಮುಖ್ಯಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಗಳಾದ ಶ್ರೀ ಡಿ ಕೆ ಶಿವಕುಮಾರ್, ಗೃಹ ಸಚಿವರಾದ ಡಾ. ಜಿ ಪರಮೇಶ್ವರ್, ಸಹಕಾರ ಸಚಿವರಾದ ಶ್ರೀ ಕೆ ಎನ್ ರಾಜಣ್ಣ ಹಾಗು ಮುಂತಾದ ಗಣ್ಯರು ನೀಡಿದ್ದ ಸಂದೇಶ ವಾಚನವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನಡೆಸಿಕೊಟ್ಟರು.

**ಸಭಾ ಕಾರ್ಯಕ್ರಮ**

**ಸ್ವಾಗತ :** ಕಾರ್ಯಕ್ರಮವನ್ನು ಪ್ರಾರ್ಥನೆ, ಸಹಕಾರ ಗೀತೆ, ನಾಡಗೀತೆ, ರೈತಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿ ಗಣ್ಯರನ್ನು ಹಾಗೂ ಸಹಕಾರಿಗಳನ್ನು ಸ್ವಾಗತ ಸಮಿತಿ ಅಧ್ಯಕ್ಷರು ಹಾಗು ಧಾರವಾಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಂಜುನಾಥ ಮುರಳ್ಳಿ ಇವರು ಸ್ವಾಗತ ಮಾಡುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**ಪ್ರಾಸ್ತಾವಿಕ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತ ಸಹಕಾರ ಸಪ್ತಾಹದ ಆಚರಣೆಯಿಂದಾಗಿ ಸಹಕಾರಿಗಳಲ್ಲಿ ಜಾಗೃತಿ ಮೂಡಿಸುವುದು, ಸಾರ್ವಜನಿಕರಿಗೆ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಪ್ರಚಾರ ಮಾಡುವುದು, ವೈಫಲ್ಯಗಳ ಬಗ್ಗೆ ಆತ್ಮಾವಲೋಕನ ಮಾಡುವುದು, ತನ್ಮೂಲಕ ಸಹಕಾರ ಕ್ಷೇತ್ರದ ಗುಣಾತ್ಮಕ ಅಭಿವೃದ್ಧಿಯ ಬಗ್ಗೆ ಚಿಂತನ ಮಂಥನ ಮಾಡುವುದಾಗಿದೆ. ಈ ಬಾರಿಯ ಸಪ್ತಾಹದ ಧ್ಯೇಯ **"5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು"** ಎಂಬುದಾಗಿದೆ. ಇಂದಿನ ದಿನದ ವಿಷಯ **"ಸಹಕಾರ ಸಂಸ್ಥೆಗಳಲ್ಲಿ ಸರಳ ವ್ಯಾಪಾರ ಪ್ರಕ್ರೀಯೆ ಮತ್ತು ಉದಯೋನ್ಮುಖ ವಲಯಗಳು"** ಇವೆರಡು ವಿಷಯಗಳ ಬಗ್ಗೆ ಚಿಂತನ ಮಂಥನ ಮಾಡುವಂತಹ ಗುಣಾತ್ಮಕ ಕಾರ್ಯಕ್ರಮ ಇದಾಗಿದೆ ಎಂದು ತಿಳಿಸುತ್ತ ಸಹಕಾರ ಸಪ್ತಾಹದ ಆಚರಣೆ ಪ್ರತಿವರ್ಷ ರಾಷ್ಟ್ರದಾದ್ಯಂತ ಕಳೆದ 70 ವರ್ಷಗಳಿಂದ ಆಚರಿಸಲಾಗುತ್ತಿದೆ. ದೇಶದಲ್ಲಿ ಸಹಕಾರ ಚಳುವಳಿ ಪ್ರಾರಂಭವಾಗಿ 119 ವರ್ಷ ಕಳೆದಿವೆ. 1904ರಲ್ಲಿ ಪ್ರಾರಂಭವಾಗಿರುವ ಈ ಸಹಕಾರ ಕ್ಷೇತ್ರದಲ್ಲಿ 30 ಕೋಟಿಗೂ ಹೆಚ್ಚು ಸದಸ್ಯತ್ವ ಹೊಂದಿರುವ 8.5 ಲಕ್ಷ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ. ದೇಶದ ಅರ್ಥವ್ಯವಸ್ಥೆಯಲ್ಲಿ ಸಹಕಾರ ಸಂಸ್ಥೆಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಈ ಕ್ಷೇತ್ರ ಬಲಿಷ್ಠವಾಗಿ ಕಾರ್ಯನಿರ್ವಹಿಸಬೇಕು, ಸಾರ್ವಜನಿಕರಿಗೆ, ಸಹಕಾರಿಗಳಿಗೆ ಈ ಕ್ಷೇತ್ರದ ಕಾರ್ಯನಿರ್ವಹಣೆಯ ಬಗ್ಗೆ ತಿಳುವಳಿಕೆ ಬೇಕು. ಸಹಕಾರಿ ಸಂಸ್ಥೆಗಳು ಸಮಾಜದ ಮುಖ್ಯ ವಾಹಿನಿಯಲ್ಲಿ ಕಾರ್ಯನಿರ್ವಹಿಸುವಂತಾಗಬೇಕಾದರೆ ಈ ಕ್ಷೇತ್ರಕ್ಕೆ ಹೆಚ್ಚಿನ ಪ್ರಚಾರ ಅಗತ್ಯ ಎಂಬ ಹಿನ್ನೆಲೆಯಲ್ಲಿ ಸಹಕಾರ ಸಪ್ತಾಹವನ್ನು ರಾಷ್ಟ್ರದಾದ್ಯಂತ ಹಳ್ಳಿಯಿಂದ ದೆಹಲಿಯವರೆಗೆ ಅತ್ಯಂತ ಪರಿಣಾಮಕಾರಿಯಾಗಿ ಆಚರಿಸಲಾಗುತ್ತದೆ.

ಸಪ್ತಾಹದ ಕಾರ್ಯಕ್ರಮದಲ್ಲಿ ಸಹಕಾರಿ ಧ್ವಜಾರೋಹಣ, ಸಹಕಾರಿ ಜಾತಾ, ಸಹಕಾರಿ ವಸ್ತು ಪ್ರದರ್ಶನ, ಸಹಕಾರ ಕ್ಷೇತ್ರದ ವಿಷಯಗಳ ಬಗ್ಗೆ ಉಪನ್ಯಾಸಗಳು, ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹನೀಯರಿಗೆ ಸನ್ಮಾನ, ಹಿರಿಯ ಸಹಕಾರಿಗಳಿಂದ ಮಾರ್ಗದರ್ಶನ ಮುಂತಾದ ಕಾರ್ಯಕ್ರಮಗಳನ್ನು

ಹಮ್ಮಿಕೊಳ್ಳುವುದರ ಮೂಲಕ ಸಹಕಾರಿಗಳಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

ರಾಜ್ಯದಲ್ಲಿ 40,000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು, 2.5 ಕೋಟಿಗೂ ಹೆಚ್ಚು ಸದಸ್ಯತ್ವ ಬಳಗವಿದೆ. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ದಿನಾಂಕ 01ನೇ ಜನವರಿ 2001ರಿಂದ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ಮೂಲಕ ಸ್ಥಾಪಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದಲ್ಲಿ 60 ಲಕ್ಷಕ್ಕೂ ಹೆಚ್ಚು ಸದಸ್ಯತ್ವವನ್ನು ಹೊಂದಿರುವ 6000ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳನ್ನು ಹೊಂದಿದೆ. ರಾಜ್ಯದ ಸೌಹಾರ್ದ ಸಹಕಾರಿ ವ್ಯವಸ್ಥೆ ಇಡೀ ದೇಶಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ನಮ್ಮ ನಿಮ್ಮೆಲ್ಲರ ಹೆಮ್ಮೆಯ ವಿಷಯ ಎಂದು ತಿಳಿಸಿದರು.

**ಉದ್ಘಾಟನೆ :** ಎಲ್ಲಾ ಗಣ್ಯರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆಗೆ ಚಾಲನೆ ನೀಡಿದರು. ಮಾನ್ಯ ಕಾರ್ಮಿಕ ಸಚಿವರು ಹಾಗು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಇವರು ಸಹಕಾರಿ ಸಂಸ್ಥೆಗಳು ದಶಕಗಳಿಂದ ಭಾರತದ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಅವಿಭಾಜ್ಯ ಅಂಗವಾಗಿದೆ. ಭಾರತದ ಸಹಕಾರಿ ವ್ಯವಸ್ಥೆ ಇಡೀ ವಿಶ್ವದಲ್ಲಿಯೇ ದೊಡ್ಡದಾಗಿದೆ ಮತ್ತು ಕೃಷಿ ಸಂಬಂಧಿತ ವಲಯದ ಪ್ರಬಲ ಆಧಾರ ಸ್ತಂಭವಾಗಿದೆ. ಸಹಕಾರ ಸಂಘಕ್ಕೆ ಅವಿಭಾಜಿತ ಧಾರವಾಡ ಜಿಲ್ಲೆಯ ಸಹಕಾರಿ ರಂಗದ ಪಿತಾಮಹಾ ಸಿದ್ದನಗೌಡ ರಾಮನಗೌಡರ ಕೊಡುಗೆ ಅಪಾರವಾಗಿದೆ. ದೇಶದಲ್ಲಿ 8 ಲಕ್ಷ ಸಹಕಾರ ಸಂಸ್ಥೆಗಳಿವೆ. ಸಹಕಾರ ಸಂಸ್ಥೆಗಳು ಬಡತನವನ್ನು ನಿವಾರಿಸಲು, ಉದ್ಯೋಗವನ್ನು ಸೃಷ್ಟಿಸಲು ಮತ್ತು ಸಮಾನ ಆರ್ಥಿಕ ಬೆಳವಣಿಗೆ ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಹಕಾರಿ ಸಂಘಗಳಿಂದ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಿ ಉದ್ಯೋಗವನ್ನು ಹೆಚ್ಚಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.



## ಸ್ವಾಭಿಮಾನಿ ಸಹಕಾರ ಮಾಸ ಪತ್ರಿಕೆಯ ವಿಶೇಷ ಸಂಚಿಕೆ

## ಸಹಕಾರ ವಾರಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ

ಸಂಯುಕ್ತ ಸಹಕಾರಿಯ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಯೆ ವಿಶೇಷ ಸಂಚಿಕೆಯನ್ನು ಹಾಗು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವಾರ ಪತ್ರಿಕೆಯಾದ ಸಹಕಾರ ವಾರ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಮಾನ್ಯ ಕಾರ್ಮಿಕ ಸಚಿವರು ಹಾಗು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್ ಲಾಡ್ ಹಾಗು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ಬಿಡುಗಡೆ ಮಾಡಿದರು.




70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಕಾರ್ಯಕ್ರಮದಲ್ಲಿ 5000 ಸಹಕಾರಿಗಳು ಭಾಗವಹಿಸಿದ್ದರು.

### ಉತ್ತಮ ಸಹಕಾರ ಸಂಸ್ಥೆಗಳಿಗೆ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ

70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಉತ್ತಮ ಸೌಹಾರ್ದ ಸಹಕಾರಿ ಹಾಗೂ ಶ್ರೇಷ್ಠ ಸಹಕಾರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

### ಸನ್ಮಾನಿತ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳು. (ಸೌಹಾರ್ದ ಸಹಕಾರಿ ಕ್ಷೇತ್ರದ ರಾಜ್ಯಮಟ್ಟದ ಪ್ರಶಸ್ತಿ)

1. ಅಕ್ಷಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬಿ.ಹೆಚ್ ರಸ್ತೆ ಕ್ರಾಸ್, ಗೌರಿಬಿದನೂರು, ಚಿಕ್ಕಬಳ್ಳಾಪುರ
2. ಬಸವ ಸೌಹಾರ್ದ ಕ್ರೆಡಿಟ್ ಸಹಕಾರ ಸಂಘ ನಿ., ಬೆಳಗಾವಿ ರೋಡ್, ಬೈಲಹೊಂಗಲ, ಬೆಳಗಾವಿ
3. ರಡ್ಡೇರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಲಿಂಗಸೂಗೂರು, ರಾಯಚೂರು
4. ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಾಳೀಕೋಟೆ, ವಿಜಯಪುರ
5. ಸಹನಾ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಕೆಆರ್ ಪುರಂ, ಹಾಸನ

### ಸೌಹಾರ್ದ ಸಹಕಾರಿ ಕ್ಷೇತ್ರದ ಜಿಲ್ಲಾ ಮಟ್ಟದ ಪ್ರಶಸ್ತಿ

1. ಶಿವಸಂಗಮ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಶ್ರೀ ತೊಂಟದಾರ್ಯ ಕಾಂಪ್ಲೆಕ್ಸ್, ಭೂಮರೆಡ್ಡಿ ಸರ್ಕಲ್ ಹತ್ತಿರ, ಗದಗ
2. ಮಿಲ್ಲತ್ ಸೌಹಾರ್ದ ಸಹಕಾರಿ ನಿ., ಎನ್‌ಎಂ, ಗುಲೇದಕೊಪ್ಪ ಬಿಲ್ಡಿಂಗ್, ಆಝಾದ ರಸ್ತೆ, ಆಳ್ನಾವರ, ಧಾರವಾಡ
3. ಶ್ರೀ ಶ್ರೀ ಗಾಯತ್ರಿ ಸೌಹಾರ್ದ ಸಹಕಾರಿ ನಿ., ಎ ಬ್ಲಾಕ್, 1ನೇ ಕ್ರಾಸ್, ವಿದ್ಯಾನಗರ, ಹಾವೇರಿ

### ಸನ್ಮಾನಿತ ಶ್ರೇಷ್ಠ ಸಹಕಾರಿಗಳು (ಸೌಹಾರ್ದ ಸಹಕಾರಿ ಕ್ಷೇತ್ರದ ರಾಜ್ಯಮಟ್ಟದ ಪ್ರಶಸ್ತಿ)

1. ಶ್ರೀ ಲಿಂಗೇಶ್ ಕುಮಾರ್, ಮಾನ್ಯ ಅಧ್ಯಕ್ಷರು, ನಂದಿನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಚರ್ಚ್ ರಸ್ತೆ, ಚನ್ನಪಟ್ಟಣ ಟೌನ್, ರಾಮನಗರ
2. ಶ್ರೀಮತಿ ಸುನೀತಾ ಅಶೋಕ ಹಲಗೇಕರ್, ಮಾನ್ಯ ಅಧ್ಯಕ್ಷರು, ವಿಮಲ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ
3. ಶ್ರೀ ಬಸವನಯ್ಯ ಗುರುಸಿದ್ದಯ್ಯ ಜವಳಿ, ಮಾನ್ಯ ಉಪಾಧ್ಯಕ್ಷರು, ಶ್ರೀ ಹೇಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ, ಧಾರವಾಡ
4. ಶ್ರೀ ಐಗೋಳ ಚಿದಾನಂದಾ, ಮಾನ್ಯ ನಿರ್ದೇಶಕರು, ಮಲ್ಲಿಗೆ ಸೌಹಾರ್ದ ಪತ್ತಿನ ಸಹಕಾರಿ ನಿ., ವಿಜಯನಗರ, ಹೂವಿನಡಗಲಿ
5. ಶ್ರೀ ಎಂ ಕೆ ಸೋಮಯ್ಯ, ಮಾನ್ಯ ನಿರ್ದೇಶಕರು, ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಪೊನ್ನಂಪೇಟೆ, ಕೊಡಗು




### ಇತರೆ ಸಹಕಾರಿ ಸಂಸ್ಥೆಗಳಿಗೆ ಪ್ರಶಸ್ತಿ ಹಾಗೂ ಸನ್ಮಾನ ನೀಡಿದ ವಿವರ

1. ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಪ್ರತಿ ತಾಲ್ಲೂಕಿಗೆ ಒಂದರಂತೆ ಒಟ್ಟು 17 ಕೃಷಿ ಪತ್ತಿನ ಸಹಕಾರ ಸಂಘಗಳಿಗೆ
2. ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಪ್ರತಿ ತಾಲೂಕಿನಿಂದ ಒಂದರಂತೆ 17 ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ
3. ರಾಜ್ಯದ 22 ಉತ್ತಮ ಪತ್ತಿನ ಸಹಕಾರ ಸಂಘಗಳಿಗೆ

4. ಧಾರವಾಡ, ಗದಗ, ಹಾವೇರಿ ಜಿಲ್ಲೆಗೊಂದರಂತೆ ಗ್ರಾಹಕರ, ಪಟ್ಟಣ ಬ್ಯಾಂಕು, ಟಿಎಪಿಸಿಎಂಎಸ್, ಮಹಿಳಾ ಹಾಗು ಪಿಕಾರ್ಡ್ ಬ್ಯಾಂಕುಗಳಿಗೆ ಸನ್ಮಾನಿಸಲಾಯಿತು.
5. ಶ್ರೀ ನಿಂಬಣ್ಣ ಕಲ್ಲಪ್ಪ ಕುಬ್ಯಾಳ, ನಿರ್ದೇಶಕರು, ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಬಿವೃದ್ಧಿ ಬ್ಯಾಖ್ ಇವರಿಗೆ ವಿಶೇಷ ಶ್ರೇಷ್ಠ ಸಹಕಾರ ಸನ್ಮಾನ ನೀಡಿ ಗೌರವಿಸಲಾಯಿತು.

ಎಲ್ಲ ಸನ್ಮಾನಿತರಿಗೆ ಶಾಲು, ಮೊಮೆಂಟೂ ಹಾಗು ಹಾರ ಹಾಕಿ ಸನ್ಮಾನಿಸಲಾಯಿತು. ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

- **10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ಒಡಿಯೂರು ಸಂಸ್ಥಾನದ ಆಶ್ರಯದಲ್ಲಿ ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಸಹಯೋಗದೊಂದಿಗೆ ದಿನಾಂಕ 07.12.2023 ರಿಂದ 16.12.2023 ನಡೆಸಲಾಗಿದೆ.



ಸಹಕಾರ ಕ್ಷೇತ್ರದಲ್ಲಿ ಸಮಾಜದ ಸಾಮಾನ್ಯ ವ್ಯಕ್ತಿಗಳಿಗೆ ಅವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಹೊಂದಲು ಅವಕಾಶವಿದೆ. ಈ ಕ್ಷೇತ್ರದ ಸಾಧನೆಯನ್ನು, ಕಾರ್ಯಕ್ರಮಗಳನ್ನು ಅವರ ಬಳಿ ತಲುಪಿಸುವ ಕಾರ್ಯ ಸಹಕಾರಿಗಳಿಂದ, ಕಾರ್ಯಕರ್ತರುಗಳಿಂದ, ಅಧಿಕಾರಿಗಳಿಂದ ಪರಿಣಾಮಕಾರಿಯಾಗಿ ಆಗಬೇಕಿದೆ. ಅದಕ್ಕಾಗಿ ಅವರುಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಪರಿಣಿತಿಯನ್ನು ಪಡೆಯುವುದು ಅವಶ್ಯಕ. ಅದಕ್ಕಾಗಿ ಇಂತಹ ತರಬೇತಿಗಳು ಪೂರಕ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಉದ್ಘಾಟನಾ ಕಾರ್ಯಕ್ರಮದಲ್ಲಿ ತಿಳಿಸಿದರು.

ಈ 10 ದಿನಗಳ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 07.12.2023 ರಂದು ಒಡೆಯೂರು ಸಂಸ್ಥಾನದ ಶ್ರೀ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಯವರ ಹಾಗು ಸಾಧ್ವಿ ಮಾತಾನಂದಮಹಿ ಮಾತೆಯವರ ದಿವ್ಯ ಸಾನಿಧ್ಯದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಕಾರ್ಯಕ್ರಮದ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್ ಆರ್

ಸತೀಶ್ಚಂದ್ರ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ಒಡೆಯೂರು ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರೈ, ಇಲಾಖಾ ನಿವೃತ್ತ ಅಪರ ನಿಭಂದಕರಾದ ಶ್ರೀ ಎಚ್. ಎಸ್. ನಾಗರಾಜಯ್ಯ ಹಾಗು ಒಡೆಯೂರು ಸೌಹಾರ್ದ ಸಹಕಾರಿ ಸಂಘ ನಿ ಇದರ ನಿರ್ದೇಶಕರೊಂದಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರುಗಳ ಉಪಸ್ಥಿತಿಯಲ್ಲಿ ನೇರವೇರಿಸಲಾಯಿತು.

**ಕಾರ್ಯಕ್ರಮದ ವಿಶೇಷತೆಗಳೆಂದರೆ,**

ಕಾರ್ಯಕ್ರಮ ಬೆಳಗ್ಗೆ 6.00 ರಿಂದ ಯೋಗ ತರಬೇತಿಯೊಂದಿಗೆ ಪ್ರಾರಂಭವಾಗುತ್ತದೆ, ಯೋಗ ಶಿಬಿರದ ನಂತರ ಪ್ರಾತಃರ್ವಿಧಿಗಳನ್ನು ಮುಗಿಸಿಕೊಂಡು 8.30ಕ್ಕೆ ಉಪಹಾರ ಸ್ವೀಕರಿಸುತ್ತಾರೆ, 9.15ಕ್ಕೆ ತರಬೇತಿ ಸಭಾಂಗಣಕ್ಕೆ ಬರುತ್ತಾರೆ, ತರಬೇತಿ ಸಭಾಂಗಣದಲ್ಲಿ ಮೊದಲಿಗೆ ಪ್ರಾರ್ಥನೆ, ಸಹಕಾರ ಗೀತೆ, ಅತಿಥಿಗಣ್ಯರ ಸ್ವಾಗತ, ಸುವಿಚಾರ, ಮಿಲಿ ಹಾಗು ಇನ್‌ಸ್ಟೆಂಟ್ ಮಿಲಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ನಂತರ 9.30 ರಿಂದ ಸಂಜೆ 5.30ವರೆಗೆ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಯುತ್ತವೆ. ಸಂಜೆ 5.30 ರಿಂದ 8ರ ವರೆಗೆ ಅನೌಪಚಾರಿಕ ಸಭೆಗಳನ್ನು ನಡೆಸಿ ಅವರವರ ಸಹಕಾರಿ ಪರಿಚಯ, ಆಟ ಜೊತೆಗೆ ಪಾಠ ಮತ್ತು ಮನರಂಜನಾ ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ. ಪ್ರತಿಯೊಬ್ಬರು ಒಂದರಲ್ಲೊಂದು ಜವಬ್ದಾರಿ ನಿರ್ವಹಿಸುವ ಕಾರಣದಿಂದ ವೇದಿಕೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗಿರುತ್ತದೆ. ಪ್ರತಿ ಶಿಬಿರದಲ್ಲಿ 4 ಪ್ರಯೋಗಿಕಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಆಡಳಿತ ಮಂಡಳಿ ಸಭೆ ನಡೆಸುವುದು, ವಯಕ್ತಿಕವಾಗಿ ಎಲ್ಲರು ವಾರ್ಷಿಕ ಸಭೆಯ ನೋಟಿಸ್ ಸಿದ್ದಪಡಿಸುವುದು, swot analysis (ಶಕ್ತಿ, ದೌರ್ಬಲ್ಯ, ಅವಕಾಶಗಳು, ಸವಾಲುಗಳು) ಇವುಗಳನ್ನು ಶಿಬಿರಾರ್ಥಿಗಳಿಂದ ಮಾಡಿಸಲಾಗಿರುತ್ತದೆ. ಲೆಕ್ಕಪತ್ರಗಳ ಸಿದ್ದತೆ ಹಾಗು ತಯಾರಿಸುವಿಕೆ ಹಾಗು ನಾಲ್ಕನೆಯದಾಗಿ ಅವರವರ ಸಹಕಾರಿಯ ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸುವುದು.

**ಅಧ್ಯಯನ ಪ್ರವಾಸ**

ಈ ಶಿಬಿರದ ಅಂಗವಾಗಿ ಒಂದು ದಿನದ ಅಧ್ಯಯನ ಪ್ರವಾಸವನ್ನು ವಿವಿಧ ಸಹಕಾರಿ ಸಂಘಗಳಿಗೆ ಬೇಟಿ ನೀಡಲಾಗಿದೆ. ಶ್ರೀ ಸರಸ್ವತಿ ಸೌಹಾರ್ದ ಸಹಕಾರಿ ನಿ, ಪುತ್ತೂರು, ಕ್ಯಾಂಪ್ಕೋ ಚಾಕುಲೇಟ್ ತಯಾರಿಕಾ ಘಟಕ, ಪುತ್ತೂರು, ಜೇನು ವ್ಯವಸಾಯ ಸಾಕಾಣಿಕ ಸಹಕಾರ ಸಂಘ, ಪುತ್ತೂರು, ಇಡ್ಕಿದು ಕೃಷಿ ಪತ್ತಿನ ಸಹಕಾರ ಸಂಘ ಮತ್ತು ಪಾಟರ್ಸ್ ಸಹಕಾರ ಸಂಘಗಳಿಗೆ ಬೇಟಿ ನೀಡಿ ಅಧ್ಯಯನ ಮಾಡಲಾಗಿದೆ.



## ಇವೆಂಟ್ ಮ್ಯಾನೇಜ್‌ಮೇಂಟ್(ಸಭೆ ಹಾಗು ಕಾರ್ಯಕ್ರಮಗಳ ನಿರ್ವಹಣೆ)

ಶಿಬಿರಾರ್ಥಿಗಳಿಗೆ ಸಭೆ ಹಾಗು ಕಾರ್ಯಕ್ರಮಗಳನ್ನು ಏರ್ಪಡಿಸಿ ನಿರ್ವಹಿಸುವ ಹಾಗು ವ್ಯವಸ್ತೆಗಳನ್ನು ಮಾಡಿಕೊಳ್ಳುವ ಕುರಿತು ಈ ಸಂದರ್ಭದಲ್ಲಿ ವಹಿಸಲಾಗಿರುತ್ತದೆ. ಪಾರ್ಥನೆಯಿಂದ ವಂದನಾರ್ಪಣೆಯ ವರೆಗೆ ಎಲ್ಲಾ ಕಾರ್ಯಕ್ರಮಗಳನ್ನು ಶಿಬಿರಾರ್ಥಿಗಳೆ ನಿರ್ವಹಿಸುವ ಕಾರ್ಯವನ್ನು ವಹಿಸಲಾಗಿರುತ್ತದೆ.

## ಪರೀಕ್ಷೆ ಹಾಗು ಮೌಲ್ಯಮಾಪನ

ಕೊನೆಯ ದಿನದಂದು ಪರೀಕೆಯನ್ನು ನಡೆಸಲಾಗಿರುತ್ತದೆ. ಈ ಪರಿಕ್ಷೇಯು ಒಟ್ಟು 100 ಪ್ರಶ್ನೆಗಳು ಮತ್ತು ಪ್ರತಿ ಪ್ರಶ್ನೆಗೆ ಒಂದು ಅಂಕಗಳಂತೆ 100 ಅಂಕಗಳು ಇರುತ್ತದೆ. ಹೆಚ್ಚಿನ ಅಂಕ ಪಡೆದವರಿಗೆ ಪ್ರಥಮ. ದ್ವೀತಿಯ, ತೃತಿಯ ಹಾಗು ಎರಡು ಸಮಾದಾನಕರ ಬಹುಮಾನಗಳನ್ನು ನೀಡಲಾಗುತ್ತದೆ.

ದಿನಾಂಕ 16.12.2023 ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಇದರ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ 10 ದಿನಗಳ ಅವದಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ ಸಮಾರೋಪವನ್ನು ಹಮ್ಮಿಕೊಳ್ಳಲಾಗಿತ್ತು ಸದರಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ಪರಮಪೂಜ್ಯ ಶ್ರೀ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ದತ್ತಾಂಜನೇಯ ಕ್ಷೇತ್ರ, ಗಾಣಗಾಪುರ ಅಂಚೆ, ಒಡಿಯೂರು ಇವರು ವಹಿಸಿದ್ದರು, ಸಾದ್ವೀ ಶ್ರೀ ಶ್ರೀ ಮಾತಾನಂದಮಯೀ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಮ್ ಶ್ರೀ ದತ್ತಾಂಜನೇಯ ಕ್ಷೇತ್ರ,  ಗಾಣಗಾಪುರ ಅಂಚೆ, ಒಡಿಯೂರು ಇವರು ಶಿಬಿರಾರ್ಥಿಳಿಗೆ ಆಶೀರ್ವಚನ ನೀಡಿದರು.  ಕಾರ್ಯಕ್ರಮದಲ್ಲಿ ಶ್ರೀ ಎಸ್. ಆರ್. ಸತೀಶ್ಚಂದ್ರ ಮಾನ್ಯ ಅಧ್ಯಕ್ಷರು, ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಹಾಗೂ ಮಾಜಿ ಅಧ್ಯಕ್ಷರು,  ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ  ನಿ., ಬೆಂಗಳೂರು. ಇವರು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ತೃಪ್ತಿಕರ ಹಾಗೂ ಶಿಸ್ತುಬದ್ಧ ಎಂದು ಸಮಾರೋಪ ಭಾಷಣವನ್ನು ಮಾಡಿದರು.

ಮುಖ್ಯತಿಥಿಗಳಾಗಿ ಶ್ರೀ ಕೆ. ಪಿ. ಸುಚರಿತ ಶೆಟ್ಟಿಯವರು ಮಾನ್ಯ ಅಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟ ನಿ., ದಕ್ಷಿಣ ಕನ್ನಡ ಇವರು ಮಾತನಾಡಿ ಈ ರೀತಿಯ ತರಬೇತಿ ಕಾರ್ಯಕ್ರಮ ಸಹಕಾರಿ ಕ್ಷೇತ್ರದಲ್ಲಿ ವಿರಳ. ಉತ್ತಮ ಸ್ಥಳದ ಆಯ್ಕೆ, ಉತ್ತಮ ವಿಷಯಗಳ ಆಯ್ಕೆ, ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳು, ಹಿರಿಯರ ಮಾರ್ಗದರ್ಶನ, ಇವುಗಳು ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾಗಿವೆ ಎಂದು ತಿಳಿಸಿದರು.

ಶ್ರೀ ಎ. ಸುರೇಶ್ ರೈ ಮಾನ್ಯ ಅಧ್ಯಕ್ಷರು ಒಡಿಯೂರು ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಒಡಿಯೂರು, ಬಂಟ್ವಾಳ–ತಾ, ದಕ್ಷಿಣ ಕನ್ನಡ ಇವರು ಮಾತನಾಡಿ ಸದಸ್ಯರ ಹಾಗೂ ಸಾರ್ವಜನಿಕರ ಸೇವೆ ನಿಮ್ಮ ಮುಖ್ಯ ಗುರಿಯಾಗಿರಲಿ ಎಂದು ತಿಳಿಸಿದರು.

ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಮಾತನಾಡಿ ಸಹಕಾರ ಕ್ಷೇತ್ರದ ಸಾಧನೆ, ಅವಕಾಶಗಳ ಮತ್ತು ಕಾರ್ಯಚಟುವಟಿಕೆಗಳ ಅರಿವು ಸಿಬ್ಬಂದಿಯವರಿಗೆ ಅವಶ್ಯಕ ಎಂದು ತಿಳಿಸಿದರು. ಸಮಾರೋಪ

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಶಿಬಿರಾರ್ಥಿಗಳಿಗೆ 10 ದಿನಗಳ ತರಬೇತಿಯಲ್ಲಿ ಭಾಗವಹಿಸುವಿಕೆಯ ಪ್ರಮಾಣ ಪತ್ರ ನೀಡಲಾಯಿತು.

ತರಬೇತಿಯಲ್ಲಿ ವ್ಯವಸ್ಥೆಗಾಗಿ ತಂಡಗಳನ್ನು ರಚಿಸಲಾಗಿತ್ತು. ಉತ್ತಮ ವ್ಯವಸ್ಥಾಪನ ತಂಡ, ಉತ್ತಮ ಊಟೋಪಚಾರ ತಂಡ, ಉತ್ತಮ ಸಮಯ ಪಾಲನೆ ತಂಡ, ಉತ್ತಮ ಸಾಂಸ್ಕೃತಿಕ ತಂಡ, ಉತ್ತಮ ವರದಿ ತಂಡ, ಉತ್ತಮ ಪ್ರಾರ್ಥನೆ, ಉತ್ತಮ ಸುವಿಚಾರ, ಉತ್ತಮ ಮಿಲಿ, ಉತ್ತಮ ಇನ್ಸ್ಟೆಂಟ್ ಮಿಲಿ, ಉತ್ತಮ ಮಹಿಳಾ ಶಿಬಿರಾರ್ಥಿ, ಉತ್ತಮ ಪುರುಷ ಶಿಬಿರಾರ್ಥಿ ಸದರಿ ತಂಡಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ತಂಡಗಳಿಗೆ ಬಹುಮಾನ ನೀಡಲಾಯಿತು.

10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯಲ್ಲಿ ಇದು 22ನೇ ತಂಡ, ಇದುವರೆಗೆ 21 ಶಿಬಿರಗಳಲ್ಲಿ 1300ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡಿರುತ್ತಾರೆ. ಅವರವರ ಸಹಕಾರಿಗೆ ಉತ್ತಮ ಸಿಬ್ಬಂದಿಯಾಗಿ ಅವರ ವ್ಯಕ್ತಿತ್ವವನ್ನು ವಿಕಸನಗೊಳ್ಳುವುದರ ಜೊತೆಗೆ ಅವರ ಸಹಕಾರಿಗೆ ಆಸ್ತಿಯಾಗಿ ಹೊರಹೊಮ್ಮಿದ್ದಾರೆ. ಕೆಲವರಂತು ಅವರ ಸಹಕಾರಿಯ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ ಇನ್ನೂ ಕೆಲವರು ಒಂದು ಹೆಜ್ಜೆ ಮುಂದುವರೆದು ಅವರದ್ದೆ ಆದ ಸೌಹಾರ್ದ ಸಹಕಾರಿ ಸಂಘಗಳನ್ನು ಹುಟ್ಟು ಹಾಕಿರುವುದು ಸಂಯುಕ್ತ ಸಹಕಾರಿಗೆ ಹೆಮ್ಮೆಯ ವಿಷಯವಾಗಿದೆ.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಮ್ಮಿಕೊಳ್ಳುತ್ತಿರುವ ಈ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವು ಹಲವು ವಿಶೇಷತೆಗಳಿಂದ ಕೂಡಿರುತ್ತದೆ. ಈ ಕಾರ್ಯಕ್ರಮದಲ್ಲಿ ರಾಜ್ಯದ ಹೆಚ್ಚಿನ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳು ಭಾಗವಹಿಸುತ್ತಾ ಬಂದಿರುತ್ತಾರೆ. ಪ್ರಸ್ತುತ 22ನೇ ತಂಡದಲ್ಲಿ 15 ಜಿಲ್ಲೆಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದ್ದಾರೆ ಈ ಕಾರ್ಯಕ್ರಮದಲ್ಲಿ ಒಟ್ಟಾರೆ 24 ವಿಷಯಗಳ ಬಗ್ಗೆ 21 ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಶಿಬಿರಾರ್ಥಿಗಳಿಗೆ ಮಾಹಿತಿಯನ್ನು ನೀಡಿದ್ದಾರೆ, ಈ ಶಿಬಿರವನ್ನು ಇಂತಹ ಪುಣ್ಯ ಕ್ಷೇತ್ರದಲ್ಲಿ ನಡೆಸಲು ಅವಕಾಶ ಮಾಡಿಕೊಟ್ಟ ಸ್ವಾಮಿ ಶ್ರೀ ಶ್ರೀ ದೇವಾನಂದ ಸ್ವಾಮೀಜಿರವರಿಗೆ ಸಾಧ್ವಿ ಮಾತಾನಂದಮಹಿರವರಿಗೆ ಹಾಗು ಸಂಸ್ಥಾನದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ತರಬೇತಿ ಯಶಸ್ವಿಯಾಗಲು ಸಹಕರಿಸಿದ ಎಲ್ಲರಿಗೂ ಸಂಯುಕ್ತ ಸಹಕಾರಿಯು ಕೃತಜ್ಞತೆಗಳನ್ನು ಸಲ್ಲಿಸಿದೆ. 22ನೇ ತಂಡದ 10ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದಲ್ಲಿ 15 ಜಿಲ್ಲೆಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದ್ದರು.

- **ಅಖಿಲ ಭಾರತ ಮೂರನೇ ರಾಷ್ಟ್ರೀಯ ಮಹಿಳಾ ಅಧಿವೇಶನ :** ದಿನಾಂಕ 15 ಮತ್ತು 16 ಡಿಸೆಂಬರ್ 2023ರಂದು ಸಹಕಾರ ಭಾರತಿಯ ವತಿಯಿಂದ ಅಖಿಲ ಭಾರತ ಮೂರನೇ ರಾಷ್ಟ್ರೀಯ ಮಹಿಳಾ ಅಧಿವೇಶನವು ಕಾನ್ಹ ಶಾಂತಿವನಂ, ಚೇಗೂರು, ಭಾಗ್ಯನಗರ (ಹೈದ್ರಾಬಾದ್-ತೆಲಂಗಾಣ) ಇಲ್ಲಿ ಆಯೋಜಿಸಲಾಗಿತ್ತು. "ಹಾರ್ಟ್‌ಫುಲ್‌ನೆಸ್" ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕಮಲೇಶ್ ಅವರು ಈ ಅಧಿವೇಶನವನ್ನು ಉದ್ಘಾಟಿಸಿದರು. ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ದೀನಾನಾಥ್ ಠಾಕೂರ್, ಪ್ರಧಾನ ಕಾರ್ಯದರ್ಶಿಯಾದ ಡಾ. ಉದಯ್ ಜೋಶಿ ಮತ್ತು ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾದ ಶ್ರೀ ಸಂಜಯ್ ಪಚ್ಪೋರ್ ಸೇರಿದಂತೆ ಪ್ರಮುಖ ನಾಯಕರು ಉಪಸ್ಥಿತರಿದ್ದರು. ಈ ಅಧಿವೇಶನದಲ್ಲಿ ದೇಶದಾದ್ಯಂತ ಸಹಕಾರಿ ಸಂಸ್ಥೆಗಳ ಮಹಿಳಾ ನಿರ್ದೇಶಕರು, ಸ್ವಸಹಾಯ ಸಂಘಗಳ

ಪ್ರತಿನಿಧಿಗಳು, ಫೆಡರೇಷನ್‌ಗಳು/ ಅಸೋಸಿಯೇಷನ್‌ಗಳ ಪ್ರತಿನಿಧಿಗಳು ಉಪಸ್ಥಿತರಿದ್ದು, 24 ರಾಜ್ಯಗಳ ಸುಮಾರು 400 ಜಿಲ್ಲೆಗಳಿಂದ 2800ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು. ಕರ್ನಾಟಕ ರಾಜ್ಯದಿಂದ 600ಕ್ಕೂ ಹೆಚ್ಚು ಮಹಿಳಾ ಸಹಕಾರಿಗಳು ಈ ಅಧಿವೇಶನದಲ್ಲಿ ಭಾಗವಹಿಸಿದ್ದರು.




ಸಹಕಾರ ಭಾರತಿಯ ಮಹಿಳಾ ಪ್ರಕೋಷ್ಠ – ಕರ್ನಾಟಕ ಇದರ ಮುಖಸ್ಥರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿರುವ ಶ್ರೀಮತಿ ಶೈಲಜಾ ವಿ. ತಪಲಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಬಿ. ಭಟ್, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ, ಶ್ರೀಮತಿ ಸರಸ್ವತಿ ಎನ್. ರವಿ, ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗಮಣಿ ಬಿ. ಎನ್., ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಶಶಿಕಲಾ ಕಾಶಿನಾಥ್ ಬೆಲ್ದಾಳೆ, ಸೇರಿದಂತೆ ಪ್ರಮುಖರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ವತಿಯಿಂದ ಶ್ರೀಮತಿ ಶೋಭಾ.ಆರ್, ಶ್ರೀಮತಿ ದಿವ್ಯ ಟಿ., ಶ್ರೀಮತಿ ಶೈಲಜಾ ಎಸ್, ಶ್ರೀಮತಿ ರೇಷ್ಮಾ ಪಾಟೀಲ್ ಇವರುಗಳನ್ನು ನಿಯೋಜಿಸಲಾಗಿದ್ದು, ಈ ಅಧಿವೇಶನದಲ್ಲಿ ಭಾಗವಹಿಸಿದ್ದರು.

- **ರಾಜ್ಯದ ಸೌಹಾರ್ದ ಸಹಕಾರಿಗಳ ಸಮಾಲೋಚನಾ ಸಭೆ :** ದಿನಾಂಕ 09.01.2024 ರಂದು ನಗರದ ಮಲ್ಲೇಶ್ವರಂನಲ್ಲಿರುವ ಹವ್ಯಕ ಭವನದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ರಾಜ್ಯ ಮಟ್ಟದ ಸಮಾಲೋಚನಾ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಮಾಲೋಚನಾ ಸಭೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಭಾಗವಹಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದರು. ಈ ಸಮಾಲೋಚನಾ ಸಭೆಯಲ್ಲಿ ಪ್ರಮುಖವಾಗಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ರಾಜ್ಯ ಸರ್ಕಾರ ತಿದ್ದುಪಡಿಯನ್ನು ಮಾಡಲು ರಾಜ್ಯ ಮಟ್ಟದ ಸಮಿತಿಯನ್ನು ಮಾಜಿ ಸಹಕಾರ ಸಚಿವ ಹಾಲಿ ಶಾಸಕರಾದ ಶ್ರೀ ಲಕ್ಷ್ಮಣ ಸವದಿಯವರ ನೇತೃತ್ವದಲ್ಲಿ ರಚಿಸಿದೆ.




ಈ ಸಮಿತಿ ರಾಜ್ಯದ 2 ಸಹಕಾರ ಕಾಯ್ದೆಗಳನ್ನು ಅಧ್ಯಯನ ಮಾಡಿ ಅಗತ್ಯ ತಿದ್ದುಪಡಿಗಳನ್ನು ಸೂಚಿಸಲಿದೆ. ಈ ತಿದ್ದುಪಡಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಭದ್ರತೆ ಹಾಗೂ ಬಲ ನೀಡುವಂತೆ ಇರಬೇಕು ಎಂದು ತಿಳಿಸಿದರು. ರಾಜ್ಯದಲ್ಲಿ ಕಳೆದ 23 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 6200ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣಿಯಾಗಿವೆ. 4500 ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ. 65000ಕ್ಕಿಂತಲ್ಲೂ ಹೆಚ್ಚು ಜನರಿಗೆ ಉದ್ಯೋಗವನ್ನು ನೀಡಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಕಾಲದಲ್ಲಿ ಸಾಲ ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಕೆಲವೇ ಕೆಲವು ಸೌಹಾರ್ದ ಸಹಕಾರಿಗಳು ಠೇವಣಿದಾರರ ಮೊತ್ತವನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿ ಠೇವಣಿದಾದದರಿಗೆ ವಾಪಸ್ಸು ನೀಡುವಲ್ಲಿ ವಿಫಲರಾಗಿರುವ ಕಾರಣ ಸೌಹಾರ್ದ ಸಹಕಾರಿ ಕಾಯ್ದೆ ಅಡಿಯಲ್ಲಿ ಸಂಯುಕ್ತ ಸಹಕಾರಿ ಕ್ರಮವಿಡುತ್ತಿದೆ. ಈ ಪ್ರಚಲಿತ ವಿದ್ಯಮಾನಗಳಿಗೆ ಸೌಹರ್ದ ಸಹಕಾರಿಗಳಿಗೆ ಮಾಹಿತಿ ನೀಡುವ ಧೃಷ್ಠಿಯಿಂದ ಸಂಯುಕ್ತ ಸಹಕಾರಿ ರಾಜ್ಯಮಟ್ಟದ ಸಮಾಲೋಚನಾ ಸಭೆಯನ್ನು ಆಯೋಜನೆ ಮಾಡಿದೆ. ಇದರಲ್ಲಿ ವಂಚನೆಯ ಪ್ರಕರಣಗಳಲ್ಲಿ ಸಂಯುಕ್ತ ಸಹಕಾರಿಯು ಕಟ್ಟುನಿಟ್ಟಿನ ಕ್ರಮ ಜರುಗಿಸುವುದಕ್ಕೆ ಬದ್ಧವಾಗಿದೆ. ಎಂದು ತಿಳಿಸುತ್ತಾ ಸೌಹಾರ್ದ ಸಹಕಾರಿಗಳು ಕಾಯ್ದೆ ನಿಯಮ ಉಲ್ಲಂಘನೆ ಆಗದಂತೆ ಹಣಕಾಸಿನ ಶಿಸ್ತನ್ನು ರೂಢಿಸಿಕೊಂಡು ಕಾರ್ಯನಿರ್ವಹಿಸಲು ಕರೆ ನೀಡಿದರು.

ಈ ಸಭೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಗೆ ಪ್ರತಿನಿಧಿಗಳಿಂದ ಸಲಹೆ ಹಾಗು ಅಭಿಪ್ರಾಯಗಳನ್ನು ಪಡೆದು ಮಾನ್ಯ ಸಹಕಾರ ಸಚಿವರಿಗೆ ಹಾಗು ತಿದ್ದುಪಡಿ ಸಮಿತಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

ಸಂಯುಕ್ತ ಸಹಕಾರಿ ನಿಯೋಗ ಮಾನ್ಯ ಸಹಕಾರ ಸಚಿವರಿಗೆ ಹಾಗೂ ಕಾಯ್ದೆ ತಿದ್ದುಪಡಿ ಸಮಿತಿಗೆ ಮನವಿ ಸಲ್ಲಿಸುವುದೆಂದು ತೀರ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ  ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಆದ ಶ್ರೀ ಜಗದೀಶ್ ಕವಟಗಿಮಠ  ಹಾಲಿ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರ್ ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಹೆಚ್. ವಿ. ರಾಜೀವ್ ರವರು ಮಾತನಾಡಿದರು.



ಮಾಜಿ ಶಾಸಕ ಹಾಗು ಶ್ರೀ ಗುರು ರಾಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಮಸ್ಕಿ, ಇದರ ಅಧ್ಯಕ್ಷರಾದ ಶ್ರೀ ಪ್ರತಾಪ್ ಗೌಡ ಪಾಟೀಲರವರು ಮಾತನಾಡಿ ಮಾನ್ಯ ಸಹಕಾರ ಸಚಿವರು ತುಂಬಾ ಅನುಭವ ಉಳ್ಳವರಾಗಿದ್ದಾರೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಕಾಳಜಿ ಇದೆ, ಸೌಹಾರ್ದ ಸಹಕಾರಿ ಕ್ಷೇತ್ರ ಹಾಗು ಸಂಯುಕ್ತ ಸಹಕಾರಿಯನ್ನು ಬಲಪಡಿಸುವ ನಿಟ್ಟಿನಲ್ಲಿ ತಿದ್ದುಪಡಿಗಳನ್ನು ಮಾಡಲು ಸಹಕರಿಸುತ್ತಾರೆ ಎಂಬ ನಂಬಿಕೆ ಇದೆ ಎಂದು ತಿಳಿಸಿದರು. ಹಲವಾರು ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿ ಈ ಬಗ್ಗೆ ಸಹಕಾರ ಮಂತ್ರಿಗಳಿಗೆ, ಸರ್ಕಾರಕ್ಕೆ ಮನವರಿಕೆ ಮಾಡಿ ವ್ಯವಸ್ಥೆಯನ್ನು ಸುಭದ್ರಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು. ಕಾರ್ಯಕ್ರದ ಸ್ವಾಗತವನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ ರವರು ನೆರವೇರಿಸಿದರು. ನಿರ್ದೇಶಕರಾದ ಶ್ರೀ ಶ್ರೀಧರ್‌ರವರು ವಂದನಾರ್ಪಣೆ ಸಲ್ಲಿಸಿದರು.

ಈ ಸಮಾಲೋಚನಾ ಸಭೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 500ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಭಾಗವಹಿದ್ದರು.

- **ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಆಡಳಿತ ಮಂಡಲಿ ಸದಸ್ಯರುಗಳಿಗಾಗಿ ಎರಡು ದಿನಗಳ "ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 01 ಹಾಗೂ 02ನೇ ಫೆಬ್ರವರಿ 2024ರಂದು ವಿಜಯಶ್ರೀ ಹೆರಿಟೇಜ್ ವಿಲೇಜ್, ಹೊಸಪೇಟೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ ನಂಜನಗೌಡ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನಡೆಸಿಕೊಟ್ಟರು. ಶ್ರೀ ವಿಶ್ವನಾಥ ಚ ಹಿರೇಮಠ, ಮಾನ್ಯ ಅಧ್ಯಕ್ಷರು, ವಿಕಾಸ್ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಲಿ., ಹೊಸಪೇಟೆ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ಈ ಸಂದರ್ಭದಲ್ಲಿ ಮಾತನಾಡಿ ಬ್ಯಾಂಕುಗಳ ಬಲವಾದ ನೀತಿಯನ್ನು ಮತ್ತು ಬ್ಯಾಂಕುಗಳ ಸ್ವಯಂ ನಿಯಂತ್ರಣ ನೀತಿಯ

ಅಗತ್ಯತೆಗಳನ್ನು ತಿಳಿಸಿದರು. ಈ ತರಬೇತಿ ಕಾರ್ಯಕ್ರಮದಲ್ಲಿ 09 ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಿಂದ ಒಟ್ಟು 21 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು/ಮುಖ್ಯಕಾರ್ಯನಿರ್ವಾಹಕರು, ಹಿರಿಯ ಅಧಿಕಾರಿಗಳಿಗಾಗಿ ಎರಡು ದಿನಗಳ "ಉನ್ನತ ಮಟ್ಟದ ತರಬೇತಿ" ಕಾರ್ಯಗಾರವನ್ನು ದಿನಾಂಕ 02 ಹಾಗೂ 03ನೇ ಫೆಬ್ರವರಿ 2024ರಂದು ವಿಜಯಶ್ರೀ ಹೆರಿಟೇಜ್ ವಿಲೇಜ್, ಹೊಸಪೇಟೆ ಇಲ್ಲಿ ಆಯೋಜಿಸಲಾಗಿತ್ತು.



ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಅಧ್ಯಕ್ಷ ರಾದ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ ಹಿರೇಮಠರವರು ವಹಿಸಿಕೊಂಡಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ, ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರವಿಸುಧಾಕರ್ ಮತ್ತು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಲ್.ಎಸ್.ಆನಂದ್

ಭಾಗವಹಿಸಿದ್ದರು. ಈ ತರಬೇತಿ ಕಾರ್ಯಕ್ರಮದಲ್ಲಿ 13 ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಿಂದ ಒಟ್ಟು 32 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಸದಸ್ಯ ತರಬೇತಿ :** ಕೆನ್ನಮೆಟಲ್ ಇಂಡಿಯಾ ಎಂಪ್ಲಾಯಿಸ್ ಸೌಹಾರ್ದ ಕ್ರೆಡಿಟ್ ಸಹಕಾರಿಯ ನಿರ್ದೇಶಕರುಗಳಿಗಾಗಿ ಆಯೋಜಿಸಿರುವ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನು ಸಂಯುಕ್ತ ಸಹಕಾರಿಯ ಸಹಯೋಗದಲ್ಲಿ ದಿನಾಂಕ 25.02.2024 ರಂದು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣ ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು ಸದರಿ ಸೌಹಾರ್ದ ಸಹಕಾರಿಯಿಂದ 12 ನಿರ್ದೇಶಕರು ಭಾಗವಹಿಸಿ ಪ್ರಯೋಜನ ಪಡೆದಿರುತ್ತಾರೆ.



- **ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪ್ರಚಾರ :** ದಿನಾಂಕ 19 ಫೆಬ್ರವರಿ–2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಿರು ಪರಿಚಯ ಹಾಗೂ ಸಾಧನೆಯ ಕುರಿತು ಹಾಗೂ ರಾಜ್ಯ ಮಟ್ಟದಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಚಾರ ನೀಡಲಾಗಿದೆ.



- **ಸದಸ್ಯ ಸಹಕಾರಿಗಳ ಕಾರ್ಯಚಟುವಟಿಕೆಗಳ ಪ್ರಚಾರ :** ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಆಯ್ದ ಸೌಹಾರ್ದ ಸಹಕಾರಿಗಳ ಯಶೋಗಾಥೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮವಿಡುವಂತೆ ಸದರಿ ಸೌಹಾರ್ದ ಸಹಕಾರಿಗಳ ಯಶೋಗಾಥೆಗಳನ್ನು ಸಂಯುಕ್ತ ಸಹಕಾರಿಯಿಂದ ನುರಿತ ತಜ್ಞರಿಂದ ಸಿದ್ಧಪಡಿಸಲು ಕ್ರಮವಿಡಲಾಗಿದೆ. ಸದರಿ ಯಶೋಗಾಥೆಗಳನ್ನು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಸೂಚಿಸಿ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಲಾಗಿದೆ.

- **ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ :** ದಿನಾಂಕ 22.03.2024 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಬೆಂಗಳೂರು ಪ್ರಾಂತ ಸಹಯೋಗದಲ್ಲಿ INSPIRE INCLUSION - ಸ್ಪೂರ್ತಿಯ ಸೇರ್ಪಡೆ ಎಂಬ ಧ್ಯೇಯವಾಕ್ಯದೊಂದಿಗೆ ಕಾರ್ಯಕ್ರಮವನ್ನು ಆಚರಿಸಲಾಯಿತು. ಸದರಿ ತರಬೇತಿಯಲ್ಲಿ 105 ಜನ ಮಹಿಳಾ ಸಹಕಾರಿಗಳು ಭಾಗಹಿಸಿರುತ್ತಾರೆ.



- **ಸನ್ನದು ಲೆಕ್ಕಪರಿಶೋಧಕರ ತರಬೇತಿ :** ದಿನಾಂಕ 23.03.2024 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಸೌಹಾರ್ದ ಸಹಕರಿಗಳ ಲೆಕ್ಕಪರಿಶೋಧನೆ ಮಾಡಿರುವ ಸನ್ನದು ಲೆಕ್ಕಪರಿಶೋಧಕರಿಗಾಗಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಸನ್ನದು ಲೆಕ್ಕಪರಿಶೋಧಕರಿಗೆ ನಮೂನೆ ಹಾಗೂ ಮಾರ್ಗಸೂಚಿಗಳ ಕುರಿತು ಒಂದು ದಿನದ ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಾಗಾರದಲ್ಲಿ 70 ಜನ ಸನ್ನದು ಲೆಕ್ಕಪರಿಶೋಧಕರು ಭಾಗವಹಿಸಿರುತ್ತಾರೆ.




## ಬೆಂಗಳೂರು ಪ್ರಾಂತೀಯ ಕಛೇರಿ

### ❖ ಕ್ಲಸ್ಟರ್ ತರಬೇತಿ:

- ದಿನಾಂಕ **24.05.2023** ರಂದು ಚಳ್ಳಕೆರೆ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಗಾರವನ್ನು ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ, ಚಳ್ಳಕೆರೆ ಇಲ್ಲಿ ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಅಗತ್ಯ ಮಾಹಿತಿ ನೀಡಿದರು. ಕಾರ್ಯಗಾರದಲ್ಲಿ 12 ಸೌಹಾರ್ದ ಸಹಕಾರಿಗಳಿಂದ 13 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.
- ದಿನಾಂಕ **03.06.2023** ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಲೆಕ್ಕಪರಿಶೋಧನೆ, ವರ್ಷಾಂತ್ಯದ ಮಾಹಿತಿ, ಚುನಾವಣೆ, ಕಾಮನ್ ಸಾಫ್ಟ್‌ವೇರ್, ಬಡ್ಡಿದರ ನಿಗದಿಪಡಿಸಿದ ಸುತ್ತೋಲೆ, 2000 ನೋಟಿನ ಹಿಂಪಡೆತ ವಿಷಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಮಾಹಿತಿ ನೀಡಿದರು. 08 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.




- ದಿನಾಂಕ **03.06.2023** ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಲೆಕ್ಕಪರಿಶೋಧನೆ, ವರ್ಷಾಂತ್ಯದ ಮಾಹಿತಿ, ಚುನಾವಣೆ, ಕಾಮನ್ ಸಾಫ್ಟ್‌ವೇರ್, ಬಡ್ಡಿದರ ನಿಗದಿಪಡಿಸಿದ ಸುತ್ತೋಲೆ, 2000 ನೋಟಿನ ಹಿಂಪಡೆತ ವಿಷಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ಈಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ. ಹೆಚ್. ಇವರು ಮಾಹಿತಿ ನೀಡಿದರು. 08 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.
ದಿನಾಂಕ: 23.02.2024 ರಂದು ಉಡುಪಿ ಜಿಲ್ಲೆಯ ಉಡುಪಿ ಮತ್ತು ಕಾಪು ತಾಲ್ಲೂಕಿನಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಜಿಲ್ಲಾ ಕಛೇರಿಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಭಾಗವಹಿಸಿದ್ದರು. ಸಭೆಯಲ್ಲಿ ಸಹಕಾರಿಗಳ ನಷ್ಟಕ್ಕೆ ಕಾರಣ ಮತ್ತು ಆ ನಷ್ಟದಿಂದ ಹೊರಬರಲು ಸಹಕಾರಿಗಳು ಅನುಸರಿಸಬೇಕಾದ ಕ್ರಮಗಳು ಮತ್ತು ಕಾರ್ಯಯೋಜನೆಗಳ ಕುರಿತು ಚರ್ಚಿಸಲಾಯಿತು.



ದಿನಾಂಕ: 27.02.2024ರ ಮಂಗಳವಾರದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪ್ ಸೊ ಲಿ., ಇದರ ಮಂಡ್ಯ ಶಾಖೆಯ ಕಛೇರಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ರವರು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶೇಖರ್. ಪಿ ಮೈಸೂರು ಶಾಖಾ ವ್ಯವಸ್ಥಾಪಕರು, ದಿ ಪಾವಗಡ ಮಲ್ಟಿಪರ್ಪಸ್ ಕೋ– ಆಪ್ ಸೊಸೈಟಿ ಲಿ., ಇವರು “ಸಹಕಾರಿಗಳು ನಷ್ಟದಿಂದ ಹೊರ ಬರುವ ಮಾರ್ಗೋಪಾಯಗಳ ಕುರಿತು” ಮಾರ್ಗದರ್ಶನ ಮಾಡಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ವೆಂಕಟೇಶಗೌಡ ರವರು, ಅಧ್ಯಕ್ಷರು, ಭೈರವ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಮತ್ತು ಎಂ. ಚಂದ್ರಶೇಖರಯ್ಯ, ಅಧಿಕಾರಿ, ಪ್ರಾಂತೀಯ ಕಛೇರಿ, ಮೈಸೂರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ ಮತ್ತು ಪರಿಚಯ ಶ್ರೀ. ಹೆಚ್.ಸಿ ಬಸವರಾಜು, ಸಿಇಓ, ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇವರು ಪ್ರಾರ್ಥನೆಯನ್ನು ಶ್ರೀಮತಿ ಆಶಾ ರವರು, ಸಿಇಓ, ವೀರಮಡಿವಾಳ ಶ್ರೀ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಹಾಗೂ ವಂದನಾರ್ಪಣೆಯನ್ನು ಶ್ರೀಮತಿ ರುಚಿತಾ, ಸಿಇಓ, ಶ್ರೀ ಕೆಂಪೇಗೌಡ ಸೌಹಾರ್ದ ಸಹಕಾರಿ ಸಂಘ ನಿ., ಹಲಗೂರು ಇವರು

ನೆರವೇರಿಸಿದರು. ಮಂಡ್ಯ ಜಿಲ್ಲೆಯ 15 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಸೇರಿ ಒಟ್ಟು 26 ಜನರು ಭಾಗವಹಿಸಿದ್ದರು.




ದಿನಾಂಕ: 28.02.2024ರ ಬುಧವಾರ ದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.," ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಇದರ ಕಛೇರಿ ಸಭಾಂಗಣದಲ್ಲಿ ಆಯೋಜಿಸಲಾಗಿತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ರವರು ಹೇಳಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶೇಖರ್. ಪಿ ಮೈಸೂರು ಶಾಖಾ ವ್ಯವಸ್ಥಾಪಕರು, ದಿ ಪಾವಗಡ ಮಲ್ಟಿಪರ್ಪಸ್ ಕೋ–ಆಪರೇಟೀವ್ ಸೊಸೈಟಿ ಲಿ., ಇವರು "ಸಹಕಾರಿಗಳು ನಷ್ಟದಿಂದ ಹೊರ ಬರುವ ಮಾರ್ಗೋಪಾಯಗಳ ಕುರಿತು" ಮಾರ್ಗದರ್ಶನ ಮಾಡಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ವೀರಪ್ಪ. ವಿ ರವರು, ಅಧ್ಯಕ್ಷರು, ಶ್ರೀ ಮಲೆ ಮಹದೇಶ್ವರ ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ಸಂಘ ನಿ., ಹನೂರು ಮತ್ತು ಎಂ. ಚಂದ್ರಶೇಖರಯ್ಯ, ಅಧಿಕಾರಿ, ಪ್ರಾಂತೀಯ ಕಛೇರಿ, ಮೈಸೂರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ಪರಿಚಯ ಕು. ಅರ್ಪಿತಾ, ಸದಸ್ಯರು, ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ., ಚಾ.ನಗರ ಇವರು ಹಾಗೂ ವಂದನಾರ್ಪಣೆಯನ್ನು ಶ್ರೀ. ಚಂದ್ರಶೇಖರ ಪಾಟೀಲ ರವರು ಇವರು ನೆರವೇರಿಸಿದರು. ಚಾಮರಾಜನಗರ ಜಿಲ್ಲೆಯ 17 ಸೌಹಾರ್ದ ಸಹಕಾರಿಗಳಿಂದ 31 ಪ್ರತಿನಿಧಿಗಳು ಸೇರಿ ಒಟ್ಟು 36 ಜನರು ಭಾಗವಹಿಸಿದ್ದರು.



ದಿನಾಂಕ 01.03.2024ರ ಶುಕ್ರವಾರದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವನ್ನು ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿ ಕಛೇರಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುಧೀರ್ ಮುಖ್ಯ ಕಾರ್ಯನಿರ್ವಾಹಕರು, ಯಡಗೆರೆ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹಾಗೂ ಶ್ರೀ ರಘುನಂದನ್, ಮುಖ್ಯ ಕಾರ್ಯನಿರ್ವಾಹಕರು ಶ್ರೀ ವಾಸವಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಇವರು “ಸಹಕಾರಿಗಳು ನಷ್ಟದಿಂದ ಹೊರ ಬರುವ ಮಾರ್ಗೋಪಾಯಗಳ ಕುರಿತು” ಮಾರ್ಗದರ್ಶನ ಮಾಡಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ಶಿವಕುಮಾರ ಎ ಇವರು ನೆರವೇರಿಸಿದರು. ಚಿಕ್ಕಮಗಳೂರು ಜಿಲ್ಲೆಯ 21 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು.

- **ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ :**





ದಿನಾಂಕ : 13.03.2024 ಬುಧವಾರದಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮೈಸೂರು ಪ್ರಾಂತದ ಸೌಹಾರ್ದ ಸಹಕಾರಿಗಳಿಗಾಗಿ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉಡುಪಿಯ ಡಯಾನ ಹೋಟೆಲ್ ಇಲ್ಲಿ ಆಯೋಜನೆ ಮಾಡಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ಹಾಗೂ ಶ್ರೀಮತಿ ಶೈಲಜಾ ತಪ್ಪಲಿ ಹಾಗೂ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ಇವರು ಭಾಗವಹಿಸಿದ್ದರು. ಪ್ರಥಮ ಅವಧಿಯಲ್ಲಿ ಶ್ರೀಮತಿ ಅರ್ಪಿತಾ ಶೆಟ್ಟಿ ಉಪನ್ಯಾಸಕರು, ಮಣಿಪಾಲ ಶಿಕ್ಷಣ ಸಮೂಹ ಇವರು "ಸ್ಪೂರ್ತಿಯ ಸೇರ್ಪಡೆ" ಎಂಬ ವಿಷಯದ ಕುರಿತು ವಿಷಯವನ್ನು ಮಂಡಿಸಿದರು. ಎರಡನೆ ಅವಧಿಯನ್ನು ಶ್ರೀಮತಿ ಸಂಧ್ಯಾ ಶೆಣೈ ರವರು "ಮಹಿಳಾ ಸಬಲೀಕರಣ" ಎಂಬ ಕುರಿತು ವಿಷಯವನ್ನು ಮಂಡಿಸಿದರು.

ಕಾರ್ಯಕ್ರಮದ ಪ್ರಸ್ತಾವಿಕ ಮತ್ತು ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ರವರು ನೆರವೇರಿಸಿದರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್.ರವರು ವಂದಿಸಿದರು. ಸದರಿ ಸಭೆಯಲ್ಲಿ ಪ್ರಾಂತದ ವಿವಿಧ ಸೌಹಾರ್ದ ಸಹಕಾರಿಗಳಿಂದ 122 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

- **ಸನ್ನದು ಲೆಕ್ಕಪರಿಶೋಧಕರಿಗಾಗಿ ಲೆಕ್ಕಪರಿಶೋಧನೆಯ ಮಾರ್ಗಸೂಚಿಗಳ ಮಾಹಿತಿ ಕಾರ್ಯಾಗಾರ :**



ದಿನಾಂಕ : 14.03.2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.," ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮೈಸೂರು ಪ್ರಾಂತದ ಸನ್ನದು ಲೆಕ್ಕಪರಿಶೋಧಕರಿಗಾಗಿ ಲೆಕ್ಕಪರಿಶೋಧನೆಯ ಮಾರ್ಗಸೂಚಿಗಳ ಮಾಹಿತಿ ಕಾರ್ಯಾಗಾರವನ್ನು ದಕ್ಷಿಣ ಕನ್ನಡ ಜಿಲ್ಲೆಯ ಹೋಟೆಲ್ ಶ್ರೀನಿವಾಸ್ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಲಯನ್ ಸುರೇಶ್ ರೈ ಹಾಗೂ ಸಹಕಾರಿ ಸಂಘಗಳ ಲೆಕ್ಕಪರಿಶೋಧನ ಇಲಾಖೆಯ ಉಪನಿರ್ದೇಶಕರಾದ ಶ್ರೀ ಆನಂದ್ ರವರು ಭಾಗವಹಿಸಿದ್ದರು.

ಪ್ರಥಮ ಅವಧಿಯಲ್ಲಿ "ಲೆಕ್ಕಪರಿಶೋಧನ ವರದಿಯ ನಮೂನೆಗಳು ಹಾಗೂ ಇಲಾಖೆಯ ಸುತ್ತೋಲೆಗಳು" ಎಂಬ ವಿಷಯದ ಕುರಿತು ಶ್ರೀ ಹೆನ್ರಿ ಡಿಸೋಜ ರವರು ವಿಷಯವನ್ನು ಮಂಡಿಸಿದರು. ಎರಡನೆ ಅವಧಿಯಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರಿ ಆದರ್ಶ ಶಣೈ ರವರು "ಕಂಪನಿ ಮತ್ತು ಸಹಕಾರಿ ಸಂಘಗಳ ಲೆಕ್ಕಪರಿಶೋದನೆಯ ವ್ಯತ್ಯಾಸಗಳು" ಕುರಿತ ವಿಷಯವನ್ನು ಮಂಡಿಸಿದರು. ಮೂರನೆಯ ಅವಧಿಯಲ್ಲಿ ಸನ್ನದು ಲೆಕ್ಕಪರಿಶೋದಕರಾದ ಶ್ರೀ ಜೀವನ್‌ಕುಮಾರ್ ಶೆಟ್ಟಿ ರವರು "ಲೆಕ್ಕಪರಿಶೋದನೆಯ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳ" ಕುರಿತ ಚರ್ಚೆಯನ್ನು ನಡೆಸಿದರು.

ಕಾರ್ಯಕ್ರಮದ ಪ್ರಸ್ತಾವಿಕ ಮತ್ತು ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ರವರು ನೆರವೇರಿಸಿದರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್.ರವರು ವಂದಿಸಿದರು. ಸದರಿ ಕಾರ್ಯಾಗಾರದಲ್ಲಿ ಪ್ರಾಂತದಿಂದ ಒಟ್ಟು 63 ಪ್ರತಿನಿಧಿಗಳು ಭಾಗವಹಿಸಿದ್ದರು.

- **ಸಂಪರ್ಕ ಸಭೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ದಿನಾಂಕ 21–7–2023 ರ ಶುಕ್ರವಾರದಂದು ದಕ್ಷಿಣಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿ ಮಾತನಾಡಿದರು.




ಈ ಸಮಯದಲ್ಲಿ ಅತಿಥಿಗಳಾಗಿ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಮತ್ತು ದ.ಕ ಜಿಲ್ಲೆಯ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈ ರವರು ಭಾಗವಹಿಸಿದ್ದರು.

ಈ ಸಂಪರ್ಕ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿ ಸಹಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು. ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಸಹಕಾರಿಗಳಿಗೆ ಸ್ವಾಗತ ಮಾಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ನುಡಿದರು ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ನಿರ್ವಹಿಸಿದರು. ಮಧ್ಯಾಹ್ನದ ಅವಧಿಯಲ್ಲಿ "ಸಾಮಾನ್ಯ ಸಭೆ ನಡೆಸುವ ಕಾರ್ಯವಿಧಾನದ ಕುರಿತು" ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀದರ್ ಸೋಮಯಾಜಿ ರವರು ಮಾಹಿತಿ ನೀಡಿದರು. ದಕ್ಷಿಣಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮತ್ತು ಮುಖ್ಯಕಾರ್ಯನಿರ್ವಾಹಕರು ಸೇರಿ 82 ಸಹಕಾರಿಗಳಿಂದ 106 ಜನರು ಭಾಗವಹಿಸಿದ್ದರು.



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ದಿನಾಂಕ 22–7–2023 ರ ಶನಿವಾರದಂದು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿ ಮಾತನಾಡಿದರು. ಈ ಸಮಯದಲ್ಲಿ ಅತಿಥಿಗಳಾಗಿ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ಮತ್ತು ಉಡುಪಿ ಜಿಲ್ಲೆಯ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಭಾಗವಹಿಸಿದ್ದರು.

ಈ ಸಂಪರ್ಕ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿ ಸಹಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ಸ್ವಾಗತ ಬಾಷಣ ಮಾಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ನುಡಿದರು ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ನಿರ್ವಹಿಸಿದರು. ಮಧ್ಯಾಹ್ನದ ಅವಧಿಯಲ್ಲಿ ಸಾಮಾನ್ಯ ಸಭೆ ನಡೆಸುವ ಕಾರ್ಯವಿಧಾನದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀದರ್ ಸೋಮಯಾಜಿ ರವರು ಮಾಹಿತಿ ನೀಡಿದರು. ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರು ಸೇರಿ 112 ಸಹಕಾರಿಗಳಿಂದ 118 ಜನರು ಭಾಗವಹಿಸಿದ್ದರು.




ದಿನಾಂಕ 01.08.2023 ರಂದು ಮಂಗಳವಾರ, ಬೆಳಿಗ್ಗೆ 10.00 ಗಂಟೆಗೆ, ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಗ್ರೀನ್ ಹೆರಿಟೇಜ್, ದಿವಾನ್ಸ್ ರಸ್ತೆ ಮೈಸೂರು, ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು, ಕೊಡಗು ಹಾಗೂ ಮಂಡ್ಯ ಜಿಲ್ಲೆ

ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್. ಆರ್ ನಾರಾಯಣರಾವ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಡಾ. ಹೆಚ್. ವಿ. ರಾಜೀವ್ ರವರು ಮತ್ತು ಶ್ರೀ ಎಂ.ಕೆ.ಸೋಮಯ್ಯ ರವರು ಉಪಸ್ಥಿತರಿದ್ದರು. ಅತಿಥಿಗಳಾಗಿ ಒಕ್ಕೂಟದ ನಿರ್ದೇಶಕರಾದ ಶ್ರೀ ನವೀನ ಹೆಚ್.ಎನ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎ.ಆರ್ ಶ್ರೀನಾಥ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ನೆರವೇರಿಸಿದರು. ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ ಎಂ ರವರು, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ರವರು ನೆರವೇರಿಸಿದರು.

ಎರಡನೆಯ ಅವಧಿಯಲ್ಲಿ "ನಿರ್ದೇಶಕರ ಹಕ್ಕು ಮತ್ತು ಕರ್ತವ್ಯಗಳು" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶ್ರೀನಾಥ ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು, ಕೊಡಗು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ 76 ಸಹಕಾರಿಗಳಿಂದ 138 ಜನ ಪ್ರತಿನಿಧಿಗಳು ಹಾಜರಾಗಿದ್ದರು.



ದಿನಾಂಕ 02.08.2023 ರಂದು ಬುಧವಾರ, ಬೆಳಿಗ್ಗೆ 10.00 ಗಂಟೆಗೆ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಸನ್ ರೈಸ್, ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಮಗಳೂರು ಸಹಕಾರ ಯೂನಿಯನ್ನ ಮಾನ್ಯ ಅಧ್ಯಕ್ಷರಾದ ಶ್ರೀ ಮಹಾಬಲ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಎಸ್ ಎನ್ ವಿಶ್ವನಾಥ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ತಾವಿಕ ಮತ್ತು ಸ್ವಾಗತ ನುಡಿಯನ್ನು ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ರವರು ನೆರವೇರಿಸಿದರು. ಜಿಲ್ಲಾ ಸಂಯೋಜಕರಾದ ಶ್ರೀ ಶಿವಕುಮಾರ್ ಎ ರವರು, ನಿರೂಪಣೆಯನ್ನು ವಂದನಾರ್ಪಣೆಯನ್ನು ವಾಸವಿ ಸೌಹಾರ್ದ ಮುಖ್ಯಕಾರ್ಯನಿರ್ವಾಹಕರು ನೆರವೇರಿಸಿದರು. ಎರಡನೆಯ ಅವಧಿಯಲ್ಲಿ "ಲೆಕ್ಕಪರಿಶೋಧನೆ ಪ್ರಚಲಿತ ಬದಲಾವಣೆ ಗಳು ಹಾಗೂ

ನೂತನ ನಮೂನೆ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರವಿ ಕುಮಾರ್ ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಚಿಕ್ಕಮಗಳೂರು ಜಿಲ್ಲೆಯ 38 ಸಹಕಾರಿಗಳಿಂದ 85 ಜನ ಪ್ರತಿನಿಧಿಗಳು ಹಾಜರಾಗಿದ್ದರು.



ದಿನಾಂಕ : 02.08.2023 ರಂದು ಬುಧವಾರ, ಬೆಳಿಗ್ಗೆ 10.00 ಗಂಟೆಗೆ, ಹಾಸನ ಜಿಲ್ಲೆ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಜ್ಯೂವೆಲ್ ರಾಕ್, ಬಿ.ಎಂ ರಸ್ತೆ, ಹಾಸನ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಂ. ರೇವಣ್ಣಯ್ಯ, ಅಧ್ಯಕ್ಷರು, ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹಾಸನ ಇವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಶ್ರೀ ಎಂ.ಕೆ ರಮೇಶ್ ರವರು, ಅಧ್ಯಕ್ಷರು, ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಮತ್ತು ಶ್ರೀ ಮಾಧವ ಶೆಣೈ ಅಧ್ಯಕ್ಷರು, ಹಾಸನ ವರ್ತಕರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತ್ಯದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ಮಾಡಿದರು. ಇದೇ ಸಂದರ್ಭದಲ್ಲಿ ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.

"ಸಾಲ ವಸೂಲಾತಿ ಕ್ರಮಗಳು ಮತ್ತು ದಾವಾ ಪಂಚಾಯಿತಿ ನ್ಯಾಯಾಲಯ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಂ. ಮಹಂತಪ್ಪ, ಅಧಿಕಾರಿಗಳು, ಟಾಸ್ಕ್ ಫೋರ್ಸ್ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಹಾಸನ ಜಿಲ್ಲೆಯ 36 ಸಹಕಾರಿಗಳಿಂದ 86 ಜನ ಪ್ರತಿನಿಧಿಗಳು ಮತ್ತು ಇತರೇ 12 ಸೇರಿ ಒಟ್ಟು 98 ಜನರು ಹಾಜರಾಗಿದ್ದರು.

### ➤ 70ನೇ ಅಖಿಲ ಭಾರತ ಸಹಕಾರ ಸಪ್ತಾಹ :

ಚಿಕ್ಕಮಗಳೂರು : ದಿನಾಂಕ 19.11.2023 ರಂದು ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿ ಸಹಕಾರ ಮಹಾಮಂಡಳ, ಡಿಸಿಸಿ ಬ್ಯಾಂಕ್, ಸಹಕಾರ ಯೂನಿಯನ್ ಮತ್ತು ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಸಹಯೋಗದೊಂದಿಗೆ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಜರುಗಿತು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಬಾಳೆಹೊನ್ನೂರು ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ವೆಂಕಟೇಶರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಲ್ಲಿ ಚಿಕ್ಕಮಗಳೂರು ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳು, ಮುಖ್ಯ ಕಾರ್ಯನಿರ್ವಾಹಕರು ಮತ್ತು ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಹಕಾರಿ ಧುರೀಣರು ಸೇರಿದಂತೆ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಅಪೂರ್ವ ಸೌಹಾರ್ದ ಸಹಕಾರಿ ಸಂಘ ನಿಯಮಿತ ಬಾಳೆಹೊನ್ನೂರು ಸಹಕಾರಿಗೆ ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಪುಸ್ತಕ ಮಳಿಗೆಯನ್ನು ಆಯೋಜಿಸಲಾಗಿತ್ತು.





- **ಮುಖ್ಯ ಕಾರ್ಯನಿರ್ವಾಹಕರ ಸಭೆಗಳು :**

ದಿನಾಂಕ: 27.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ, ಮೈಸೂರು ಇದರ ವತಿಯಿಂದ ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ 2023 ಅನ್ನು ಮಹಾಮನೆ ಸಭಾಂಗಣ, ಚಾಮರಾಜನಗರ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಜ್ಯೋತಿ ಅರಸ್ ರವರು, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಚಾಮರಾಜನಗರ ಜಿಲ್ಲೆ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಬಾಲಸುಬ್ರಹ್ಮಣ್ಯ. ಎಸ್, ಸಂಸ್ಥಾಪಕ ಅಧ್ಯಕ್ಷರು, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ಸ್ವಾಮಿ ಮರಳಾಪುರ, ಸಾಮಾಜಿಕ ಕಾರ್ಯಕರ್ತರು, ಮೈಸೂರು ಇವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ಹಾಗೂ ಶ್ರೀ ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರುಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು.




ಮೊದಲನೆ ಅವಧಿಯಲ್ಲಿ ವಿಷಯ "ಶಾಸನಾತ್ಮಕ ಕರ್ತವ್ಯಗಳು ಹಾಗೂ ವಿವಿಧ ಪ್ರಾಧಿಕಾರಿಗಳಿಗೆ ವರದಿ/ ಮಾಹಿತಿ ಸಲ್ಲಿಕೆ" ಕುರಿತು ಶ್ರೀ. ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಗೆ ವಿಷಯ "ಸಹಕಾರಿಗಳಿಗೆ ಅನ್ವಯಿಸುವ ಇತರೇ ಕಾಯ್ದೆಗಳು" ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ರವರು ಉಪನ್ಯಾಸ ನೀಡಿದರು. ಹಾಗೂ ಮೂರನೇ ಅವಧಿಗೆ ವಿಷಯ "ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಹೊಸ ಲೆಕ್ಕ ಪರಿಶೋಧನೆ ವರದಿಯಲ್ಲಿ" ಕಂಡು ಬರುವ ಸಾಮಾನ್ಯ ನ್ಯೂನತೆಗಳ ಕುರಿತು ಶ್ರೀ. ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಶಿವಕುಮಾರ, ಸಿಇಓ, ನವ್ಯ ಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಚಾ.ನಗರ, ಪ್ರಾರ್ಥನೆಯನನ್ನು ಶ್ರೀಮತಿ ಮಹೇಶ್ವರಿ, ಸಿಇಓ ವಿಭ ಸೌಹಾರ್ದ ಸಹಕಾರಿ ನಿ., ಕಾಗಲವಾಡಿ, ಸ್ವಾಗತ & ಪರಿಚಯ: ಶ್ರೀ ಗಂಗಾಧರ, ಅಧ್ಯಕ್ಷರು, ಓಬಳಿ ಸೌಹಾರ್ದ ಸಹಕಾರಿ ಸಂಘ ನಿ., ಕೂಡ್ಲಲೂರು, ವಂದನಾರ್ಪಣೆ: ಶ್ರೀ ನಂಜುಂಡ, ಸಿಇಓ ಜೈ ಭೀಮ್

ಬಿಜಿನೆಸ್ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಇವರು ನಿರ್ವಹಿಸಿದರು. ಚಾಮರಾಜನಗರ ಜಿಲ್ಲೆಯ 22 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸೇರಿ ಒಟ್ಟು 30 ಜನರು ಭಾಗವಹಿಸಿದ್ದರು.




ದಿನಾಂಕ : 27.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ದಿ ಮಾರ್ಕರಾ ಹೋಟೆಲ್ ಮಡಿಕೇರಿ ಯಲ್ಲಿ ಆಯೋಜಿಸಲಾಗಿತ್ತು.

ಸಭೆಯ ಉದ್ಘಾಟನೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಆರ್. ನಾರಾಯಣರಾವ್ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಮ್. ಕೆ ಸೋಮಯ್ಯ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಯ ಒಕ್ಕೂಟದ ನಿರ್ದೇಶಕರಾದ ಶ್ರೀ ಸಿ. ಡಿ ತಿಕಾಳಪ್ಪ ರವರು ಮತ್ತು ಕೊಡಗು ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಡಿಕೇರಿ ಇದರ ಉಪಾಧ್ಯಕ್ಷರಾದ ಶ್ರೀಮತಿ ಎಂ. ಜಿ ಉಷಾ ರವರು ವಹಿಸಿದ್ದರು. ಸಭೆಯಲ್ಲಿ ಪ್ರಾರ್ಥನೆಯನ್ನು ಸೋಮವಾರಪೇಟೆ ಒಕ್ಕಲಿಗರ ಸೌಹಾರ್ದ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀಮತಿ ಲೋಕೇಶ್ವರಿ ಗೋಪಾಲ ರವರು ನೆರವೇರಿಸಿದರು. ನಿರೂಪಣೆ ಸ್ವಾಗತ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಜವಾಹರ ಮುಗ್ಗನವರ ರವರು ನೆರವೇರಿಸಿದರು.

ಮೊದಲನೇ ಅವಧಿಗೆ ವಿಷಯ "ಸಹಕಾರಿಗಳಿಗೆ ಆರ್ಥಿಕ ಸಬಲತೆ ಮಾನದಂಡಗಳು, ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು ವಿವಿಧ ಪ್ರಾಧಿಕಾರಗಳಿಗೆ ವರದಿ ಸಲ್ಲಿಸುವುದು" ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಜವಾಹರ ಮುಗ್ಗನವರ ಉಪನ್ಯಾಸ ನೀಡಿದರು.

ಎರಡನೇ ಅವಧಿಗೆ "ಲೆಕ್ಕ ಪರಿಶೋಧನೆ ವರದಿ ಮತ್ತು ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು ಮತ್ತು ಹಣಕಾಸು ನಿರ್ವಹಣ" ವಿಷಯದ ಕುರಿತು ಸಹಕಾರಿ ಸಂಘಗಳ ನಿವೃತ್ತ ಹಿರಿಯ ಲೆಕ್ಕಪರಿಶೋಧಕರಾದ ಶ್ರೀ ಸಿರಿಲ್ ಮೊರಾಸ್ ರವರು ಉಪನ್ಯಾಸವನ್ನು ನೀಡಿದರು. ಕೊಡಗು ಜಿಲ್ಲೆಯ

13 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 28 ಜನರು ಭಾಗವಹಿಸಿದ್ದರು.



ದಿನಾಂಕ: 28.12.2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ, ಮೈಸೂರು ಇದರ ವತಿಯಿಂದ ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ – 2023 ಅನ್ನು ಮಂಡ್ಯ ಜಿಲ್ಲೆ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣ, ಮಂಡ್ಯ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಅನಿತಾ ಕೆ ರವರು, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ನಾಗರಾಜು. ಎಸ್, ಅಧ್ಯಕ್ಷರು, ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ಪ್ರಕಾಶ ಬಿ.ಪಿ, ಅಧ್ಯಕ್ಷರು, ಮಂಡ್ಯ ಜಿಲ್ಲೆ ಕಾರ್ಯನಿರತ ಪತ್ರಕರ್ತರ ಸಂಘ, ಮಂಡ್ಯ ಇವರು ಹಾಗೂ ಶ್ರೀ ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರುಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಮೊದಲನೇ ಅವಧಿಗೆ ವಿಷಯ "ಶಾಸನಾತ್ಮಕ ಕರ್ತವ್ಯಗಳು ಹಾಗೂ ವಿವಿಧ ಪ್ರಾಧಿಕಾರಿಗಳಿಗೆ ವರದಿ/ ಮಾಹಿತಿ ಸಲ್ಲಿಕೆ ಕುರಿತು" ಶ್ರೀ. ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರು ಉಪನ್ಯಾಸ ನೀಡಿದರು.

ಎರಡನೇ ಅವಧಿಗೆ ವಿಷಯ "ಸಹಕಾರಿಗಳಿಗೆ ಅನ್ವಯಿಸುವ ಇತರೇ ಕಾಯ್ದೆಗಳು" ಕುರಿತು ಶ್ರೀ ದೊರೆಸ್ವಾಮಿ, ಅಧಿಕಾರಿಗಳು, ಬಿಡಿಸಿಸಿ ಬ್ಯಾಂಕ್, ಬೆಂಗಳೂರು ರವರು ಉಪನ್ಯಾಸ ನೀಡಿದರು.

ಹಾಗೂ ಮೂರನೇ ಅವಧಿಗೆ ವಿಷಯ "ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಹೊಸ ಲೆಕ್ಕ ಪರಿಶೋಧನೆ ವರದಿಯಲ್ಲಿ ಕಂಡು ಬರುವ ಸಾಮಾನ್ಯ ನ್ಯೂನತೆಗಳು" ಕುರಿತು ಶ್ರೀ. ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರು ಉಪನ್ಯಾಸ ನೀಡಿದರು. ಮಂಡ್ಯ ಜಿಲ್ಲೆಯ 24 ಸೌಹಾರ್ದ ಸಹಕಾರಿಗಳ ಹಾಗೂ ಇತರೆ ಸೇರಿ ಒಟ್ಟು 39 ಜನರು ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆ: ಶ್ರೀ ಬಸವರಾಜು ಹೆಚ್.ಎಂ, ಸಿಇಓ, ಶಾಮೀಯಾನ ಮಾಲೀಕರ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ, ಪ್ರಾರ್ಥನೆ: ಶ್ರೀಮತಿ ರುಚಿತಾ ಎಂ.ಎಸ್, ಸಿಇಓ ಕೆಂಪೇಗೌಡ ಸೌಹಾರ್ದ ಸಹಕಾರಿ ನಿ., ಹಲಗೂರು, ಸ್ವಾಗತ & ಪರಿಚಯ: ಶ್ರೀ ಅಶಾ, ಸಿಇಓ, ಶ್ರೀ ವೀರಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ, ವಂದನಾರ್ಪಣೆ: ಶ್ರೀಮತಿ ಪೂರ್ಣಿಮಾ, ಸಿಇಓ ಸಮೃದ್ಧಿ ಭಾರತಿ ಸೌಹಾರ್ದ ಸಹಕಾರಿ ಸಂಘ ನಿ., ಭಾರತೀನಗರ ಇವರು ನಿರ್ವಹಿಸಿದರು.



ದಿನಾಂಕ: 28.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಡಯಾನ ಹೋಟೆಲ್ ಉಡುಪಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ವಹಿಸಿದ್ದರು.

ಮೊದಲನೇ ಅವಧಿಯಲ್ಲಿ ವಿಷಯ "ಸೌಹಾರ್ದ ಸಹಕಾರಿಗಳ ಮು.ಕಾ.ನಿಗಳ ಶಾಸನಾತ್ಮಕ ಕರ್ತವ್ಯಗಳು ಮತ್ತು ವಿವಿಧ ಪ್ರಾಧಿಕಾರಗಳಿಗೆ ಮಾಹಿತಿ ಸಲ್ಲಿಕೆ ಹಾಗೂ ಲೆಕ್ಕಪರಿಶೋದನಾ ವರದಿಗಳಲ್ಲಿ ಕಂಡು ಬರುವ ನ್ಯೂನತೆಗಳು" ಸಂಬಂಧಿಸಿದಂತೆ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಉಪನ್ಯಾಸ ನೀಡಿದರು ಎರಡನೇ ಅವಧಿಗೆ ವಿಷಯ "ಸಹಕಾರಿಗಳಿಗೆ ಆರ್ಥಿಕ ಸಬಲತೆ ಮಾನದಂಡಗಳು ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು ಹಾಗು ನೂತನ ಲೆಕ್ಕಪರಿಶೋದನಾ ವರದಿ ನಮೂನೆ" ಕುರಿತು ಸಂಯುಕ್ತ ಸಹಕಾರಿಯ ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ 112 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 125 ಜನರು ಭಾಗವಹಿಸಿದ್ದರು.



ದಿನಾಂಕ: 28.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ವಾಸವಿ ಸೌಹಾರ್ದ ಸಹಕಾರಿ ನಿ., ಚಿಕ್ಕಮಗಳೂರು ನಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಚಿಕ್ಕಮಗಳೂರು ಉಪ ನಿರ್ದೇಶಕರು ಲೆಕ್ಕಪರಿಶೋಧನಾ ಇಲಾಖೆ ಶ್ರೀಮತಿ ಶಶಿರೇಖಾ ರವರು ನೆರವೇರಿಸಿದರು ಸಭೆಯ ಅಧ್ಯಕ್ಷತೆಯನ್ನು ವಾಸವಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರು ಶ್ರೀ ಸತೀಶ್ ರವರು ವಹಿಸಿದ್ದರು.

ಮೊದಲನೇ ಅವಧಿಗೆ ವಿಷಯ "ಸೌಹಾರ್ದ ಸಹಕಾರಿಗಳ ಮು.ಕಾ.ನಿಗಳ ಶಾಸನಾತ್ಮಕ ಕರ್ತವ್ಯಗಳು ಮತ್ತು ವಿವಿಧ ಪ್ರಾಧಿಕಾರಗಳಿಗೆ ಮಾಹಿತಿ ಸಲ್ಲಿಕೆ" ಸಂಬಂಧಿಸಿದಂತೆ ಪ್ರಾಂತಿಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ಉಪನ್ಯಾಸ ನೀಡಿದರು ಎರಡನೇ ಅವಧಿಗೆ ವಿಷಯ "ಸಹಕಾರಿಗಳಿಗೆ ಆರ್ಥಿಕ ಸಬಲತೆ ಮಾನದಂಡಗಳು ಹಾಗೂ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು" ಬಗ್ಗೆ ಮತ್ತು ಮೂರನೇ ಅವಧಿಗೆ ವಿಷಯ "ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬರುವ ನ್ಯೂನ್ಯತೆಗಳು" ಕುರಿತು ಶ್ರೀ ಶಿವಕುಮಾರ್ ಎ ಜಿಲ್ಲಾ ಸಂಯೋಜಕರು ಉಪನ್ಯಾಸ ನೀಡಿದರು. ಚಿಕ್ಕಮಗಳೂರು ಜಿಲ್ಲೆಯ 30 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 30 ಪ್ರತಿನಿಧಿಗಳು ಭಾಗವಹಿಸಿದ್ದರು.




ದಿನಾಂಕ: 29.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ದಕ್ಷಿಣಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀನಿವಾಸ ಹೋಟೆಲ್ ಮಂಗಳೂರು ಯಲ್ಲಿ ಆಯೋಜಿಸಲಾಗಿತ್ತು. ಸಭೆಯ

ಉದ್ಘಾಟನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಸಂಘಗಳ ಉಪನಿಬಂದಕರಾದ ಶ್ರೀ ರಮೇಶ್ ಹೆಚ್.ಎನ್ ರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈ ಭಾಗವಹಿಸಿದ್ದರು

ಮೊದಲನೇ ಅವಧಿಗೆ ವಿಷಯ "ಸೌಹಾರ್ದ ಸಹಕಾರಿಗಳ ಮು.ಕಾ.ನಿಗಳ ಶಾಸನಾತ್ಮಕ ಕರ್ತವ್ಯಗಳು ಮತ್ತು ವಿವಿಧ ಪ್ರಾಧಿಕಾರಗಳಿಗೆ ಮಾಹಿತಿ ಸಲ್ಲಿಕೆ ಹಾಗು ಲೆಕ್ಕಪರಿಶೋದನಾ ವರದಿಗಳ ನ್ಯೂನತೆಗಳು" ಸಂಬಂಧಿಸಿದಂತೆ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಉಪನ್ಯಾಸ ನೀಡಿದರು ಎರಡನೇ ಅವಧಿಗೆ ವಿಷಯ "ಸಹಕಾರಿಗಳಿಗೆ ಆರ್ಥಿಕ ಸಬಲತೆ ಮಾನದಂಡಗಳು ಹಾಗೂ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು ಮತ್ತು ಮೂರನೇ ಅವಧಿಗೆ ವಿಷಯ "ನೂತನ ಲೆಕ್ಕಪರಿಶೋದನಾ ವರದಿ ನಮೂನೆ" ಕುರಿತು ಸಂಯುಕ್ತ ಸಹಕಾರಿಯ ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಉಪನ್ಯಾಸ ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯ 96 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 105 ಜನರು ಭಾಗವಹಿಸಿದ್ದರು.



ದಿನಾಂಕ : 30.12.2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತದ ವತಿಯಿಂದ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ರೋಟರಿ ಅಸೋಸಿಯೇಟ್ಸ್, ರೋಟರಿ ಕ್ಲಬ್, ಮೈಸೂರು ಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿಕಟ ಪೂರ್ವ ಮಾನ್ಯ ನಿರ್ದೇಶಕರು ಹಾಗೂ ಶಿಕ್ಷಣ ಮತ್ತು ಸಲಹಾ ಸಮಿತಿಯ ಸದಸ್ಯರಾದ ಡಾ. ಹೆಚ್.ವಿ ರಾಜೀವ್ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಆರ್. ನಾರಾಯಣರಾವ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಯ ಒಕ್ಕೂಟದ ನಿರ್ದೇಶಕರಾದ ಶ್ರೀ ಹೆಚ್.ಎನ್ ನವೀನ ರವರು ಮತ್ತು ಶ್ರೀ ವೆಂಕಟೇಶ. ವಿ ರವರು ವಹಿಸಿದ್ದರು. ಸಭೆಯಲ್ಲಿ ಪ್ರಾರ್ಥನೆಯನ್ನು ಕೌಸ್ತುಭ ಸೌಹಾರ್ದ ಸಹಕಾರಿ ಸಂಘದ ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಪ್ರಿಯಾ ಎಸ್ ರವರು ನೆರವೇರಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಸ್.ಸಿ. ಭಗೀರಥ

ರವರು ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಜವಾಹರ ಮುಗ್ಗನವರ ರವರು ನೆರವೇರಿಸಿದರು.

ಮೊದಲನೇ ಅವಧಿಗೆ ವಿಷಯ "ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು, ವಿವಿಧ ಪ್ರಾಧಿಕಾರಗಳಿಗೆ ವರದಿ ಸಲ್ಲಿಸುವುದು" ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ರವರು ಉಪನ್ಯಾಸ ನೀಡಿದರು. ಎರಡನೇ ಅವಧಿಗೆ ವಿಷಯ "ಲೆಕ್ಕ ಪರಿಶೋಧನೆ ವರದಿ ಮತ್ತು ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು ಮತ್ತು ಹಣಕಾಸು ನಿರ್ವಹಣೆ" ವಿಷಯದ ಕುರಿತು ಸಹಕಾರಿ ಸಂಘಗಳ ನಿವೃತ್ತ ಹಿರಿಯ ಲೆಕ್ಕಪರಿಶೋಧಕರಾದ ಶ್ರೀ ಸಿರಿಲ್ ಮೊರಾಸ್ ರವರು ಉಪನ್ಯಾಸವನ್ನು ನೀಡಿದರು. ಮೈಸೂರು ಜಿಲ್ಲೆಯ 46 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 53 ಜನರು ಭಾಗವಹಿಸಿದ್ದರು.




ದಿನಾಂಕ: 30.12.2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ, ಮೈಸೂರು ಇದರ ವತಿಯಿಂದ ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ – 2023 ಅನ್ನು ಶ್ರೀ ಬಸವರಾಜೇಂದ್ರ ಶಾಲೆಯ ಸಭಾಂಗಣ, ಹಾಸನ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯ ಹಾಗೂ ಉದ್ಘಾಟನೆಯನ್ನು ಶ್ರೀ ಶ್ರೀ ಸೋಮಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಪುಷ್ಪಗಿರಿ ಮಹಾಸಂಸ್ಥಾನ ಮಠ, ಹಳೇಬೀಡು ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ, ಅಧ್ಯಕ್ಷರು, ಶ್ರೀ ಸಾಯಿರಾಂ ಸೌಹಾರ್ದ ಸಹಕಾರಿ ನಿ., ಹಾಸನ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ಎಸ್.ಹೆಚ್ ರಾಜಶೇಖರ, ಅಧ್ಯಕ್ಷರು, ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘ ನಿ., ಹಾಸನ ಇವರು ಶ್ರೀ ಕುಮಾರಸ್ವಾಮಿ, ಆಡಳಿತಾಧಿಕಾರಿಗಳು, ಶ್ರೀ ಪುಷ್ಪಗಿರಿ ಮಠ, ಹಳೇಬೀಡು ಹಾಗೂ ಶ್ರೀ ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರುಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಮೊದಲನೇ ಅವಧಿಯಲ್ಲಿ ವಿಷಯ "ಶಾಸನಾತ್ಮಕ ಕರ್ತವ್ಯಗಳು ಹಾಗೂ ವಿವಿಧ ಪ್ರಾಧಿಕಾರಗಳಿಗೆ ವರದಿ/ ಮಾಹಿತಿ ಸಲ್ಲಿಕೆ" ಕುರಿತು ಶ್ರೀ. ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು

ಇವರು ಉಪನ್ಯಾಸ ನೀಡಿದರು. ಎರಡನೇ ಅವಧಿಯಲ್ಲಿ ವಿಷಯ "ಸಹಕಾರಿಗಳಿಗೆ ಅನ್ವಯಿಸುವ ಇತರೇ ಕಾಯ್ದೆಗಳು" ಕುರಿತು ಶ್ರೀ ಹರೀಶ್ ಶೆಟ್ಟಿ, ಆಡಿಟ್ ಮತ್ತು ತೆರಿಗೆ ಸಲಹೆಗಾರರು, ಹಾಸನ ಇವರು ಉಪನ್ಯಾಸ ನೀಡಿದರು. ಮೂರನೇ ಅವಧಿಗೆ ವಿಷಯ "ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಹೊಸ ಲೆಕ್ಕ ಪರಿಶೋಧನೆ ವರದಿಯಲ್ಲಿ ಕಂಡು ಬರುವ ಸಾಮಾನ್ಯ ನ್ಯೂನತೆಗಳ" ಕುರಿತು ಶ್ರೀ. ಎಂ. ಚಂದ್ರಶೇಖರಯ್ಯ, ಅಧಿಕಾರಿಗಳು, ಪ್ರಾಂತೀಯ ಕಛೇರಿ, ಮೈಸೂರು ಇವರು ಉಪನ್ಯಾಸ ನೀಡಿದರು. ಹಾಸನ ಜಿಲ್ಲೆಯ 27 ಸೌಹಾರ್ದ ಸಹಕಾರಿಗಳ ಹಾಗೂ ಇತರೆ ಸೇರಿ ಒಟ್ಟು 51 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಮಮತ, ಸಿಇಓ, ಹಾಸನಾಂಬ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಇವರು ನಡೆಸಿದರು. ಪ್ರಾರ್ಥನೆಯನ್ನು ಶ್ರೀಮತಿ ಪುಷ್ಪಾವತಿ, ಸಿಇಓ, ಹಾಸನ ವರ್ತಕರ ಸೌಹಾರ್ದ ಸಹಕಾರಿ ನಿ., ಮಾಡಿದರು.

## ಕಲಬುರಗಿ ಪ್ರಾಂತೀಯ ಕಛೇರಿ

### ❖ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮಗಳು :

- ದಿನಾಂಕ 15.05.2023 ಸೋಮವಾರದಂದು ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನವಿ ಈ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಮಾನವಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನಾ ಪೂರ್ವತಯಾರಿ ಹಾಗೂ ಇತರೇ ಶಾಸನಾತ್ಮಕ ವಿಷಯಗಳ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಮಾನವಿ ತಾಲೂಕಿನ 18 ಸೌಹಾರ್ದ ಸಹಕಾರಿಗಳಿಂದ 20 ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.
- ದಿನಾಂಕ 17.05.2023 ರಂದು ಬುಧವಾರದಂದು ಹೊರನಾಡು ಅನ್ನಪೂರ್ಣೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿ., ಸಹಕಾರಿಯ ತರಬೇತಿಯ ಸಭಾಂಗಣದಲ್ಲಿ ದೇವದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನಾ ಪೂರ್ವ ತಯಾರಿ ಹಾಗೂ ಶಾಸನಾತ್ಮಕ ವಿಷಯಗಳ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ದೇವದುರ್ಗ ತಾಲೂಕಿನ 12 ಸೌಹಾರ್ದ ಸಹಕಾರಿಗಳಿಂದ 15 ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.




- ದಿನಾಂಕ 19.05.2023 ರಂದು ಶುಕ್ರವಾರದಂದು ಮಧ್ಯಾಹ್ನ 3 ಗಂಟೆಗೆ ವಿಜೇತ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಸಿರವಾರ ಈ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಸಿರವಾರ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನಾ ಪೂರ್ವ ತಯಾರಿ ಹಾಗೂ ಶಾಸನಾತ್ಮಕ ವಿಷಯಗಳ ಕುರಿತು ಕ್ಲಸ್ಟರ್

ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಸಿರವಾರ ತಾಲೂಕಿನ 14 ಸೌಹಾರ್ದ ಸಹಕಾರಿಗಳಿಂದ 18 ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

- ದಿನಾಂಕ : 22.05.2023 ರಂದು ಯಾದಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ "ಕ್ಲಸ್ಟರ್ ಮಟ್ಟದ ತರಬೇತಿ"ಯನ್ನು ಮಾತೋಶ್ರೀ ಹೇಮರೆಡ್ಡಿ ಮಲ್ಲಮ್ಮ ಪತ್ತಿನ ಸೌಹಾರ್ದ ಸಹಕಾರಿ ಸಂಘದಲ್ಲಿ ಆಯೋಜಿಸಲಾಗಿತ್ತು. ವರ್ಷಾಂತ್ಯದ ಮಾಹಿತಿ, ಸೌಹಾರ್ದ ಸಹಕಾರಿಗಳಿಗೆ ಠೇವಣಿ ಮತ್ತು ಸಾಲಗಳಿಗೆ ಬಡ್ಡಿದರ ನಿಗದಿಪಡಿಸಿರುವ ಸುತ್ತೋಲೆ, ಚುನಾವಣಾ ಮಾಹಿತಿ ಹಾಗೂ ಲೆಕ್ಕಪರಿಶೋಧನಾ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿರವರು ಮತ್ತು ಶ್ರೀ ಪವನ ಎಮ್.ಆರ್ ರವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 12 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.
- ದಿನಾಂಕ : 23.05.2023 ರಂದು ಸುರಪುರ ತಾಲೂಕಿನ ಸಹಕಾರಿಗಳಿಗೆ ನವಕರ್ನಾಟಕ ಜನಸೇವಾ ಸೌಹಾರ್ದ ಸಹಕಾರಿಯಲ್ಲಿ ಮತ್ತು ಶಹಾಪೂರ ತಾಲೂಕಿನ ಸಹಕಾರಿಗಳಿಗೆ ಶಹಾಪುರ ಸಮೃದ್ಧಿ ಸೌಹಾರ್ದ ಸಹಕಾರಿಯಲ್ಲಿ "ಕ್ಲಸ್ಟರ್ ಮಟ್ಟದ ತರಬೇತಿ"ಯನ್ನು ಆಯೋಜಿಸಲಾಗಿತ್ತು. ವರ್ಷಾಂತ್ಯದ ಮಾಹಿತಿ, ಸೌಹಾರ್ದ ಸಹಕಾರಿಗಳಿಗೆ ಠೇವಣಿ ಮತ್ತು ಸಾಲಗಳಿಗೆ ಬಡ್ಡಿದರ ನಿಗದಿಪಡಿಸಿರುವ ಸುತ್ತೋಲೆ, ಚುನಾವಣಾ ಮಾಹಿತಿ ಹಾಗೂ ಲೆಕ್ಕಪರಿಶೋಧನಾ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿರವರು ಮಾಹಿತಿ ನೀಡಿದರು. ಒಟ್ಟು 30 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.
- ದಿನಾಂಕ 25.05.2023 ರಂದು ಕಲಬುರಗಿ ಪ್ರಾಂತದ ಕಲಬುರಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ವರ್ಷಾಂತ್ಯ ಆರ್ಥಿಕ ಮಾಹಿತಿ, ಚುನಾವಣಾ ಮಾಹಿತಿ, ಲೆಕ್ಕಪರಿಶೋಧನಾ ವರದಿಯ ಕುರಿತು ಕಲಬುರಗಿ ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ ಇವರು ಮಾಹಿತಿ ನೀಡಿದರು, ಸಹಕಾರಿಗಳಿಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಕಾಮನ್ ಸಾಫ್ಟ್‌ವೇರ್, ಅರ್ಹ ಮತದಾರರ ಪಟ್ಟಿಯ ಮಾಹಿತಿ ನೀಡಿದರು. ತರಬೇತಿಯಲ್ಲಿ 28 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 26.05.2023 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿ ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು.

ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ಶಾಸನಾತ್ಮಕ ಮಾಹಿತಿ, ಬಡ್ಡಿದರ ನಿಗದಿಪಡಿಸುವ ಕುರಿತು ಹಾಗೂ ಕಾಮನ್ ಸಾಪ್ಟ್‌ವೆರ್, ಲೆಕ್ಕಪರಿಶೋಧನಾ ಪೂರ್ವ ಸಿದ್ದತೆಯ ಕುರಿತು ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಸಹಕಾರಿಗಳಿಗೆ ಮಾಹಿತಿ ನೀಡಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿದೇಶಕರಾದ ಶ್ರೀ ಜಿ ಶ್ರೀಧರ ರವರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ನಾಗಲಿಂಗಪ್ಪ ಪತ್ತಾರ ರವರು ಸಹಕಾರಿಗಳಿಗೆ ಅಗತ್ಯ ಮಾರ್ಗದರ್ಶನ ಮಾಡಿದರು. ತರಬೇತಿಯಲ್ಲಿ 27 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 17.06.2023 ರಂದು ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಸ್ಕಿ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಅಯೋಜಿಸಲಾಗಿತ್ತು. ತರಬೇತಿಯಲ್ಲಿ ಲೆಕ್ಕಪರಿಶೋಧನಾ ಪೂರ್ವತಯಾರಿಯ ಸಿದ್ದತೆ, ಚುನಾವಣೆ ಇಲಾಖೆಗಳ ಬಗ್ಗೆ, ಕಾಮನ್ ಸಾಪ್ಟವೆರ್ ಹಾಗೂ ಇತರೇ ಶಾಸನಾತ್ಮಕ ವಿಷಯಗಳ ಬಗ್ಗೆ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜರವರು ಮಾಹಿತಿ ನೀಡಿದರು. ತರಬೇತಿಯ ಕೊನೆಯಲ್ಲಿ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವಿರೇಶರವರು ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ನೀಡಿದರು. ಈ ತರಬೇತಿಯಲ್ಲಿ ಮಸ್ಕಿ ತಾಲ್ಲೂಕಿನ 20 ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು.
- ದಿನಾಂಕ 20.06.2023ರಂದು ದೇವದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮತ್ತು ವೇದಿಕೆಯ ಉಪಸ್ಥಿತರಿದ್ದ ಗಣ್ಯರು ನೆರವೆರಿಸಿದರು. ಲೆಕ್ಕಪರಿಶೋಧನಾ ಪೂರ್ವಸಿದ್ದತೆ, ಆಡಳಿತ ಮಂಡಳಿ ಸಭೆ, ವಾರ್ಷಿಕ ಸಾಮಾನ್ಯ ಸಭೆ ಹಾಗೂ ಇತರೇ

ಶಾಸನಾತ್ಮಕ ವಿಷಯಗಳ ಬಗ್ಗೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರು ಸಹಕಾರಿಗಳಿಗೆ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ ದೇವದುರ್ಗ ತಾಲೂಕಿನ 120 ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಗಳು ಭಾಗವಹಿಸಿದ್ದರು.




- ದಿನಾಂಕ 11.10.2023 ರಂದು ಕೊಪ್ಪಳ ಜಿಲ್ಲೆಯ ತಾವರಗೇರಾ ಪಟ್ಟಣದ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ತಾವರಗೇರಾ ಪಟ್ಟಣದ ಸೌಹಾರ್ದ ಸಹಕಾರಿ ಬ್ಯಾಂಕ್ ನಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರಡಿ ಮಾಹಿತಿ ಸಲ್ಲಿಸುವ ಕುರಿತು, ಬಡ್ಡಿದರ ನಿಗದಿಪಡಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಾಗೂ ಈಸಿ ಪೇ ಮಾಡುವ ವಿಧಾನದ ಬಗ್ಗೆ ಮತ್ತು ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 08 ಸಹಕಾರಿಗಳಿಂದ 12 ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 11.10.2023 ರಂದು ಮದ್ಯಾಹ್ನದ ಅವಧಿಯಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಸಾಯಿ ಶಂಕರ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಕುಷ್ಟಗಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರಡಿ ಮಾಹಿತಿ

ಸಲ್ಲಿಸುವ ಕುರಿತು, ಬಡ್ಡಿದರ ನಿಗದಿಪಡಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಾಗೂ ಈಸಿ ಪೇ ಮಾಡುವ ವಿಧಾನದ ಬಗ್ಗೆ ಮತ್ತು ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 29 ಸಹಕಾರಿಗಳಿಂದ 36 ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 14.10.2023 ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕೊಪ್ಪಳ ಜಿಲ್ಲಾ ಜಿಲ್ಲೆಯ ಜಿಲ್ಲಾ ಸಂಪರ್ಕ ಕಛೇರಿ. ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರಡಿ ಮಾಹಿತಿ ಸಲ್ಲಿಸುವ ಕುರಿತು, ಬಡ್ಡಿದರ ನಿಗದಿಪಡಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಾಗೂ ಈಸಿ ಪೆ ಮಾಡುವ ವಿಧಾನದ ಬಗ್ಗೆ ಮತ್ತು ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರರವರು ಉಪಸ್ಥಿತರಿದ್ದರು. ಸದರಿ ತರಬೇತಿಯಲ್ಲಿ 24 ಸಹಕಾರಿಗಳಿಂದ 29 ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 09.10.2023 ರಂದು ಬೆಳಿಗ್ಗೆ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಮತ್ತು ಕುರುಗೋಡು ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜೆ ಹನುಮಂತ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸಿರುಗುಪ್ಪ ತಾಲೂಕಿನ ವಿಷ್ಣುವಿಲಾಸ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನೆ, ಸಾಮಾನ್ಯ

ಸಭೆಯ ಕುರಿತು, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 2 ತಾಲೂಕಿನಿಂದ 22 ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.

- ದಿನಾಂಕ 09.10.2023 ರಂದು ಮಧ್ಯಾಹ್ನದ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಹೊಂಗಿರಣ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜಿ ಹನುಮಂತ ಶೆಟ್ಟಿ ಇವರು ತರಬೇತಿಯ ಅಧ್ಯಕ್ಷತೆ ವಹಿಸಿ ಸಹಕಾರಿಗಳ ಗುಣಮಟ್ಟದ ಬೆಳವಣಿಗೆಯಲ್ಲಿ ನಮ್ಮ ಪಾತ್ರದ ಮಹತ್ವದ ಬಗ್ಗೆ ವಿವರಿಸಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಲೆಕ್ಕಪರಿಶೋಧನೆ, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್‌ರವರು ಸಾಮಾನ್ಯ ಸಭೆಯ ಕುರಿತು, ಮಾಹಿತಿ ನೀಡಿದರು. ತರಬೇತಿಯಲ್ಲಿ 27 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 10.10.2023 ರಂದು ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ಸಂಡೂರುನಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜೆ ಹನುಮಂತ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಲೆಕ್ಕಪರಿಶೋಧನೆ, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮತ್ತು ಸಾಮಾನ್ಯ ಸಭೆಯ ಕುರಿತು, ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 07 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- ಮಧ್ಯಾಹ್ನದ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜೆ ಹನುಮಂತ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕಂಪ್ಲಿ ಸಿಟಿ ಸೌಹಾರ್ದ ಸಹಕಾರಿ ನಿ.,ಕಂಪ್ಲಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆಯ ಕುರಿತು, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 06 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.
- ದಿನಾಂಕ 16.10.2023 ರಂದು ಬೆಳಿಗ್ಗೆ ವಿಜಯನಗರ ಜಿಲ್ಲೆಯ ಕೊಟ್ಟರು ಮತ್ತು ಕೂಡ್ಲಿಗಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಇಂದು ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಮಾನ್ಯ ಅಧ್ಯಕ್ಷರು ಸಹಕಾರಿಗಳ ಪ್ರತಿನಿಧಿಗಳನ್ನು ಉದ್ದೇಶಿಸಿ ಪ್ರಸ್ತುತ ಸಹಕಾರಿ ಕ್ಷೇತ್ರದಲ್ಲಿ ಅನೇಕ ಬದಲಾಣೆಯಾಗುತ್ತಿದ್ದು ರಾಜ್ಯ ಸರ್ಕಾರದಿಂದ ಸಹಕಾರ ಕ್ಷೇತ್ರದ ಬಗ್ಗೆ ಅಧ್ಯಯನ ಮಾಡಿ ವರದಿ ನಿಡಲು ಸಮಿತಿ ನೇಮಕವಾಗಿದ್ದು, ಮುಂದಿನ ದಿನಗಳಲ್ಲಿ ಕಾನೂನುಗಳು ಬಿಗಿಯಾಗುತ್ತವೆ. ಆದ ಕಾರಣ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಾವು ನಮ್ಮ ಮೇಲೆ ಜವಾಬ್ದಾರಿ ಇದ್ದು, ಕಾಯ್ದೆ, ಕಾನೂನುಗಳು ಮೀರಿ ಯಾರು ಕಾರ್ಯನಿರ್ವಹಿಸಬಾರದು. ಸಂಯುಕ್ತ ಸಹಕಾರಿಯ ಸಹಕಾರಿಗಳು ತಪ್ಪು ಮಾಡಿದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುತ್ತೆವೆ ಎಂದು ಮಾಹಿತಿ ನೀಡಿದರು. ನಂತರ ಲೆಕ್ಕಪರಿಶೋಧನೆ, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮತ್ತು ಸಾಮಾನ್ಯ ಸಭೆಯ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 2 ತಾಲೂಕಿನ 20 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 16.10.2023 ರಂದು ಮಧ್ಯಾಹ್ನದ ಅವಧಿಯಲ್ಲಿ ವಿಜಯನಗರ ಜಿಲ್ಲೆಯ ಹರಪ್ಪನಹಳ್ಳಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ವಿರಶೈವ ಪಂಚಮಸಾಲಿ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆಯ ಕುರಿತು, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 25 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 17.10.2023 ರಂದು ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರ ಅಧ್ಯಕ್ಷತೆಯಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜಿಬಿಆರ್ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆಯ ಕುರಿತು, ಕಲಂ 34 ರಡಿ ಸಲ್ಲಿಸುವ ಮಾಹಿತಿ ಮತ್ತು ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ

ರ್‍ಯಾಕಲೆಯವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ ಕೆ.ಆರ್ ರವರು ಮಾಹಿತಿ ನೀಡಿದರು. ತರಬೇತಿಯಲ್ಲಿ 22 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

- ದಿನಾಂಕ 30.09.2023 ರಂದು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಅಭಿವನಶ್ರೀ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ.,ಕನಕಗಿರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರಡಿ ಮಾಹಿತಿ ಸಲ್ಲಿಸುವ ಕುರಿತು, ಬಡ್ಡಿದರ ನಿಗದಿಪಡಿಸುವ ಕುರಿತು, ಚುನಾವಣೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಾಗೂ ಇಸಿಪೆ ಮಾಡುವ ವಿಧಾನದ ಬಗ್ಗೆ ಮತ್ತು ಸಂಯುಕ್ತ ಸಹಕಾರಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 12 ಸಹಕಾರಿಗಳಿಂದ 16 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಬೀದರ್** : ದಿನಾಂಕ 02.06.2023 ರಂದು ಕಲಬುರಗಿ ಪ್ರಾಂತದ ಬೀದರ್ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಹಾಗೂ ಮೂಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಧಾರಿತ ತರಬೇತಿಯನ್ನು ಶಾರದ ರೂಟಶೆಟ್, ಮಾರುತಿ ಶೋರೂಂ ಹತ್ತಿರ, ನೌಬಾದ ಬೀದರನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಪವನಕುಮಾರ, ಒಕ್ಕೂಟದ ನಿರ್ದೇಶಕರಾದ ಶ್ರೀ ಶಿವಬಸಪ್ಪ ಚನ್ನಮಲ್ಲೆ ವಹಿಸಿದ್ದರು. ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಶ್ರೀ ಸೂರ್ಯಕಾಂತ ರ್‍ಯಾಕಲೆ, ಪ್ರಾಂತೀಯ ವ್ಯವಸ್ಥಾಪಕರು ನಡಸಿಕೊಟ್ಟರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ಕೇದರನಾಥ ಶೆಟ್ಟಗಾರ, ಸನ್ನದು ಲೆಕ್ಕಪರಿಶೋಧಕರು, ಸಹಕಾರಿಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಆದಾಯ ತೆರಿಗೆ ಕಾನೂನು ಮತ್ತು ಜಿಎಸ್‍ಟಿ ಕುರಿತು ಮಾಹಿತಿ ನೀಡಿದರು. ಸಾಮನ್ಯ ಸಭೆಯ ಪೂರ್ವ ತಯಾರಿಯ ಕುರಿತು ಸೂರ್ಯಕಾಂತ ರ್‍ಯಾಕಲೆಯವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ 68 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.




- **ಬಳ್ಳಾರಿ ಮತ್ತು ವಿಜಯನಗರ :** ದಿನಾಂಕ 12 & 13 ಜೂನ್ 2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ 2020 ರಿಂದ 2023 ವರೆಗೆ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳಿಗೆ ವಿಶೇಷ ಪ್ರವೇಶ ತರಬೇತಿಯನ್ನು ಮೈರಾಡ ಶಿಡಾರ ಢಾಣಾಪುರ ಹೊಸಪೇಟೆಯಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಶ್ರಿ ಸೂರ್ಯಕಾಂತ ರ್‍ಯಾಕಲೆಯವರು ನಡೆಸಿಕೊಟ್ಟರು. ಮೊದಲನೆ ದಿನದ ಅವಧಿಯಲ್ಲಿ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆಯ ಕುರಿತು ಶ್ರೀ ಸುನಿಲ ಪತ್ತಾರ, ಸಹಾಯಕ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಇವರು ಉಪನ್ಯಾಸ ನೀಡಿದರು.

ಎರಡನೆಯ ಅವಧಿಯಲ್ಲಿ ಆಡಳಿತ ಮಂಡಳಿಯವರ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಶ್ರೀ ಲಿಯಾಕತ್ ಅಲಿ, ನಿವೃತ್ತ ಸಹಾಯಕ ನಿಬಂಧಕರು ಸಹಕಾರ ಇಲಾಖೆ ಇವರು ಉಪನ್ಯಾಸ ನೀಡಿದರು. ಮೂರನೆ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ನಿಯಮಗಳ ಕುರಿತು ಶ್ರೀ ಸೂರ್ಯಕಾಂತ ರ್‍ಯಾಕಲೆ, ಪ್ರಾಂತೀಯ ವ್ಯವಸ್ಥಾಪಕರು ಉಪನ್ಯಾಸ ನೀಡಿದರು. ಎರಡನೆ ದಿನದ ಅವಧಿಯಲ್ಲಿ ಶ್ರೀ ವಿಶ್ವನಾಥ ಹಿರೇಮಠ, ಮಾನ್ಯ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರು ಇವರು ಸಾಮನ್ಯ ಸಭೆ ಆಡಳಿತ ಮಂಡಳಿಯ ಸಭೆಯ ಸಿದ್ದತೆಯ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಬಿ.ಜೆ ಕುಲಕರ್ಣಿಯವರು ಬಡ್ಡಿಯೇತರ ಆದಾಯದ ಮೂಲಗಳ ಬಗ್ಗೆ, ಶ್ರೀ ರವಿಕುಮಾರ ಮುಖ್ಯಕಾಯನಿರ್ವಾಹಕರ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಉಪನ್ಯಾಸ ನೀಡಿದರು. ಈ ತರಬೇತಿ ಕಾರ್ಯಕ್ರಮದಲ್ಲಿ 26 ಸಹಕಾರಿಗಳಿಂದ 53 ಪ್ರತಿನಿಧಿಗಳು ಭಾಗವಹಿಸಿದ್ದರು.






- **ಗಂಗಾವತಿ, ಕಾರಟಗಿ ಮತ್ತು ಕನಕಗಿರಿ :** ದಿನಾಂಕ 13..06.2023 ರಂದು ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ ಮತ್ತು ಕನಕಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯರಿಗೆ ವಿಷಯಾಧಾರಿತ ತರಬೇತಿಯನ್ನು ಹೊಟೆಲ್ ಲಲಿತ ಮಹಲ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೆರವೆರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಹಾಗೂ ಒಕ್ಕೂಟದ ನಿರ್ದೇಶಕರಾದ ಶ್ರೀ ಕುಮಾರೆಪ್ಪ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಶ್ರಿ ಸೂರ್ಯಕಾಂತ ರ‍್ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು ನಡೆಸಿಕೊಟ್ಟರು. ಸಂಪನ್ಮೂಲ ವ್ಯಕ್ತಿಯಾಗಿ ಸಹಾಯಕ ನಿಬಂಧಕರು (ನಿವೃತ್ತ) ಶ್ರಿ ಲಿಯಾಕತ ಅಲಿಯವರು ಚುನಾವಣೆಯ ಪೂರ್ವ ಸಿದ್ದತೆಯ ಬಗ್ಗೆ ಉಪನ್ಯಾಸ ನೀಡಿದರು. ಶ್ರೀಮತಿ ಚಂದ್ರಕಲಾ ಪ್ರಕಾಶ, ಉಪ ಪ್ರಾಂಶುಪಾಲರು ಶ್ರೀ ಕೃಷ್ಣ ದೇವರಾಯ ಶಿಕ್ಷಣ ಸಂಸ್ಥೆ ಇವರು ಮಾನಸಿಕ ಒತ್ತಡ ನಿರ್ವಹಣೆಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 90 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಕಲಬುರಗಿ :** ದಿನಾಂಕ 16.06.2023 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಕರುಗಳಿಗೆ ಮತ್ತು ಸಿಬ್ಬಂದಿಯವರಿಗೆ ವಿಷಯಾಧಾರಿತ ತರಬೇತಿಯನ್ನು ಪ್ರಾಂತೀಯ ಕಛೇರಿ ಕಲಬುರಗಿ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುಭಾಷಚಂದ್ರ ಬರ್ಮಾ, ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಸಂಜೀವ ಮಹಾಜನ, ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರು ಮತ್ತು ಶ್ರೀ ಎಸ್.ಎಸ್. ಪಾಟೀಲ ಮಾನ್ಯ ಅಧ್ಯಕ್ಷರು ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ನಾಗರಾಜ ಮಡಿವಾಳ ಮುಖ್ಯ ಕಾರ್ಯನಿರ್ವಾಹಕರು, ಮಾನವಿ ಪಟ್ಟಣ ಸಹಕಾರಿ ಬ್ಯಾಂಕ್ ಮಾನವಿ, ಶ್ರೀ ಸೂರ್ಯಕಾಂತ ರ್‍ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು ಸಾಮಾನ್ಯ ಸಭೆಯ ಪೂರ್ವಸಿದ್ದತೆಯ ಕುರಿತು ಮಾಹಿತಿ ನೀಡಿದರು.



- **ವಿಷಯಾಧಾರಿತ ತರಬೇತಿ :**

- **ಕೊಪ್ಪಳ :** ದಿನಾಂಕ 17.06.2023 ರಂದು ಶ್ರೀ ವೀರಮಹೇಶ್ವರ ಕ್ಷೇಮಾಭಿವೃದ್ದಿ ಸಂಘದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ

ಕೊಪ್ಪಳ ಜಿಲ್ಲೆಯ ಕೊಪ್ಪಳ, ಯಲಬುರ್ಗಾ, ಕುಕನೂರು ಹಾಗೂ ಕುಷ್ಟಗಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಒಂದು ದಿನದ ವಿಷಯಾಧಾರಿತ ತರಬೇತಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಇಲಾಖೆಯ ಸಹಾಯಕ ನಿಬಂಧಕರಾದ ಶ್ರೀ ಶರಣ ಬಸಪ್ಪರವರು ನಡೆಸಿಕೊಟ್ಟರು. ಈ ಕಾರ್ಯಕ್ರಮದ ವೇದಿಕೆಯಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶಂಕರಗೌಡ ಹಿರೇಗೌಡ, ನಿರ್ದೇಶಕರುಗಳಾದ ಚನ್ನಬಸ್ಸಪ್ಪ ಕಡ್ಡಿಮುಡಿ, ಗುರುರಾಜ್ ಬಿಸಳ್ಳಿ, ಪ್ರಾಣೇಶ ದೇಸಾಯಿ ಮತ್ತು ಉಪನ್ಯಾಸಕರಾದ ಶ್ರೀ ಲಿಯಾಕತ ಅಲಿಯವರು ಉಪಸ್ಥಿತರಿದ್ದರು. ಮೊದಲಿಗೆ ಸ್ವಾಗತವನ್ನು ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ಓಂಕಾರ ಧರಣಿಯವರು ನೆರವೇರಿಸಿದರು. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಸೂರ್ಯಕಾಂತ ರ್‍ಯಾಕಲೆಯವರು ನಿರ್ವಹಿಸಿದರು. ಚುನಾವಣೆ ಪೂರ್ವಸಿದ್ಧತೆಯ ಕುರಿತು ಸಹಕಾರ ಸಂಘಗಳ ನಿಬಂಧಕರಾದ (ನಿವೃತ್ತ) ಲಿಯಾಕತ್ ಅಲಿಯವರು ಉಪನ್ಯಾಸ ನೀಡಿದರು. ಸಾಮನ್ಯ ಸಭೆಯ ಕುರಿತು ಸೂರ್ಯಕಾಂತ ರ್‍ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು, ಮಾನಸಿಕ ಒತ್ತಡ ನಿರ್ವಹಣೆಯ ಕುರಿತು ಡಾ॥ ಕೇದಾರೇಶ್ವರ ಉಪನ್ಯಾಸ ನೀಡಿದರು. ತರಬೇತಿಯಲ್ಲಿ ನಾಲ್ಕು ತಾಲೂಕಿನ 100 ಸೌಹಾರ್ದ ಸಹಕಾರಿಗಳು ತರಬೇತಿಯ ಲಾಭ ಪಡೆದುಕೊಂಡರು.



- **ರಾಯಚೂರು :** ದಿನಾಂಕ 14.06.2023 ರಂದು ರಾಯಚೂರು ಜಿಲ್ಲೆಯ ಲಿಂಗಸೂಗುರು ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ರಡ್ಡೆರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಕಛೇರಿಯ ಆವರಣದಲ್ಲಿ ಲೆಕ್ಕಪರಿಶೋಧನಾ ಪೂರ್ವಸಿದ್ಧತೆ ಹಾಗೂ ಶಾಸನಾತ್ಮಕ ವಿಷಯಗಳ ಬಗ್ಗೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಲಿಂಗಸೂಗುರು ತಾಲೂಕಿನ 18 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು.
- **ಸಿಂಧನೂರು, ಮಾನವಿ, ಮಸ್ಕಿ :** ದಿನಾಂಕ 25.07.2023 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ಸಿಂಧನೂರು, ಮಾನವಿ, ಮಸ್ಕಿ ಹಾಗೂ ಲಿಂಗಸೂಗುರು ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಗೋಸ್ವಾಮಿ ಕಲ್ಯಾಣ ಮಂಟಪ, ಗಂಗಾವತಿ ರಸ್ತೆ, ಸಿಂಧನೂರುನಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ವಹಿಸಿದ್ದರು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್

ತಿಮ್ಮಯ್ಯಶೆಟ್ಟಿಯವರು ಮತ್ತು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳು ಉದ್ಘಾಟಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಬಸಣ್ಣ ರಾಠೋಡ, ಮಾನ್ಯ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಸಿಂಧನೂರು, ಶ್ರೀ ಬಿ ರಾಜಶೇಖರ ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರು ಕ.ರಾ.ಸೌ.ಸಂ.ಸಸನಿ., ಬೆಂಗಳೂರು ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆ, ಸ್ವಾಗತ, ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜರವರು, ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನೆರವೇರಿಸಿದರು. ತರಬೇತಿಯ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಸಣ್ಣ ರಾಠೋಡ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಇವರು ಲೆಕ್ಕಪರಿಶೋಧನಾ ನೂತನ ಮಾದರಿಯ ಕುರಿತು, ಶ್ರೀ ಮಹೇಶ ಮಾಶಾಳ ಕಾರ್ಪೋರೆಟ್ ಟ್ರೇನರ್ ಇವರು ಸಹಕಾರ ಸಂಸ್ಥೆಗಳ ಅಭಿವೃದ್ಧೀಯಲ್ಲಿ ಆಡಳಿತ ಮಂಡಳಿ ಸದಸ್ಯರ ಹಾಗೂ ಸಿಬ್ಬಂದಿಗಳ ಪಾತ್ರ ಮತ್ತು ವೃತ್ತಿ ಜೀವನ ಹಾಗೂ ವೈಯಕ್ತಿಕ ನಿರ್ವಹಣೆಯ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು. ವಾರ್ಷಿಕ ಸಾಮಾನ್ಯ ಸಭೆಯ ಪೂರ್ವಸಿದ್ದತೆ ಬಗ್ಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯರು ಮಾಹಿತಿ ನೀಡಿದರು. 4 ತಾಲೂಕುಗಳಿಂದ 270 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಸಿರವಾರ, ದೇವದುರ್ಗ :** ದಿನಾಂಕ 26.07.2023 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ರಾಯಚೂರು, ಸಿರವಾರ, ದೇವದುರ್ಗ ತಾಲೂಕುಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಕೃಷಿ ವಿಶ್ವವಿದ್ಯಾಲಯ ಕೆ.ವಿ.ಕೆ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ವಹಿಸಿದ್ದರು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿ ಯವರು ಮತ್ತು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳು ಉದ್ಘಾಟಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಬಸವ ಭಾರತ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೆಂಕಟೇಶ ಜಡಲಾರವರು ನೆರವೇರಿಸಿದರು. ಸ್ವಾಗತ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜರವರು ಮಾಡಿದರು. ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನೆರವೇರಿಸಿದರು ವಾರ್ಷಿಕ ಸಾಮಾನ್ಯ ಸಭೆಯ ಪೂರ್ವಸಿದ್ದತೆ ಬಗ್ಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ

ಶ್ರೀ ಸೂರ್ಯಕಾಂತ ರ್ಯಾಕಲೆಯವರು ಮಾಹಿತಿ ನೀಡಿದರು. ಶ್ರೀ ಮಹೇಶ ಮಾಶಾಳ ಕಾರ್ಪೋರೇಟ್ ತರಬೇತುದಾರರು, ಇವರು ಸಹಕಾರ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿ ಸದಸ್ಯರ ಹಾಗೂ ಸಿಬ್ಬಂದಿಗಳ ಪಾತ್ರ ಮತ್ತು ವೃತ್ತಿ ಜೀವನ ಹಾಗೂ ವೈಯಕ್ತಿಕ ನಿರ್ವಹಣೆಯ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು. 3 ತಾಲೂಕುಗಳಿಂದ 120 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಯಾದಗಿರಿ :** ದಿನಾಂಕ 26.09.2023 ರಂದು ಬೆಳಗ್ಗೆ 10:30 ಗಂಟೆಗೆ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ “ವಿಷಯಾಧಾರಿತ ತರಬೇತಿ” ಕಾರ್ಯಕ್ರಮವನ್ನು ಹೋಟಲ್ ಜಯಾ, ಹಳೆ ಬಸ್ ನಿಲ್ದಾಣ, ಶಹಾಪುರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಗುಲಬರ್ಗಾ ಮಹಿಳಾ ಸೌಹಾರ್ದ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶಶಿಕಲಾ ಪಾಟೀಲ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಮಾನ್ಯ ಹಿರಿಯ ಲೆಕ್ಕ ಪರಿಶೋಧಕರಾದ ಶ್ರೀ ಶರಣಬಸವ ಎಮ್ ಮತ್ತು ಕಲಬುರಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್ಯಾಕಲೆ ರವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ “ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಮತ್ತು ಆರ್ಥಿಕ ತ:ಖ್ತೆಗಳ ವಿಶ್ಲೇಷಣೆಯ ಕುರಿತು” ಸಂಪನ್ಮೂಲ ವ್ಯಕ್ತಿಗಳು ಮತ್ತು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಹಿರಿಯ ಲೆಕ್ಕಪರಿಶೋಧಕರಾದ ಶ್ರೀ ಶರಣಬಸವ ಎಮ್ ರವರು ಉಪನ್ಯಾಸವನ್ನು ನೆರವೇರಿಸಿದರು. ಮಧ್ಯಾಹದ ಅವಧಿಯಲ್ಲಿ “ಸೌಹಾರ್ದ ಸಹಕಾರಿಯ ಕಾಯ್ದೆಯ ಕುರಿತು” ಕಲಬುರಗಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್ಯಾಕಲೆ ರವರು ಉಪನ್ಯಾಸವನ್ನು ನೆರವೇರಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್ಯಾಕಲೆ ರವರು ನೆರವೇರಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಯಾದಗಿರಿ ಜಿಲ್ಲಾ ಸಂಯೋಜಕರಾದ ಶ್ರೀ ಪವನ.ಎಮ್.ಆರ್ ನೆರವೇರಿಸಿದರು. ಒಟ್ಟು 32 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.




❖ **ಸಂಪರ್ಕ ಸಭೆ :**

➢ **ರಾಯಚೂರು :** ದಿನಾಂಕ 14.08.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಗೋಸ್ವಾಮಿ ಕಲ್ಯಾಣ ಮಂಟಪ. ಗಂಗಾವತಿ ರಸ್ತೆ, ಸಿಂಧನೂರುನಲ್ಲಿ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿ, ಮಾತಾನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಜಿ. ಶ್ರೀಧರ, ಶ್ರೀ ಹೆಚ್ ಜಿ ಹನುಮಂತ ಶೆಟ್ಟಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ರಾಜಶೇಖರರವರು ಉಪಸ್ಥಿತರಿದ್ದರು. ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನೆರವೇರಿಸಿದರು. ನಿರೂಪಣೆಯನ್ನು ಶ್ರೀ ನಟರಾಜರವರು ನಿರ್ವಹಿಸಿದರು. ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ 300 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಕೊಪ್ಪಳ :** ದಿನಾಂಕ 14.08.2023 ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು ವಿಷಯಾಧಾರಿತ ತರಬೇತಿ ಮತ್ತು ಸಂಪರ್ಕ ಸಭೆಯನ್ನು ಸಿ.ಬಿ.ಎಸ್ ಕಲ್ಯಾಣ ಮಂಟಪ ಸಿ.ಬಿ.ಎಸ್ ಕಾಂಪ್ಲೆಕ್ಸ್ ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿದರು.

ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿಯವರು ಹಾಗೂ ಶ್ರೀ ಹೆಚ್ ಹನುಮಂತಯ್ಯ ಶೆಟ್ಟಿಯವರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮುಖ್ಯಅತಿಥಿಗಳಾಗಿ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ, ನಿರ್ದೇಶಕರಾದ ಶ್ರೀ ಪ್ರಾಣೇಶ ದೇಸಾಯಿ, ಶ್ರೀ ಮಹಾಲಿಂಗಪ್ಪ ಧೋತಿಹಾಳ, ಶ್ರೀ ಕುಮಾರೆಪ್ಪ. ಶ್ರೀ ಚನ್ನಬಸಪ್ಪ ಕಡ್ಡಿಪುಡಿ, ಶ್ರೀ ಗಿರೀಶ ಹಾಗೂ ಆರ್.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕರಾದ ಶ್ರೀ ಶಿವಶರಣಪ್ಪ ಹ್ಯಾಟಿಯವರು ಉಪಸ್ಥಿತರಿದ್ದರು.

ಸ್ವಾಗತವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ಸ್ವಾಗತಿಸಿದರು. ಪ್ರಾಸ್ತವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನುಡಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ರವರು ನೆರವೆರಿಸಿದರು. ಕಾರ್ಯಕ್ರಮದಲ್ಲಿ 271 ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿದ್ದರು.




- **ಬೀದರ್ :** ದಿನಾಂಕ 23.08.2023 ರಂದು ಬೀದರ್ ಜಿಲ್ಲೆಯ ಸೌಹರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಂಪರ್ಕ ಸಭೆಯನ್ನು ಶಾರದ ರೂಟಶೆಟ್ ತರಬೇತಿ ಸಂಸ್ಥೆ, ನೌಬಾದ ಬೀದರ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು

ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ ಶ್ರೀಧರ, ಶ್ರೀಮತಿ ಶೈಲಜಾ ತಪ್ಪಲಿಯವರು ಭಾಗವಹಿಸಿದರು. ಪ್ರಾಂತೀಯ ವ್ಯವಸ್ಥಾಪಕರಾದ ಸೂರ್ಯಕಾಂತ ರ್‍ಯಾಕಲೇ ಪ್ರಸ್ತಾವಿಕ ಮತ್ತು ಸ್ವಾಗತ ನುಡಿಗಳನ್ನು ನುಡಿದರು. ಜಿಲ್ಲಾ ಸಂಯೋಜಕ ವೀರಶಟ್ಟಿ ಇವರು ನಿರೂಪಿಸಿದರು. ಸಂಪರ್ಕ ಸಭೆಯಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಉಪಾಧ್ಯಕ್ಷರು ನಿರ್ದೇಶಕರು ಮುಖ್ಯ ಕಾರ್ಯನಿರ್ವಾಹಕರು 120 ಹೆಚ್ಚು ಸಿಬ್ಬಂದಿಗಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.




- **ಕಲಬುರಗಿ ಮತ್ತು ಯಾದಗಿರಿ :** ದಿನಾಂಕ 24.08.2023 ರಂದು ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕರಿಗಳ ಅಧ್ಯಕ್ಷರು /ಉಪಾಧ್ಯಕ್ಷರುಗಳಿಗೆ ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಕಲಬುರಗಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀ ಜಿ. ಶ್ರೀಧರ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್,ಎಸ್ ಪಾಟೀಲ, ನಿರ್ದೇಶಕರು, ಉಪಸ್ಥಿತರಿದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನೆರವೇರಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ ಯವರು ನೆರವರಿಸಿದರು. ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಮಾನ್ಯ ಅಧ್ಯಕ್ಷರೊಂದಿಗೆ

ಸಮಾಲೋಚನೆ ಕೈಗೊಂಡು ಸಮಂಜಸ ಮಾಹಿತಿಯನ್ನು ಪಡೆದುಕೊಂಡರು. ಸದರಿ ಸಂಪರ್ಕ ಸಭೆಯಲ್ಲಿ 120 ಪ್ರತಿನಿಧಿಗಳು ಭಾಗವಹಿಸಿದ್ದರು.



❖ **ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ :**

➢ ದಿನಾಂಕ 22.12.2023 ರಂದು ಕಲಬುರಗಿ ಪ್ರಾಂತದ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೊಟೆಲ್ ನಕ್ಷತ್ರಾ ಬಳ್ಳಾರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯ ಶೆಟ್ಟಿಯವರು ನೆರವೇರಿಸಿದರು. ಅತಿಥಿಗಳಾಗಿ ಶ್ರೀ ಸತ್ಯನಾರಾಯಣರಾವ್ ಭಾಗವಹಿಸಿದರು. ಮೊದಲನೆಯ ಅವಧಿಯಲ್ಲಿ ಲೆಕ್ಕಪರಿಶೋಧನೆಯ ನೂತನ ನಮೂನೆಯ ಕುರಿತು ಮತ್ತು ಸಹಕಾರಿಗಳಲ್ಲಿ ಆರ್ಥಿಕ ಶಿಸ್ತುಗಳ ಕುರಿತು ಮಾನ್ಯ ಲೆಕ್ಕಪರಿಶೋಧಕರಾದ ಶ್ರೀ ನಾಗನಗೌಡರವರು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು, ಆರ್ಥಿಕ ಸಬಲತೆಯ ಮಾನದಂಡಗಳ ಸುತೋಲೆಯ, ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮಾಹಿತಿ ನೀಡಿದರು. ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ 77 ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.



ದಿನಾಂಕ 22.12.2023 ರಂದು ಕಲಬುರಗಿ ಪ್ರಾಂತದ ಬೀದರ್ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶಾರದ ರೂಟಶೆಟ್, ಮಾರುತಿ ಶೋರೂಂ ಹತ್ತಿರ, ಬೀದರನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ನೆರವೆರಿಸಿದರು. ಮುಖ್ಯಅತಿಥಿಗಳಾಗಿ ಶ್ರೀ ಸುಭಾಷಚಂದ್ರ ಬರ್ಮಾರವರು ಮಾನ್ಯ ಉಪನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಬೀದರ್, ಅತಿಥಿಗಳಾಗಿ ಬೀದರ್‌ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ, ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಗನ್ನಾಥ ಕರಂಜೆಯವರು ವಹಿಸಿದ್ದರು.

ಸಭೆಯಲ್ಲಿ ಶಾಸನಾತ್ಮಕ ಕರ್ತವ್ಯಗಳು ಹಾಗೂ ವಿವಿಧ ಪ್ರಾಧಿಕಾರಿಗಳಿಗೆ ವರದಿ ಸಲ್ಲಿಕೆಯ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ಮಾಹಿತಿ ನೀಡಿದರು. ಆರ್ಥಿಕ ಸಬಲತೆ ಮಾನದಂಡಗಳು ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬರುವ ಸಾಮಾನ್ಯ ನ್ಯೂನ್ಯತೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ವೀರಶಟ್ಟಿ ಕೆ ಯವರು ಮಾಹಿತಿ ನೀಡಿದರು. ಹೊಸ ಲೆಕ್ಕಪರಿಶೋಧನಾ ವರದಿಯ ನಮೂನೆ ಮತ್ತು ಹಣಕಾಸು ನಿರ್ವಹಣೆಯ ಕುರಿತು ಸಹಕಾರ ಸಂಘಗಳ ಸಹಾಯಕ ನಿರ್ದೇಶಕರಾದ ಶ್ರೀ ಶರಣಬಸವ ಮಾಡೋಳೆಯವರು ಮಾಹಿತಿ ನೀಡಿದರು. ಬೀದರ್ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ 73 ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.



- ದಿನಾಂಕ 28.12.2023 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ಸಿಂಧನೂರು, ಮಸ್ಕಿ, ಲಿಂಗಸೂಗುರು ಮತ್ತು ಮಾನವಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಸಿರಿ ರೆಸ್ಟೋರೆಂಟ್ ಶ್ರೀಪುರಂ ಜಂಕ್ಷನ್. ಸಿಂಧನೂರುನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ರಾಯಚೂರು ಜಿಲ್ಲಾ ಒಕ್ಕೂಟದ ಮಾನ್ಯ ಅಧ್ಯಕ್ಷರು ಹಾಗೂ ಕೊಪ್ಪಳ ಲೋಕಸಭಾ ಕ್ಷೇತ್ರದ ಮಾಜಿ ಸಂಸದರಾದ ಶ್ರೀ ಕೆ. ವಿರೂಪಾಕ್ಷಪ್ಪರವರು ಹಾಗೂ ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಿಂಧನೂರು ಉಪವಿಭಾಗದ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಮಲ್ಲಯ್ಯ ಸಾಲಗುಂದರವರು ಭಾಗವಹಿಸಿದರು.

ಮೊದಲನೆ ಅವಧಿಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು, ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬರುವ ಸಾಮನ್ಯ ನ್ಯೂನ್ಯತೆಗಳ ಕುರಿತು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರುಗಳ ಕರ್ತವ್ಯಗಳು ಮತ್ತು ವಿವಿಧ ಪ್ರಾಧಿಕಾರಿಗಳಿಗೆ ಮಾಹಿತಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿಗಳಾದ ಶ್ರೀ ನಟರಾಜರವರು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿಯ ಯೋಜನೆಯ ಕುರಿತು ಶ್ರೀ ಚಂದ್ರಕಲಾ ಪ್ರಕಾಶ ಲೈಫ್ ಸ್ಕಿಲ್ ಟ್ರೇನರ್ ಮತ್ತು ಮಾನ್ಯ ಪ್ರಾಂಶುಪಾಲರು ಶ್ರೀ ಕೃಷ್ಣದೇವರಾಯ ವಿದ್ಯಾಸಂಸ್ಥೆ, ಹೊಸಹಳ್ಳಿ ಕ್ರಾಸ್, ಸಿಂಧನೂರು ಇವರು ಉಪನ್ಯಾಸ ನೀಡಿದರು. 4 ತಾಲೂಕುಗಳಿಂದ 230 ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.



- ದಿನಾಂಕ 29.12.2023 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ರಾಯಚೂರು, ದೇವದುರ್ಗ, & ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ಸಭಾಂಗಣ, ಕೃಷಿ ವಿಶ್ವವಿದ್ಯಾಲಯ ಆವರಣ ರಾಯಚೂರುನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ವಿಜಯ ಭಾಸ್ಕರ ಮಾನ್ಯ ಅಧ್ಯಕ್ಷರು ಗೀತಾ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು ಹಾಗೂ ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಮೆಹಬೂಬ ಮಾನ್ಯ ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಲಿಂಗಸೂಗೂರು ಭಾಗವಹಿಸಿದರು. ಮೊದಲನೆ ಅವಧಿಯಲ್ಲಿ ಹೊಸ ಲೆಕ್ಕಪರಿಶೋಧನಾ ನಮೂನೆಗಳು ಕುರಿತು ಶ್ರೀ ಮೆಹಬೂಬ ಮಾನ್ಯ ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಲಿಂಗಸೂಗುರು ಇವರು ಉಪನ್ಯಾಸ ನೀಡಿರು. ಎರಡನೆಯ ಅವಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರುಗಳ ಕರ್ತವ್ಯಗಳು ಮತ್ತು ವಿವಿಧ ಪ್ರಾಧಿಕಾರಿಗಳಿಗೆ ಮಾಹಿತಿ ಸಲ್ಲಿಕೆ ಕುರಿತು ಬೀದರ್ ಮತ್ತು ಕಲಬುರಗಿ ಜಿಲ್ಲೆಗಳ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶೆಟ್ಟಿ ಕೆ ಯವರು ಉಪನ್ಯಾಸ ನೀಡಿದರು. ಮೂರನೆಯ ಅವಧಿಯಲ್ಲಿ ಶ್ರೀ ನಟರಾಜ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ಆರ್ಥಿಕ ಸಬಲತೆಯ ಮಾನದಂಡಗಳು, ಸಹಕಾರ ಇಲಾಖೆಯ ಬಗ್ಗೆ, ಚುನಾವಣೆಯ ಕುರಿತು ಉಪನ್ಯಾಸ ನೀಡಿದರು. ನಾಲ್ಕನೆಯ ಅವಧಿಯಲ್ಲಿ ವ್ಯವಹಾರ ಅಭಿವೃದ್ಧಿಯ ಯೋಜನೆಯ ಕುರಿತು ಶ್ರೀ ಚಂದ್ರಕಲಾ ಪ್ರಕಾಶ ಲೈಫ್ ಸ್ಕಿಲ್ ಟ್ರೇನರ್ ಮತ್ತು ಮಾನ್ಯ ಪ್ರಾಂಶುಪಾಲರು ಶ್ರೀ

ಕೃಷ್ಣದೇವರಾಯ ವಿದ್ಯಾಸಂಸ್ಥೆ, ಹೊಸಹಳ್ಳಿ ಕ್ರಾಸ್, ಸಿಂಧನೂರು ಇವರು ಉಪನ್ಯಾಸ ನೀಡಿದರು. 3 ತಾಲೂಕುಗಳಿಂದ 85 ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.



- ದಿನಾಂಕ 29.12.2023 ರಂದು ಕಲಬುರಗಿ ಪ್ರಾಂತದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಸಿ.ಬಿ.ಎಸ್ ಕಲಾಮಂದಿರ ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕೊಪ್ಪಳ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ದಸ್ತಗಿರಿ ಅಲಿರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಪ್ರಕಾಶ ಸಜ್ಜನ ಹಾಗೂ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ, ಉಪಾಧ್ಯಕ್ಷರಾದ ಶ್ರೀ ಮಹಾಲಿಂಗಪ್ಪ ಧೋತಿಹಾಳ, ನಿರ್ದೇಶಕರುಗಳು ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ಸಹಕಾರಿ ಸಂಘಗಳ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸಪ್ಪ ಗಾಳಿಯವರು ಉಪಸ್ಥಿತರಿದ್ದರು. ಮೊದನಲೆಯದಾಗಿ ಸಹಕಾರಿಗಳಿಗೆ ಆರ್ಥಿಕ ಸಬಲತೆಯ ಮಾನದಂಡಗಳ ಕುರಿತು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬರುವ ನ್ಯೂನ್ಯತೆಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಉಪನ್ಯಾಸ ನೀಡಿದರು.

ಎರಡನೆಯ ಅವಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರುಗಳ ಶಾಸನಾತ್ಮಕ ಕರ್ತವ್ಯಗಳ ಕುರಿತು ಮತ್ತು ವಿವಿಧ ಪ್ರಾಧಿಕಾರಗಳಿಗೆ ಮಾಹಿತಿ ಸಲ್ಲಿಸುವ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಓಂಕಾರ ಧರಣೆಯವರು ಮಾಹಿತಿ ನೀಡಿದರು. ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ವಂದನಾರ್ಪಣೆಯನ್ನು ಶ್ರೀ ಮಹಾಲಿಂಗಪ್ಪಾ ಧೋತಿಹಾಳ ಇವರು ನೆರವೇರಸಿದರು.ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಸೇರಿ 275 ಪ್ರತಿನಿಧಿಗಳು ಭಾಗವಹಿಸಿದ್ದರು.



- ಯಾದಗಿರಿ ಮತ್ತು ವಿಜಯನಗರ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯ ವರದಿ ದಿನಾಂಕ 03.01.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವತಿಯಿಂದ ಕಲಬುರಗಿ ಪ್ರಾಂತದ ಯಾದಗಿರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹೊಟೆಲ್ ಮಾತೋಶ್ರೀ, ಫ್ಯಾಮಿಲಿ ರೆಸ್ಟೋರೆಂಟ್, ಬಾಪುಗೌಡನಗರ ಕೆ.ಇ.ಬಿ ಕಛೇರಿ ಹತ್ತಿರ ಶಹಾಪುದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಮತಿ ಶೈಲಜಾ ತಪಲಿಯವರು ನೆರವೇರಿಸಿದರು. ಮೊದಲನೆಯ ಅವಧಿಯಲ್ಲಿ ಶಾಸನಾತ್ಮಕ ಕರ್ತವ್ಯಗಳ ಕುರಿತು, ವಿವಿಧ ಪ್ರಾಧಿಕಾರಗಳಿಗೆ ವರದಿ, ಮಾಹಿತಿ ಸಲ್ಲಿಕೆಯ ಕುರಿತು ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವ ಕಾಯ್ದೆಗಳ ಕುರಿತು ಶ್ರಿ ವೀರಶಟ್ಟಿ ಕಲಬುರಗಿ & ಬೀದರ್ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ಮಾಹಿತಿ ನೀಡಿದರು. ಎರಡನೇಯ ಅವಧಿಯಲ್ಲಿ ಆರ್ಥಿಕ ಸಬಲತೆಯ ಮಾನದಂಡಗಳು, ಹೊಸ ಲೆಕ್ಕಪರಿಶೋಧನಾ ವರದಿಯ ನಮೂನೆಯ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 45 ಸಹಕಾರಿಗಳಿಂದ 45 ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.



- ದಿನಾಂಕ 05.01.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತದ ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಾರ್ಷಿಕ ಸಭೆಯನ್ನು ಹೊಟೆಲ್ ಮಲ್ಲಿಗೆಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ

ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ರವಿಕುಮಾರ ನೆರವೆರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಡಿಸಿಸಿ ಬ್ಯಾಂಕ್‌ನ ನಿರ್ದೇಶಕರಾಗಿ ಸಂದೀಪ ಸಿಂಗ್ ರವರು ಆಗಮಿಸಿದ್ದರು. ಸದರಿಯವರು ಡಿಸಿಸಿ ಬ್ಯಾಂಕ್‌ನ ನೂತನ ನಿರ್ದೇಶಕರಾಗಿ ಆಯ್ಕೆಯಾದ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನಡೆಸಿಕೊಟ್ಟರು. ನಿರೂಪಣೆ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರವರು ಕೊರಿದರು. ಮೊದಲನೆಯ ಅವಧಿಯಲ್ಲಿ ಸಹಕಾರಿಗಳಿಗೆ ನೂತನ ಲೆಕ್ಕಪರಿಶೋಧನಾ ನಮೂನೆ ಹಾಗೂ ಸಹಕಾರಗಳಲ್ಲಿ ಆರ್ಥಿಕ ಶಿಸ್ತು ಕುರಿತಾಗಿ ಶ್ರೀ ಎರ್‍ರಿಸ್ವಾಮಿ ಸನ್ನದು ಲೆಕ್ಕಪರಿಶೋಧಕರು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು, ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪನ್ಯಾಸ ನೀಡಿದರು. ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಸಿಬ್ಬಂದಿಗಳು ಸೇರಿ 83 ಸಹಕಾರಿಗಳಿಂದ 114 ಪ್ರತಿನಿಧಿಗಳು ಭಾಗವಹಿಸಿದ್ದರು.




- ದಿನಾಂಕ: 02.01.2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ, ಕಲಬುರ್ಗಿ ವತಿಯಿಂದ ಕಲಬುರ್ಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಪ್ರಾಂತೀಯ ಕಚೇರಿ ಕಲಬುರ್ಗಿ ತರಬೇತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ವಿಶ್ವನಾಥ ಮಲಕೂಡ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಕಲಬುರ್ಗಿ ಪ್ರಾಂತ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ನಿದೇಶಕರಾದ ಶ್ರೀ ಸಂಜೀವ ಮಹಾಜನ್ ಇವರು ಹಾಗೂ ಶ್ರೀ ಎಸ್ ಎಸ್ ಪಾಟೀಲ್ ಅಧ್ಯಕ್ಷರು ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ ಇವರು ಹಾಗೂ ಶ್ರೀ ಸಂಜೀವಕುಮಾರ ಕಪೂರ್ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಕಲಬುರಗಿ ಹಾಗೂ ಶ್ರೀ ಸೂರ್ಯಕಾಂತ ರಾಕಲೇ ಪ್ರಾಂತೀಯ ವ್ಯವಸ್ಥಾಪಕರು ಕಲಬುರಗಿ ಇವರುಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು. ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳು

ಹಾಗೂ ವಿವಿಧ ಪ್ರಾಧಿಕಾರಿಗಳಿಗೆ ವರದಿ ಮಾಹಿತಿ ಸಲ್ಲಿಕೆ ಕುರಿತು ವೀರಶೆಟ್ಟಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಉಪನ್ಯಾಸ ನೀಡಿದರು. ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಲೆಕ್ಕ ಪರಿಶೋಧನೆ ವರದಿಯಲ್ಲಿ ಕಂಡು ಬರುವ ಸಾಮಾನ್ಯ ನ್ಯೂನ್ಯತೆಗಳ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ವೀರಶೆಟ್ಟಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು, ಪ್ರಾರ್ಥನೆಯನ್ನು ಶ್ರೀಮತಿ ಸೌಮ್ಯ ಕುಲಕರ್ಣಿ ಸಿಇಓ, ಗುಲ್ಬರ್ಗಾ ಮಹಿಳಾ ಸೌಹಾರ್ದ ಸಹಕಾರಿ ನಿ., ಕಲಬುರ್ಗಿ ಮತ್ತು ಸ್ವಾಗತ & ಪ್ರಸ್ತಾವಿಕ ನುಡಿಗಳನ್ನು ಸೂರ್ಯಕಾಂತ ರ್‍ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು ನುಡಿದರು. ಕಲಬುರ್ಗಿ ಜಿಲ್ಲೆಯ 86 ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಇತರೆ ಅಧಿಕಾರಿಗಳು ಸೇರಿ ಒಟ್ಟು 95 ಪ್ರತಿನಿಧಿಗಳು ಭಾಗವಹಿಸಿದ್ದರು.



❖ **ವ್ಯವಹಾರ ಅಭಿವೃದ್ಧಿ ತರಬೇತಿ**

➢ ದಿನಾಂಕ 06.01.2024 ರಂದು ಕಲಬುರಗಿ ಪ್ರಾಂತದ ಬೀದರ್ ಜಿಲ್ಲೆಯಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ವ್ಯವಹಾರ ಅಭಿವೃದ್ದಿ ತರಬೇತಿಯನ್ನು ಸಂತೋಷ ಹೊಟೇಲ್‌ನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರವರು ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀಮತಿ ಮಂಜುಳಾ ಎಸ್ ಆಗಮಿಸಿದ್ದರು. ಮೊದಲನೆಯದಾಗಿ ಸಹಕಾರಿಗಳ ಆರ್ಥಿಕ ಮಾಹಿತಿಗಳನ್ನು ಹಾಗೂ ನಷ್ಟದಲ್ಲಿರಲು ಕಾರಣಗಳು ಹಾಗೂ ವ್ಯವಹಾರ ಅಭಿವದ್ಧಿಯಲ್ಲಿನ ಸಮಸ್ಯೆಗಳ ಕುರಿತು ಪ್ರತ್ಯೇಕವಾಗಿ ಸಹಕಾರಿಗಳಿಂದ ಮಾಹಿತಿಯನ್ನು ಸಂಗ್ರಹಸಿ, ಮುಂಬರುವ ದಿನಗಳಲ್ಲಿ ಸಹಕಾರಿಯ ಲಾಭವನ್ನು ಹೆಚ್ಚಿಸಲು ಇರುವ ಮಾರ್ಗಗಳ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ಶ್ರೀ ಗುರುನಾಥ ಜ್ಯಾಂತಿಕರವರು ಉಪನ್ಯಾಸ ನೀಡಿದರು.

❖ **ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ತರಬೇತಿ :**

➢ ದಿನಾಂಕ 06.02.2024ರಂದು ಕನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ

ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗೆ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಪ್ರಕ್ರೀಯೆಯ ಕುರಿತು ತರಬೇತಿಯನ್ನು ಪ್ರಾಂತೀಯ ಕಛೇರಿ ಕಲಬುರಗಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಸಂಜಯ ಕಾಪೂರರವರು ನೆರವೇರಿಸಿದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶಟ್ಟಿ ಕೆ ಯವರು, ನಿರೂಪಣೆಯನ್ನು ಪವನ ಎಮ್ ಆರ್ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ನೆರವೇರಿಸಿದರು. ಕಾರ್ಯಕ್ರಮವನ್ನು ಸಹಕಾರ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಎಸ್. ಜಿ ಜೋಶಿ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರವರು (ನಿವೃತ್ತ) ದಾವಾ ದಾಖಲಾತಿ ಸಾಲ ವಸೂಲಾತಿಯ ಕುರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 2 ಜಿಲ್ಲೆಗಳಿಂದ 84 ಸಹಕಾರಿಗಳಿಂದ 102 ಪ್ರತಿನಿಧಿಗಳು ಭಾಗವಹಿಸಿದ್ದರು.





- ದಿನಾಂಕ 16.03.2024 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ, ಕನಕಗಿರಿ, ಮತ್ತು ಕುಷ್ಟಗಿ ತಾಲೂಕಿನ ಮತ್ತು ತಾವರಗೇರಾ ಪಟ್ಟಣದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಪ್ರಕ್ರೀಯೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೊಟೆಲ್ ಲಲಿತ ಮಹಲ್, ಆನೆಗುಂದಿ ರಸ್ತೆ, ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ನೆರವೆರಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರವರು, ಶ್ರೀ ರಾಜಶೇಖರ ಹೆಚ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಓಂಕಾರ ರವರು ನೆರವೇರಿಸಿದರು. ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ಮೊದಲನೆಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ಶ್ರೀ ಲಿಯಾಕತ್ ಅಲಿಯವರು ನಿವೃತ್ತ ಸಹಾಯಕ ನಿಬಂಧಕರು ರವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರಿ ಓಂಕಾರರವರು ಆರ್ಥಿಕ ಸಬಲತೆಯ ಮಾನದಂಡಗಳ ಮತ್ತು ಸಂಯುಕ್ತ ಸಹಕಾರಿಗೆ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಮಾಹಿತಿಯ ಕುರಿತು ಉಪನ್ಯಾಸ ನೀಡಿದರು. ಮೂರನೆಯ ಅವಧಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು

ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 105 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.




❖ **ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳು :**

➢ ದಿನಾಂಕ 07.02.2024 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷು ಹಗೂ ನಿರ್ದೇಶಕರುಗಳಿಗೆ ಸಹಕಾರಿ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳು ಎಂಬ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಹೊಟೆಲ್ ರಾಜ್ ಮಹಲ್ ಸಿಂಧನೂರುನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಮಂಜುಳಾ ಪಾಟೀಲರವರು ಮತ್ತು ವೇದಿಕೆ ಮೇಲೆ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ವಿರೂಪಾಕ್ಷಪ್ಪ, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ವೃತ್ತಿಪರ ನಿದೇಶಕರಾದ ಶ್ರೀ ರಾಜಶೇಖರ ಬಿ ಯವರು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಉಪಸ್ಥಿತರಿದ್ದರು. ಸಹಕಾರಿ ಸಂಸ್ಥೆಯಲ್ಲಿ ಆಡಳಿತ ಮಂಡಳಿ ನಿರ್ದೇಶಕರ ಪಾತ್ರದ ಕುರಿತು ಶ್ರೀ ಬಿ.ವಿ ರವೀಂದ್ರನಾಥ ಮಾನ್ಯ ಲೆಕ್ಕಪರಿಶೋಧಕರು ರವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 140 ಆಡಳಿತ ಮಂಡಳಿ ಸದಸ್ಯರುಗಳು ಉಪಸ್ಥಿತರಿದ್ದರು.



➢ ದಿನಾಂಕ 07.02.2024 ರಂದು ಮಧ್ಯಾಹ್ನ 3.00 ಗಂಟೆಗೆ ರಾಯಚೂರು ಜಿಲ್ಲೆಯ ಮಸ್ಕಿ. ಲಿಂಗಸೂಗುರು ತಾಲೂಕುಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಸಹಕಾರಿ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳು ಎಂಬ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ರಡ್ಡೆರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಲಿಂಗಸೂಗುರು ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಸ್ಕಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಹಾಗೂ ರಾಮಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪ್ರತಾಪ ಗೌಡ ಪಾಟೀಲರವರು, ವೇದಿಕೆ ಮೇಲೆ ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ರಡ್ಡೆರ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಕುಮಾರೆಪ್ಪರವರು ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ವೇದಿಕೆ ಮೇಲೆ ಉಪಸ್ಥತರಿದ್ದರು ಸಹಕಾರಿ ಸಂಸ್ಥೆಯಲ್ಲಿ ಆಡಳಿತ ಮಂಡಳಿ ನಿರ್ದೇಶಕರ ಪಾತ್ರದ ಕುರಿತು ಶ್ರೀ ಬಿ.ವಿ ರವೀಂದ್ರನಾಥ ಮಾನ್ಯ ಲೆಕ್ಕಪರಿಶೋಧಕರು ರವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 110 ಆಡಳಿತ ಮಂಡಳಿ ಸದಸ್ಯರುಗಳು ಉಪಸ್ಥಿತರಿದ್ದರು.





- ದಿನಾಂಕ 08.02.2024 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ಮಾನವಿ ಮತ್ತು ಸಿರವಾರ ತಾಲೂಕಿನ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಸಹಕಾರ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರು ಹಕ್ಕು ಮತ್ತು ಕರ್ತವ್ಯಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಗಾಂಧೀ ಕಾಲೇಜ ಸಭಾಂಗಣ ಮಾನವಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿರ್ದೇಶಕರಾದ ಶ್ರೀ ಮಲ್ಲನಗೌಡ ಪಾಟೀಲ ರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಮಾನವಿ ಪಟ್ಟಣದ ಸಹಕಾರ ಬ್ಯಾಂಕನ ಉಪಾಧ್ಯಕ್ಷರಾದ ಡಾ॥ ಶ್ರೀಮತಿ ರೋಹಿಣಿಯವರು ಆಗಮಿಸಿದ್ದರು. ವೇದಿಕೆಯ ಮೇಲೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪಸ್ಥಿತರಿದ್ದರು. ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ವಿ ರವೀಂದ್ರನಾಥ ಸನ್ನದು ಲೆಕ್ಕಪರಿಶೋಧಕರು ಆಡಳಿತ ಮಂಡಳಿ ಸದಸ್ಯರುಗಳ ಹಕ್ಕು ಮತ್ತು ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 80 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 08.02.2024 ರಂದು ಮಧ್ಯಾಹ್ನ 3.00 ಗಂಟೆಗೆ ರಾಯಚೂರು ಜಿಲ್ಲೆಯ ರಾಯಚೂರು ಮತ್ತು ದೇವದುರ್ಗ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಸಹಕಾರಿ ಸಂಸ್ಥೆಯ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಪಾತ್ರ ಹಾಗೂ ನಿರ್ದೇಶಕರು ಹಕ್ಕು ಮತ್ತು ಕರ್ತವ್ಯಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ಸಭಾಂಗಣ, ಕೃಷಿ ವಿಶ್ವವಿದ್ಯಾಲಯ ಆವರಣ ರಾಯಚೂರುನಲ್ಲಿ

ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಹೊರನಾಡು ಅನ್ನಪೂರ್ಣೇಶ್ವರಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ವೆಂಕಟರಾಯ ಗೌಡ ಬೆನಕನರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಈ ಸಂದರ್ಭದಲ್ಲಿ ಪಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಉಪಸ್ಥಿತರಿದ್ದರು. ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ವಿ ರವೀಂದ್ರನಾಥ ಸನ್ನದು ಲೆಕ್ಕಪರಿಶೋಧಕರು ಆಡಳಿತ ಮಂಡಳಿ ಸದಸ್ಯರುಗಳ ಹಕ್ಕು ಮತ್ತು ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 85 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



❖ **ಇ–ಸ್ಟಾಂಪಿಂಗ್ ತರಬೇತಿ :**

➢ ದಿನಾಂಕ 21.02.2024 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟ್ಯಾಂಪ್ ಕೇಂದ್ರ ಹೊಂದಿರುವ ಸಿಬ್ಬಂದಿಗಳಿಗೆ ತರಬೇತಿ ಪ್ರಾಂತೀಯ ಕಛೇರಿ ಕಲಬುರಗಿ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಮುದ್ರಾಂಖ ಇಲಾಖೆಯ ಹಿರಿಯ ನೋಂದಣಾಧಿಕಾರಿಗಳಾದ ಶ್ರೀಮತಿ ಅನುರಾಧ ಕಿನಾಳರವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ನುಡಿದರು. ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಕೋರಿದರು. ವಂದನಾರ್ಪಣೆಯನ್ನು ಕೇಂದ್ರ ಕಛೇರಿಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರರಾವ್ ಸಿಂಧೆ ರವರು ನೆರವೇರಿಸಿದರು. ಇ–ಸ್ಟ್ಯಾಂಪ್ ಅನುಚ್ಛೆಧಗಳ ತಿದ್ದಪಡಿಗಳ ಕುರಿತು ಮತ್ತು ಪರಿಷ್ಕರಣೆಯ ಶುಲ್ಕದ ಕುರಿತು ಮುದ್ರಾಂಕ ಇಲಾಖೆಯ ಹಿರಿಯ ಉಪನೋಂದಣಾಧಿಕಾರಿಗಳಾದ ಶ್ರೀಮತಿ ಅನುರಾಧ ಕಿನಾಳ ರವರು ಮಾಹಿತಿ ನೀಡಿದರು. ನಂತರ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ರಾವ್ ಸಿಂಧೆಯವರು ಇ–ಸ್ಟ್ಯಾಂಪಿಂಗ್ ಕಾರ್ಯನಿರ್ವಹಣೆಯ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ 3 ಜಿಲ್ಲೆಗಳಿಂದ 52 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



- ದಿನಾಂಕ 15.03.2024 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ, ಯಲಬುರ್ಗಾ, ಕುಕನೂರು ಮತ್ತು ಕುಷ್ಟಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಪ್ರಕ್ರಿಯೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಕಲರ್ಸ್ ರೆಸ್ಟೋರೆಂಟ್ ಕೊಪ್ಪಳದಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ನೆರವೆರಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಾದ ಶ್ರೀ ಚನ್ನಬಸ್ಸಪ್ಪ ಕಡ್ಡಿಪುಡಿ, ನಿರ್ದೇಶಕರಾದ ಶ್ರೀ ಮುದ್ದಪ್ಪ ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಓಂಕಾರ ರವರು ನೆರವೆರಿಸಿದರು. ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು.ಮೊದಲನೆಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ಶ್ರೀ ಲಿಯಾಕತ್ ಅಲಿಯವರು ನಿವೃತ್ತ ಸಹಾಯಕ ನಿಬಂಧಕರು ರವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರಿ ಓಂಕಾರರವರು ಆರ್ಥಿಕ ಸಬಲತೆಯ ಮಾನದಂಡಗಳ ಮತ್ತು ಸಂಯುಕ್ತ ಸಹಕಾರಿಗೆ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಮಾಹಿತಿಯ ಕುರಿತು ಉಪನ್ಯಾಸ ನೀಡಿದರು.ಮೂರನೆಯ ಅವಧಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 109 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.



## ಬೆಳಗಾವಿ ಪ್ರಾಂತೀಯ ಕಛೇರಿ

❖ **ಕ್ಲಸ್ಟರ್ ತರಬೇತಿಗಳು:**

➢ **ಬಾಗಲಕೋಟೆ :** ಬಾಗಲಕೋಟೆ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 03 ಜೂನ್ 2023 ರಂದು ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟೆ ಇಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ನಿರ್ದೇಶಕರಾದ ಶ್ರೀ ಜಿ. ಎನ್. ಪಾಟೀಲ್ ಇವರು ಉಪಸ್ಥಿತರಿದ್ದು ಸಹಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಕೆಲವು ಅಗತ್ಯ ಮಾಹಿತಿ ಬಗ್ಗೆ ವಿವರಿಸಿದರು.



➢ **ಮುಧೋಳ :** ಮುಧೋಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 05 ಜೂನ್ 2023ರಂದು ಮುಧೋಳ ತಾಲೂಕು ಕಬ್ಬು ಬೆಳೆಗಾರರ ಸೌಹಾರ್ದ ಸಹಕಾರಿ ಸಂಘ ನಿ., ಮುಧೋಳ ಇಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ಅಗತ್ಯ ವಿಷಯಗಳ ಕುರಿತು ಮಾಹಿತಿ ನೀಡಿದರು.



➢ **ರಬಕವಿ ಬನಹಟ್ಟಿ ಮತ್ತು ತೆರದಾಳ :** ರಬಕವಿ ಬನಹಟ್ಟಿ ಮತ್ತು ತೇರದಾಳ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 06 ಜೂನ್ 2023ರಂದು ರಾಜಸಾಗರ ಐಟಿಐ

ಕಾಲೇಜ್, ತೇರದಾಳದಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ಅಗತ್ಯ ವಿಷಯಗಳ ಕುರಿತು ಮಾಹಿತಿ ನೀಡಿದರು. ಈ ತರಬೇತಿಗೆ 44 ಸೌಹಾರ್ದ ಸಹಕಾರಿಗಳಿಂದ 48 ಜನರು ಭಾಗವಹಿಸಿದ್ದರು.



- **ಬಾದಾಮಿ :** ಬಾದಾಮಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 07 ಜೂನ್ 2023 ರಂದು ಗುರು ಸದಾಶಿವ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಬಾದಾಮಿಯಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ಅಗತ್ಯ ವಿಷಯಗಳ ಕುರಿತು ಮಾಹಿತಿ ನೀಡಿದರು. ಈ ತರಬೇತಿಗೆ 12 ಸೌಹಾರ್ದ ಸಹಕಾರಿಗಳಿಂದ 13 ಜನರು ಭಾಗವಹಿಸಿದ್ದರು.



- **ಜಮಖಂಡಿ ತಾಲೂಕು :** ಜಮಖಂಡಿ ತಾಲ್ಲೂಕಿನಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ದಿನಾಂಕ 08-06-2023 ರಂದು ಪುಷ್ಪ ತಾಯಿ ಕಾಲೇಜು, ಶ್ರೀ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ ಆವರಣ, ಸಿದ್ದಾಪುರದಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ಅಗತ್ಯ ವಿಷಯಗಳ ಕುರಿತು ಮಾಹಿತಿ ನೀಡಿದರು.ಈ ತರಬೇತಿಗೆ 36 ಸೌಹಾರ್ದ ಸಹಕಾರಿಗಳಿಂದ 40 ಜನರು ಭಾಗವಹಿಸಿದ್ದರು.
- **ಬಾಗಲಕೋಟ ಜಿಲ್ಲೆ:** ಬೀಳಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 05-07-2023 ರಂದು ಸ್ವಾಮಿ ವಿವೇಕಾನಂದ ಕಾಲೇಜು,ಬೀಳಗಿಯಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಈ ತರಬೇತಿಯಲ್ಲಿ 29 ಸೌಹಾರ್ದ ಸಹಕಾರಿಗಳಿಂದ 35 ಜನರು ಭಾಗವಹಿಸಿದ್ದರು.

- **ವಿಜಯಪುರ :** ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 17 ಜುಲೈ 2023ರಂದು ಕ್ಲಸ್ಟರ್ ತರಬೇತಿಯನ್ನು ಶ್ರೀ ಶಾಂತವೀರ ಪತ್ತಿನ ಸೌಹಾರ್ದ ಸಹಕಾರಿ ನಿ., ಬಬಲೇಶ್ವರ ಇಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 21 ಸೌಹಾರ್ದ ಸಹಕಾರಿಗಳಿಂದ 24 ಪ್ರತಿನಿಧಿಗಳು ಭಾಗವಹಿಸಿದ್ದರು.




- **ಬೆಳಗಾವಿ ಜಿಲ್ಲೆ:** ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಗೋಕಾಕ ನಗರ, ಮಮದಾಪುರ, ಮೆಳವೆಂಕಿ ಗ್ರಾಮಗಳ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 17 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿ ನಿ., ಗೋಕಾಕ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ 26 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಬೆಳಗಾವಿ ಜಿಲ್ಲೆ:** ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಕಲ್ಲೋಳಿ, ನಾಗನೂರ, ಮೂಡಲಗಿ, ಗ್ರಾಮಗಳ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 17 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ನಾಗನೂರ ಅರ್ಬನ ಸೌಹಾರ್ದ ಸಹಕಾರಿ ನಿ., ನಾಗನೂರ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 24 ಜನ ಪ್ರತಿನಿಧಿಗಳು ಭಾಗವಹಿಸಿ



- **ಬೆಳಗಾವಿ ಜಿಲ್ಲೆ:** ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನೀಡಸೊಸಿ,ಅಮ್ಮಣಗಿ, ಅಮ್ಮನಬಾವಿ, ಕೇಸ್ತಿ, ಬಾಡ ಗ್ರಾಮಗಳಲ್ಲಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 18 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ದುರದುಂಡೇಶ್ವರ ಅರ್ಬನ್ ಸೌಹಾರ್ದ ಸಹಕಾರಿ ಸಂಘ ನಿ., ನಿಡಸೋಸಿ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 16 ಸೌಹಾರ್ದ ಸಹಕಾರಿಗಳಿಂದ 22 ಜನ ಪ್ರತಿನಿಧಿಗಳು ಭಾಗವಹಿಸಿದ್ದರು



- **ಉತ್ತರ ಕನ್ನಡ:** ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಯಲ್ಲಾಪುರ, ಹಳಿಯಾಳ, ದಾಂಡೇಲಿ, ಮುಂಡಗೋಡ ಮತ್ತು ಜೊಯಿಡಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 19 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಟಿ.ಎಸ್.ಎಸ್. ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಇದರ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ಈ ತರಬೇತಿಯಲ್ಲಿ 26 ಸೌಹಾರ್ದ ಸಹಕಾರಿಗಳಿಂದ 22 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಉತ್ತರ ಕನ್ನಡ ಜಿಲ್ಲೆ:** ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 19 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಟಿ.ಎಸ್.ಎಸ್. ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಇದರ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ಈ ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 24 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಬೆಳಗಾವಿ ಜಿಲ್ಲೆ:** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಚಿಕ್ಕೋಡಿ, ಕಬ್ಬೂರ, ಬೆಳಕೂಡ, ನಾಗರ ಮುನ್ನೊಳಿ ಗ್ರಾಮಗಳ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 19 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 23 ಸೌಹಾರ್ದ ಸಹಕಾರಿಗಳಿಂದ 27 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.
- **ಬೆಳಗಾವಿ ಜಿಲ್ಲೆ:** ಬೆಳಗಾವಿ ಜಿಲ್ಲೆಯ ನಿಪ್ಪಾಣಿ ನಗರದ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 19 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಶ್ರದ್ಧಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ.,ನಿಪ್ಪಾಣಿ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 14 ಸೌಹಾರ್ದ ಸಹಕಾರಿಗಳಿಂದ 16 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.
- **ವಿಜಯಪುರ ಜಿಲ್ಲೆ** : ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 19 ಜುಲೈ 2023ರಂದು ಕ್ಲಸ್ಟರ್ ತರಬೇತಿಯನ್ನು, ಶ್ರೀ ದಾನೇಶ್ವರಿ ಸೌಹಾರ್ದ ಸಹಕಾರಿ ನಿ., ಚಡಚಣದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 24 ಪ್ರತಿನಿಧಿಗಳು ಭಾಗವಹಿಸಿದ್ದರು.
- **ವಿಜಯಪುರ ಜಿಲ್ಲೆಯ ಇಂಡಿ ನಗರ:** ವಿಜಯಪುರ ಜಿಲ್ಲೆಯ ಇಂಡಿ ನಗರದ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 20 ಜುಲೈ 2023ರಂದು ಕ್ಲಸ್ಟರ್ ತರಬೇತಿಯನ್ನು , ಶ್ರೀ ಗುಡ್ಡದ ಬಸವರಾಜೇಂದ್ರ ಸೌಹಾರ್ದ ಸಹಕಾರಿ ನಿ., ಇಂಡಿಯಲ್ಲಿ ಆಯೋಜಿಸಲಾಯಿತು. ಈ ತರಬೇತಿಯಲ್ಲಿ 21 ಸೌಹಾರ್ದ ಸಹಕಾರಿಗಳಿಂದ 27 ಪ್ರತಿನಿಧಿಗಳು ಭಾಗವಹಿಸಿದ್ದರು.



➢ **ಬೆಳಗಾವಿ ಜಿಲ್ಲೆ:** ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸುಲ್ತಾನಪುರ, ಮದಿಹಳ್ಳಿ, ಬೆಣಿವಾಡ, ಇಂಗಳಿ, ಯರನಾಳ, ಹೊಸುರು, ಗ್ರಾಮಗಳ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಸುಲ್ತಾನಪುರ ಈ ಸಹಕಾರಿ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 12 ಸೌಹಾರ್ದ ಸಹಕಾರಿಗಳಿಂದ 22 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



➢ **ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕು:** ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಿನಾಂಕ 20 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಹರಿಪ್ರಿಯ ಸೇವಾ ಪತ್ತಿನ ಸೇವಾ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಸ್ಥಳ:ಬಜಾರ್ ಪೇಟ್ ಖಾನಾಪುರ–ಪಟ್ಟಣದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 41 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



➢ **ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು:** ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 21 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕಿತ್ತೂರ ರಾಣಿ ಚೆನ್ನಮ್ಮ ಅರ್ಬನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 14 ಸೌಹಾರ್ದ ಸಹಕಾರಿಗಳಿಂದ 21 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

➢ **ಉತ್ತರಕನ್ನಡ ಜಿಲ್ಲೆ:** ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 21 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 17 ಸೌಹಾರ್ದ ಸಹಕಾರಿಗಳಿಂದ 16 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಉತ್ತರ ಕನ್ನಡ ಜಿಲ್ಲೆ:**ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 21 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಭಟ್ಕಳ ಸೌಹಾರ್ದ ಸಹಕಾರಿ ಸಂಘ ನಿ., ಭಟ್ಕಳ ಇದರ ಸಭಾ ಭವನದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಇದರ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ಈ ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ 20 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.
- **ಬೆಳಗಾವಿ ಜಿಲ್ಲೆ:** ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಹಾರುಗೇರಿ, ಗ್ರಾಮದ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 21 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜಾಗೃತಿ ಅರ್ಬನ ಸೌಹಾರ್ದ ಸಹಕಾರಿ ನಿ., ಹಾರುಗೇರಿ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 9 ಸೌಹಾರ್ದ ಸಹಕಾರಿಗಳಿಂದ 14 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.





- **ವಿಜಯಪುರ ಜಿಲ್ಲೆ:** ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಗ್ರಾಮೀಣದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 21 ಜುಲೈ 2023ರಂದು ಕ್ಲಸ್ಟರ್ ತರಬೇತಿಯನ್ನು, ಶ್ರೀ ಗುಡ್ಡದ ಬಸವರಾಜೇಂದ್ರ ಸೌಹಾರ್ದ ಸಹಕಾರಿ ನಿ., ಇಂಡಿ ಸಹಕಾರಿ ಸಭಾ ಭವನದಲ್ಲಿ ಆಯೋಜಿಸಲಾಯಿತು. ಈ ತರಬೇತಿಯಲ್ಲಿ 17 ಸೌಹಾರ್ದ ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.



- **ವಿಜಯಪುರ ಜಿಲ್ಲೆ:** ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 24 ಜುಲೈ 2023ರಂದು ಕ್ಲಸ್ಟರ್ ತರಬೇತಿಯನ್ನು, ಮಾರ್ಗದರ್ಶಿ ಕರಿಯರ್ ಅಕಾಡೆಮಿ, ವಿಜಯಪುರದಲ್ಲಿ ಆಯೋಜಿಸಲಾಯಿತು. ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ. ಪಾಟೀಲ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ, ಇವರು ಹಾಗೂ ಹಿರಿಯ ಸಹಕಾರಿಗಳಾದ ಶ್ರೀ ಅಮರನಾಥ ಬಿರಾದಾರ ಇವರು ಉಪಸ್ಥಿತರಿದ್ದರು. ಈ ತರಬೇತಿಯಲ್ಲಿ 34 ಸೌಹಾರ್ದ ಸಹಕಾರಿಗಳಿಂದ 38 ಪ್ರತಿನಿಧಿಗಳು ಭಾಗವಹಿಸಿದ್ದರು.






- **ಬೆಳಗಾವಿ ಜಿಲ್ಲೆ:** ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ.25.07.2023 ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕಿತ್ತೂರ ಕರ್ನಾಟಕ್ ಸೌಹಾರ್ದ ಸಹಕಾರಿ ನಿ., ಕಿತ್ತೂರ ಇದರ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 14 ಸೌಹಾರ್ದ ಸಹಕಾರಿಗಳಿಂದ 17 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.
- **ವಿಜಯಪುರ :** ವಿಜಯಪುರ ತಾಲ್ಲೂಕಿನ (ಭಾಗ–02) ಸೌಹಾರ್ದ ಸಹಕಾರಿಗಳಿಗೆ ದಿನಾಂಕ 25 ಜುಲೈ 2023ರಂದು ಕ್ಲಸ್ಟರ್ ತರಬೇತಿಯನ್ನು, ಮಾರ್ಗದರ್ಶಿ ಕರಿಯರ್ ಅಕಾಡೆಮಿ, ವಿಜಯಪುರದಲ್ಲಿ ಆಯೋಜಿಸಲಾಯಿತು. ಈ ತರಬೇತಿಯಲ್ಲಿ 30 ಸೌಹಾರ್ದ ಸಹಕಾರಿಗಳಿಂದ 35 ಪ್ರತಿನಿಧಿಗಳು ಭಾಗವಹಿಸಿದ್ದರು.




- **ಉತ್ತರಕನ್ನಡ ಜಿಲ್ಲೆ:** ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 26 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಯೂನಿಯನ್ ಕಛೇರಿ, ಕುಮಟಾ ನಗರ ಇಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ 27 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.
- **ವಿಜಯಪುರ ಜಿಲ್ಲೆ:** ವಿಜಯಪುರ ತಾಲ್ಲೂಕಿನ (ಭಾಗ–03) ಹಾಗೂ ತಿಕೋಟಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 26 ಜುಲೈ 2023ರಂದು ಕ್ಲಸ್ಟರ್ ತರಬೇತಿಯನ್ನು, ಮಾರ್ಗದರ್ಶಿ ಕರಿಯರ್

ಅಕಾಡೆಮಿ, ವಿಜಯಪುರದಲ್ಲಿ ಆಯೋಜಿಸಲಾಯಿತು. ಈ ತರಬೇತಿಯಲ್ಲಿ 30 ಸೌಹಾರ್ದ ಸಹಕಾರಿಗಳಿಂದ 34 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಬೆಳಗಾವಿ :** ಬೆಳಗಾವಿ ಹಾಗೂ ಖಾನಾಪುರ  ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 26 ಜುಲೈ 2023ರಂದು  ಕ್ಲಸ್ಟರ್ ತರಬೇತಿಯನ್ನು, ಪ್ರಾಂತೀಯ ಕಛೇರಿಯ ತರಬೇತಿ ಸಭಾಭವನ, ಬೆಳಗಾವಿ ಇಲ್ಲಿ ಆಯೋಜಿಸಲಾಯಿತು. ಈ ತರಬೇತಿಯಲ್ಲಿ 38 ಸೌಹಾರ್ದ ಸಹಕಾರಿಗಳಿಂದ 58 ಪ್ರತಿನಿಧಿಗಳು ಭಾಗವಹಿಸಿದ್ದರು.

- **ಬೆಳಗಾವಿ:** ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಪಟ್ಟಣದ ಸೌಹಾರ್ದ ಸಹಕಾರಿಗಳಿಗೆ ದಿನಾಂಕ 27 ಜುಲೈ 2023ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ದುರ್ಗಾ ಮಾತಾ ಸೌಹಾರ್ದ ಸಹಕಾರಿ ನಿ, ಸಂಕೇಶ್ವರ. ಈ ಸಹಕಾರಿಯ ಸಭಾಭವನದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 45 ಸೌಹಾರ್ದ ಸಹಕಾರಿಗಳಿಂದ 38 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಬಾಗಲಕೋಟ ಜಿಲ್ಲೆ:** ದಿನಾಂಕ 06 ನವೆಂಬರ್ 2023ರಂದು ಶ್ರೀ ಸಾಯಿ ಮಂದಿರ, ವಿದ್ಯಾಗಿರಿ, ಜಿ: ಬಾಗಲಕೋಟ ಇಲ್ಲಿ ಬಾಗಲಕೋಟೆ ಜಿಲ್ಲೆಯ ಬಾಗಲಕೋಟ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಕಲಂ 34ರ ಮಾಹಿತಿ, ಸಹಕಾರಿಗಳು ಸಾಮಾನ್ಯ ಸಭೆಯ ಜರುಗಿಸಿದ ತರುವಾಯ ನಿರ್ವಹಿಸಬೇಕಾದ ಕೆಲಸ ಕಾರ್ಯಗಳು, ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ ಮತ್ತು ಕರ್ತವ್ಯಗಳು, ಅರ್ಧವಾರ್ಷಿಕ ಮಾಹಿತಿ ಸಲ್ಲಿಕೆ ಹಾಗೂ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಮಾಹಿತಿಗಳನ್ನು ನೀಡಲಾಯಿತು. ಈ ತರಬೇತಿಯಲ್ಲಿ 18 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಬೆಳಗಾವಿ ಜಿಲ್ಲೆ:** ದಿನಾಂಕ 24 ನವೆಂಬರ್ 2023ರಂದು ಸಂಯುಕ್ತ ಸಹಕಾರಿ, ಬೆಳಗಾವಿ ಪ್ರಾಂತೀಯ ಕಛೇರಿ, ತರಬೇತಿ ಸಭಾಂಗಣ, ಬೆಳಗಾವಿ, ಇಲ್ಲಿ ಬೆಳಗಾವಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಚುನಾವಣಾ ಮಾಹಿತಿ, ಕಲಂ 34ರ ಮಾಹಿತಿ, ಲೆಕ್ಕಪರಿಶೋಧನಾ ವರದಿ ಸಲ್ಲಿಕೆ ಕುರಿತು, ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಕೆ, ಆಡಳಿತ ಮಂಡಲಿ ಸಭೆಗಳನ್ನು ಜರುಗಿಸುವ ಕುರಿತು, ಸುಸ್ಥಿ ಸಾಲಗಳ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು, ಅರ್ಧ ವಾರ್ಷಿಕ ಮಾಹಿತಿ, ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಸಲ್ಲಿಕೆ ಕುರಿತು ಮಾಹಿತಿಗಳನ್ನು ನೀಡಲಾಯಿತು. ಈ ತರಬೇತಿಯಲ್ಲಿ 36 ಸೌಹಾರ್ದ ಸಹಕಾರಿಗಳಿಂದ 45 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಉತ್ತರಕನ್ನಡ ಜಿಲ್ಲೆ:** ದಿನಾಂಕ 27 ನವೆಂಬರ್ 2023 ರಂದು ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ, ಇಲ್ಲಿ ಹೊನ್ನಾವರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು. ಭಾಗವಹಿಸಿದ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಪ್ರಸ್ಥುತ ಸಹಕಾರಿ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ 18 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು



- **ಉತ್ತರಕನ್ನಡ ಜಿಲ್ಲೆ:** ದಿನಾಂಕ 27 ನವೆಂಬರ್ 2023 ರಂದು ಭಟ್ಕಳ ಸೌಹಾರ್ದ ಸಹಕಾರಿ ಸಂಘ ನಿ., ಭಟ್ಕಳ ಇಲ್ಲಿ ಭಟ್ಕಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು, ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು. ನಂತರದಲ್ಲಿ ಸಹಕಾರಿಯ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸಿ ಪ್ರಸ್ಥುತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ನೀಡಿದರು. ತರಬೇತಿಯಲ್ಲಿ 19 ಸೌಹಾರ್ದ ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು



- **ಉತ್ತರಕನ್ನಡ ಜಿಲ್ಲೆ:** ದಿನಾಂಕ 28 ನವೆಂಬರ್ 2023 ರಂದು ಮಿಸ್ಟ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಕಾರವಾರ ಇಲ್ಲಿ ಕಾರವಾರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು, ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ಮಾಹಿತಿ ನೀಡಲಾಯಿತು. ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು. ತರಬೇತಿಯಲ್ಲಿ ಭಾಗವಹಿಸಿದ ಸಹಕಾರಿಗಳೊಂದಿಗೆ ಮಾನ್ಯ ನಿರ್ದೇಶಕರು ಚರ್ಚಿಸುತ್ತ ಪ್ರಸ್ತುತ ಸಹಕಾರಿಗಳಿಗೆ ಅನ್ವಯಿಸುವ ವಿದ್ಯಮಾನಗಳ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ 21 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು.




- **ಉತ್ತರಕನ್ನಡ ಜಿಲ್ಲೆ:** ದಿನಾಂಕ 28 ನವೆಂಬರ್ 2023 ರಂದು ಜಿಲ್ಲಾ ಸಹಕಾರ ಯೂನಿಯನ್ ನಿ., ಕಛೇರಿ, ಕುಮುಟಾದಲ್ಲಿ ಕುಮುಟಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು,ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕರಾಜ್ಯ ಸೌಹಾರ್ದ

ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು. ಭಾಗವಹಿಸಿದ ಸಹಕಾರಿಯ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಪ್ರಸ್ಥುತ ಸಹಕಾರಿ ಕ್ಷೇತ್ರದ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿಯನ್ನು ಸಹಕಾರಿಗಳಿಗೆ ನೀಡಿದರು. ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 38 ಪ್ರತಿನಿಧಿಗಳು ಭಾಗವಹಿಸಿದ್ದರು.

- **ಉತ್ತರಕನ್ನಡ ಜಿಲ್ಲೆ:** ದಿನಾಂಕ 29 ನವೆಂಬರ್ 2023 ರಂದು ಹೋಟೆಲ್ ಅಂಕೋಲಾ ಇಂಟರ್‌ನ್ಯಾಷಿನಲ್, ಅಂಕೋಲಾ ಇಲ್ಲಿ ಅಂಕೋಲಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು, ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು. ತರಬೇತಿಯಲ್ಲಿ ಭಾಗವಹಿಸಿದ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸಿ ಪ್ರಸ್ಥುತ ಸಹಕಾರಿ ಕ್ಷೇತ್ರದ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ಒದಗಿಸಲಾಯಿತು. ತರಬೇತಿಯಲ್ಲಿ 21 ಸೌಹಾರ್ದ ಸಹಕಾರಿಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.
- **ಉತ್ತರಕನ್ನಡ ಜಿಲ್ಲೆ:** ದಿನಾಂಕ 29 ನವೆಂಬರ್ 2023 ರಂದು ಹೋಟೆಲ್ ಅಂಕೋಲಾ ಇಂಟರ್‌ನ್ಯಾಷನಲ್, ಅಂಕೋಲಾ ಇಲ್ಲಿ ಅಂಕೋಲಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು, ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ. ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ರವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಕಲಂ 34ರ ಮಾಹಿತಿಯನ್ನು ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನಾ ವರದಿ ಬಾಕಿ ಇರುವ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿಸದ ಸಹಕಾರಿಗಳಿಗೆ ಮಾಹಿತಿ ನೀಡಲಾಯಿತು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿಸುವ ಕುರಿತು ತರಬೇತಿಯಲ್ಲಿ ಚರ್ಚಿಸಲಾಯಿತು. ಕೊನೆಯಲ್ಲಿ

ಭಾಗವಹಿಸಿದ ಸಹಕಾರಿಯ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸುತ್ತಾ ಪ್ರಸ್ಥುತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ನೀಡಿದರು. ತರಬೇತಿಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು

- **ಬೆಳಗಾವಿ ಜಿಲ್ಲೆ :** ದಿನಾಂಕ 29 ನವೆಂಬರ್ 2023ರಂದು ಶ್ರೀ ಹರಿಪ್ರಿಯಾ ಸೇವಾ ಪತ್ತಿನ ಸೌಹಾರ್ದ ಸಹಕಾರಿ ನಿ., ಖಾನಾಪೂರ, ಇಲ್ಲಿ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಸೌಹಾರ್ದ ಸಹಕಾರಿ ಸಂಘಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜನೆ ಮಾಡಲಾಗಿತ್ತು. ತರಬೇತಿಯ ಯಲ್ಲಿ ಕಲಂ 34ರ ಮಾಹಿತಿ, 2023-24ರ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ ವಿವರ, ವಾರ್ಷಿಕ ಶುಲ್ಕ ಶಿಕ್ಷಣ ನಿಧಿ ಸಲ್ಲಿಕೆ, ಆಡಳಿತ ಮಂಡಳಿ ಸಭೆ ಜರುಗಿಸುವ ರೀತಿ, ಅರ್ಧ ವಾರ್ಷಿಕ ಮಾಹಿತಿ ಸಲ್ಲಿಕೆ, ಸಹಕಾರಿಯ ಚುನಾವಣೆ, ಸಹಕಾರಿ ಲೆಕ್ಕ ಪರಿಶೋಧನೆ ವರದಿ ಸಲ್ಲಿಕೆ ಕುರಿತಂತೆ ಸಹಕಾರಿಗಳಿಗೆ ಮಾರ್ಗದರ್ಶನ ನೀಡಲಾಯಿತು. ತರಬೇತಿಯಲ್ಲಿ 20 ಸಹಕಾರಿಗಳಿಂದ 31 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಉತ್ತರಕನ್ನಡ ಜಿಲ್ಲೆ:** ದಿನಾಂಕ 07 ಡಿಸೆಂಬರ್ 2023 ರಂದು ಹೋಟೆಲ್ ಸಾಮ್ರಾಟ್ ವಿನಾಯಕ ಸಭಾ ಭವನ, ಯಲ್ಲಾಪುರ ರಸ್ತೆ, ಶಿರಸಿ, ಇಲ್ಲಿ ಸಿದ್ದಾಪುರ, ಯಲ್ಲಾಪುರ, ಹಳಿಯಾಳ, ದಾಂಡೇಲಿ, ಮುಂಡಗೋಡ ಮತ್ತು ಜೋಯಿಡಾ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರುಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜನೆ ಮಾಡಲಾಗಿದ್ದು ಸಭೆಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ ಜೆ ನಾಯಕ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರವರು ವಹಿಸಿದ್ದರು ಸದರಿ ಸಭೆಯಲ್ಲಿ ಕಲಂ 34ರ ಮಾಹಿತಿ ಸಲ್ಲಿಸದಿರುವ ಸಹಕಾರಿಗಳಿಗೆ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನೆ ಬಾಕಿ ಇರುವ ಸಹಕಾರಿಗಳ ಅವಲೋಕನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ಮಾಡಿಲ್ಲದ ಸಹಕಾರಿಗಳಿಗೆ ಪಾವತಿಸುವಂತೆ ಮಾಹಿತಿ ನೀಡಲಾಯಿತು. ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಕಳುಹಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿ ಮಾಡುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ಸದಸ್ಯ ಸಹಕಾರಿ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸಿ ಪ್ರಸ್ಥುತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ಒದಗಿಸಲಾಯಿತು. ಸದರಿ ಸಭೆಯಲ್ಲಿ 16 ಸೌಹಾರ್ದ ಸಹಕಾರಿಗಳಿಂದ 18 ಪ್ರತಿನಿಧಿಗಳು ಭಾಗವಹಿಸಿದ್ದರು

- ದಿನಾಂಕ 07 ಡಿಸೆಂಬರ್ 2023 ರಂದು ಹೋಟೆಲ್ ಸಾಮ್ರಾಟ್ ವಿನಾಯಕ ಸಭಾ ಭವನ, ಯಲ್ಲಾಪುರ ರಸ್ತೆ, ಶಿರಸಿ, ಇಲ್ಲಿ ಶಿರಸಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿವಾಹಕರು ಮತ್ತು ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯರುಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜನೆ ಮಾಡಲಾಗಿದ್ದು ಸಭೆಯ ಅಧ್ಯಕ್ಷತೆಯನ್ನು ಶ್ರೀ ಮೋಹನದಾಸ ಜೆ ನಾಯಕ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ರವರು ವಹಿಸಿದ್ದರು ಸದರಿ ಸಭೆಯಲಿ ಕಲಂ 34ರ ಮಾಹಿತಿ ಸಲ್ಲಿಸದಿರುವ ಸಹಕಾರಿಗಳ ಮಾಹಿತಿ ನೀಡಿ ಸಲ್ಲಿಸುವಂತೆ ತಿಳಿಸಲಾಯಿತು, ಲೆಕ್ಕಪರಿಶೋಧನೆ ಬಾಕಿ ಇರುವ ಸಹಕಾರಿಗಳ ಅವಲೋಕನೆ, ವಾಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ಮಾಡಿಲ್ಲದ ಸಹಕಾರಿಗಳಿಗೆ ಮಾಹಿತಿ ನೀಡುವುದು, ಕಾಲಕಾಲಕ್ಕೆ ಸಂಯುಕ್ತ ಸಹಕಾರಿಗೆ ಮತ್ತು ಇಲಾಖೆಗಳಿಗೆ ಕಳುಹಿಸಬೇಕಾದ ಮಾಹಿತಿಗಳ ಕುರಿತು, ಈಸಿ ಪೇ ಮೂಲಕ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಪಾವತಿ ಮಾಡುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ಸದಸ್ಯ ಸಹಕಾರಿ ಪ್ರತಿನಿಧಿಗಳೊಂದಿಗೆ ಮಾನ್ಯ ನಿರ್ದೇಶಕರು ಸಂವಾದ ನಡೆಸಿ ಪ್ರಸ್ಥುತ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿ ಅಗತ್ಯ ಮಾಹಿತಿ ಒದಗಿಸಲಾಯಿತು. ಸದರಿ ಸಭೆಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.



### ❖ ವಿಷಯಾಧಾರಿತ ತರಬೇತಿ

- **ಬಾಗಲಕೋಟ ಜಿಲ್ಲೆ:** ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನ ಪೂರ್ವ ಸಿದ್ಧತೆ ಹಾಗೂ ಆದಾಯ ತೆರಿಗೆ, ಜಿಎಸ್ ಟಿ ವಿಷಯಗಳ ಬಗ್ಗೆ ದಿನಾಂಕ 18.05.2023 ರಂದು ತರಬೇತಿ ಕಾರ್ಯಕ್ರಮವನ್ನು ಶ್ರೀ ಸಾಯಿ ಮಂದಿರ್, ವಿದ್ಯಾಗಿರಿ, ಬಾಗಲಕೋಟೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿಗೆ ಉದ್ಘಾಟಕರಾಗಿ ಶ್ರೀ ದಾನಯ್ಯ ಹಿರೇಮಠ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬಾಗಲಕೋಟೆ ಇವರು ಆಗಮಿಸಿದ್ದರು. ಮೊದಲನೇಯ ಅವಧಿಯಲ್ಲಿ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ಕುರಿತು ಶ್ರೀ ಮಧುಕರ ಹೆಗ್ಡೆ, ಸನ್ನದು ಲೆಕ್ಕ ಪರಿಶೋಧಕರು ಇವರು ಉಪನ್ಯಾಸ ನೀಡಿದರು.

ಮಧ್ಯಾನ್ಹದ ಅವಧಿಯಲ್ಲಿ ಲೆಕ್ಕ ಪರಿಶೋಧನಾ ಪೂರ್ವ ಸಿದ್ಧತೆ ಕುರಿತು ಶ್ರೀ ಸುನಿಲ್ ಪತ್ತಾರ, ಸನ್ನದು ಲೆಕ್ಕ ಪರಿಶೋಧಕರು ಉಪನ್ಯಾಸ ನೀಡಿದರು. ಈ ತರಬೇತಿಯಲ್ಲಿ 270 ಪ್ರತಿನಿಧಿಗಳು ಭಾಗವಹಿಸಿದ್ದರು.



- **ವಿಜಯಪುರ ಜಿಲ್ಲೆ:** ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ದಿನಾಂಕ 24.05.2023 ರಂದು, ಸಂಗನ ಬಸವ ಮಂಗಲಕಾರ್ಯಲಯ ಲಿಂಗದ ಗುಡಿ, ವಿಜಯಪುರದಲ್ಲಿ ಆಯೋಜಿಸಲಾಗಿದ್ದು, ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಅಮರನಾಥ ಬಿರಾದಾರ, ಹಿರಿಯ ಸಹಕಾರಿಗಳು ವಿಜಯಪುರ ಇವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿ ಹಾಗೂ ಅತಿಥಿಯಾಗಿ ಶ್ರೀ ಸುನೀಲ ಪತ್ತಾರ, ಮಾನ್ಯ ಹಿರಿಯ ಸಹಾಯಕ ನಿರ್ದೇಶಕರು, ಲೆಕ್ಕ ಪರಿಶೋಧನಾ ಇಲಾಖೆ ಮುಧೋಳ. ಇನ್ನೋರ್ವ ಸಂಪನ್ಮೂಲ ವ್ಯಕ್ತಿ ಹಾಗೂ ಅತಿಥಿಯಾಗಿ, ಶ್ರೀ ಎಸ್ ಜಿ ಹೆಗಡೆ, ಮಾನ್ಯ ಸನ್ನದು ಲೆಕ್ಕ ಪರಿಶೋಧಕರು, ಶಿರಸಿ ಇವರು ಭಾಗವಹಿಸಿದ್ದರು. ಲೆಕ್ಕ ಪತ್ರಗಳ ಸಿದ್ದತೆ ವಿಷಯದ ಕುರಿತು ಶ್ರೀ ಸುನೀಲ ಪತ್ತಾರ ಇವರು ಹಾಗೂ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಶ್ರೀ ಎಸ್ ಜಿ ಹೆಗಡೆ ಇವರುಗಳು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ 208 ಸೌಹಾರ್ದ ಸಹಕಾರಿಗಳಿಂದ 239 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.
- **ಉತ್ತರಕನ್ನಡ ಜಿಲ್ಲೆ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತದ ವತಿಯಿಂದ ದಿನಾಂಕ: 10 ಜೂನ್ 2023 ರಂದು ಉತ್ತರಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಮತ್ತು ಜೋಯಿಡಾ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ಮಹಾಲಕ್ಷ್ಮಿ ಕಂಫರ್ಟ್, ಎನ್ ಹೆಚ್ 66, ಕುಮಟಾ ಇಲ್ಲಿ ಹಮ್ಮಿಕೊಳ್ಳಲಾಯಿತು. ತರಬೇತಿಯ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸ್ವಾನಂದ ಹೆಗಡೆ, ಸನ್ನದು ಲೆಕ್ಕಪರಿಶೋಧಕರು. ಬೆಂಗಳೂರು ಇವರು ನೆರವೇರಿಸಿದರು.



➢ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿ ಹಾಗೂ ಸ್ವಾಗತವನ್ನು ಶ್ರೀ ಮಹೇಶ್ ಶೆಟ್ಟಿ, ಮುಖ್ಯ ಕಾರ್ಯನಿರ್ವಾಹಕರು, ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ಸಂಘ ನಿ, ಹೊನ್ನಾವರ ಇವರು ನಡೆಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಉತ್ತರಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಕುಮಾರ್ ಎಂ ಜೆ ರವರು ನೆರವೇರಿಸಿದರು. ಮೊದಲನೆಯ ಅವಧಿಯಲ್ಲಿ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ವಿಷಯದ ಕುರಿತು ಶ್ರೀ ಸ್ವಾನಂದ ಹೆಗಡೆ ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಹಾಗೂ ಅಮಲ್ಜಾರಿ ಪ್ರಕ್ರಿಯೆ ಕುರಿತು ಶ್ರೀ ಗಂಗಾರಾಮ ಕೊಳಾಪ್ಟೆ ಇವರು ಉಪನ್ಯಾಸ ನೀಡಿದರು. ಒಟ್ಟು 70 ಸೌಹಾರ್ದ ಸಹಕಾರಿಗಳಿಂದ 99 ಪ್ರತಿನಿಧಿಗಳು ಭಾಗವಹಿಸಿದ್ದರು.




➢ **ಬೆಳಗಾವಿ ಜಿಲ್ಲೆ:** ದಿನಾಂಕ 30.05.2023ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಬೈಲಹೊಂಗಲ, ಸವದತ್ತಿ, ಚನ್ನಮ್ಮನ ಕಿತ್ತೂರು, ಯರಗಟ್ಟಿ, ರಾಮದುರ್ಗ ಮತ್ತು ಹುಕ್ಕೇರಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳಿಗೆ ಮಹಾಂತ ಭವನ, ಮಹಾಂತೇಶ ನಗರ, ಬೆಳಗಾವಿ, ಇಲ್ಲಿ ವಿಷಯಾಧಾರಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಶ್ರೀ ಶ್ರೀಕಾಂತ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರು ನಡೆಸಿಕೊಟ್ಟರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಉಪಸ್ಥಿತರಿದ್ದರು. ಮೊದಲನೆಯ ಅವಧಿಗೆ

ಅಂತಿಮ ಲೆಕ್ಕಪತ್ರಗಳ ತಯಾರಿ ವಿಷಯದ ಕುರಿತು ಶ್ರೀ ಶ್ರೀಕಾಂತ ಬರುವೆ ಹಾಗೂ ಎರಡನೇಯ ಅವಧಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 203 ಸೌಹಾರ್ದ ಸಹಕಾರಿಗಳಿಂದ 217 ಪ್ರತಿನಿಧಿಗಳು ಭಾಗವಹಿಸಿದ್ದರು.

- **ಬೆಳಗಾವಿ ಜಿಲ್ಲೆ:** ದಿನಾಂಕ 31.05.2023ರಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ರೋಟರಿ ಕ್ಲಬ್., ಗೋಕಾಕ ಇಲ್ಲಿ ವಿಷಯಾಧಾರಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಶ್ರೀ ಶ್ರೀಕಾಂತ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರು ನಡೆಸಿಕೊಟ್ಟರು. ಅತಿಥಿಯಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಸ್ವಾನಂದ ಹೆಗಡೆ ಇವರು ಉಪಸ್ಥಿತರಿದ್ದರು. ಮೊದಲನೆಯ ಅವಧಿಗೆ ಅಂತಿಮ ಲೆಕ್ಕಪತ್ರಗಳ ತಯಾರಿ ವಿಷಯದ ಕುರಿತು ಶ್ರೀ ಶ್ರೀಕಾಂತ ಬರುವೆ ಹಾಗೂ ಎರಡನೇಯ ಅವಧಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾಧ ಶ್ರೀ ಸ್ವಾನಂದ ಹೆಗಡೆ ಇವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 91 ಸೌಹಾರ್ದ ಸಹಕಾರಿಗಳಿಂದ 112 ಪ್ರತಿನಿಧಿಗಳು ಭಾಗವಹಿಸಿದ್ದರು.
- **ಬೆಳಗಾವಿ ಜಿಲ್ಲೆ:**ದಿನಾಂಕ 31.05.2023ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ, ನಿಪ್ಪಾಣಿ, ರಾಯಬಾಗ ಹಾಗೂ ಕಾಗವಾಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಭಾಭವನ ಚಿಕ್ಕೋಡಿ., ಇಲ್ಲಿ ವಿಷಯಾಧಾರಿತ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಅತಿಥಿಯಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ, ಇವರು ಉಪಸ್ಥಿತರಿದ್ದರು. ಮೊದಲನೆಯ ಅವಧಿಗೆ ಅಂತಿಮ ಲೆಕ್ಕಪತ್ರಗಳ ತಯಾರಿ ವಿಷಯದ ಕುರಿತು ವ್ಯವಸ್ಥಾಪಕರಾದ ಶ್ರೀ ಗಂಗಾರಾಮ ಕೊಳಾಪ್ಪೆ ಇವರು ಹಾಗೂ ಎರಡನೇಯ ಅವಧಿಗೆ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 132 ಸೌಹಾರ್ದ ಸಹಕಾರಿಗಳಿಂದ 138 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಗದಗ ಮತ್ತು ಧಾರವಾಡ ಜಿಲ್ಲೆ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 01 ಜೂನ್ 2023 ರಂದು ಗದಗ ಮತ್ತು ಧಾರವಾಡ ಜಿಲ್ಲೆಗಳ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ಮಂತ್ರ ರೆಸಿಡೆನ್ಸಿ ಹಾವೇರಿ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ನಾಗರಾಜ ದೇಶಪಾಂಡೆ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬೆಂಗಳೂರು ಇವರು ನೆರವೇರಿಸಿದರು ಹಾಗೂ ಸಭೆಯ ಅಧ್ಯಕ್ಷತೆಯನ್ನು ಶ್ರೀ ಮಲ್ಲಿಕಾರ್ಜುನ ಹೊರಕೇರಿ, ಮಾನ್ಯ ನಿರ್ದೇಶಕರು ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಹಾಗೂ ಶ್ರೀ ಹಿತೇಶಕುಮಾರ, ಸನ್ನದು ಲೆಕ್ಕಪರಿಶೋಧಕರು ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ, ಪ್ರಾಸ್ತಾವಿಕ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಕರಾದ ಶ್ರೀ ಕಲ್ಮೇಶ ಎಸ್ ಎಮ್ ನೆರವೇರಿಸಿದರು. ಮೊದಲನೆಯ ಅವಧಿಯ ವಿಷಯ ಅಂತಿಮ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ, ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಶ್ರೀ ಬಿ ವಿ ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು ಸಾಗರರವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಶ್ರೀ ಹಿತೇಶಕುಮಾರ ಸನ್ನದು ಲೆಕ್ಕಪರಿಶೋಧಕರು ಇವರು ಆದಾಯ ತೆರಿಗೆ ಮತ್ತು ಜಿ.ಎಸ್.ಟಿ. ವಿಷಯದ ಕುರಿತು ಉಪನ್ಯಾಸ ನೀಡಿದರು. ಹಾಗೂ ಬಡ್ಡಿ ದರ ನಿಗಧಿಪಡಿಸುವ ಕುರಿತಾದ ಸುತ್ತೋಲೆ ಮಾಹಿತಿಯನ್ನು ಶ್ರೀ ಕಲ್ಮೇಶ ಎಸ್ ಎಂ ಇವರು ನೀಡಿದರು.ಒಟ್ಟು 147 ಸೌಹಾರ್ದ ಸಹಕಾರಿಗಳಿಂದ 114 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



- **ಹಾವೇರಿ ಜಿಲ್ಲೆ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತದ ವತಿಯಿಂದ ದಿನಾಂಕ 02 ಜೂನ್ 2023 ರಂದು ಹಾವೇರಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ಶಿವಾ ರೆಸಿಡೆನ್ಸಿ, ಹಾವೇರಿ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ, ಆಗಮಿಸಿದ್ದರು ಹಾಗೂ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಷರೀಫ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಸಂತೋಷರವರು ನೆರವೇರಿಸಿದರು ಮತ್ತು ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಕಲ್ಮೇಶ್ ಎಸ್ ಎಂ, ಜಿಲ್ಲಾ ಸಂಯೋಜಕರುರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಅಕ್ಕಿಯಾಲೂರಿನ ಕಲ್ಪತರು ಸೌಹಾರ್ದ ಮುಖ್ಯ ಕಾರ್ಯ ನಿರ್ವಾಹಕರಾದ ಬಸವರಾಜ್ ಲಕ್ಕೊಳ್ಳಿ, ಇವರು ನೆರವೇರಿಸಿದರು. ಮೊದಲನೆಯ ಅವಧಿಯ ವಿಷಯ ಅಂತಿಮ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ, ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕುರಿತು ಶ್ರೀ ಬಿ ವಿ ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು ಸಾಗರರವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಶ್ರೀ ಬಿ ವಿ ರವೀಂದ್ರನಾಥ ಇವರು ಆದಾಯ ತೆರಿಗೆ ಮತ್ತು ಜಿ.ಎಸ್.ಟಿ. ವಿಷಯದ ಕುರಿತು ಉಪನ್ಯಾಸ ನೀಡಿದರು. ಹಾಗೂ ಬಡ್ಡಿ ದರ ನಿಗಧಿಪಡಿಸುವ ಕುರಿತಾದ ಸುತ್ತೋಲೆ ಮಾಹಿತಿಯನ್ನು ಶ್ರೀ ಕಲ್ಮೇಶ ಎಸ್ ಎಂ ಇವರು ನೀಡಿದರು. ಒಟ್ಟು 154 ಸೌಹಾರ್ದ ಸಹಕಾರಿಗಳಿಂದ 133 ಜನ ಭಾಗವಹಿಸಿದ್ದರು.



- **ಉತ್ತರಕನ್ನಡ ಜಿಲ್ಲೆ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ್ಯದ ವತಿಯಿಂದ ದಿನಾಂಕ: 03 ಜೂನ್ 2023 ರಂದು ಉತ್ತರಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಹಳಿಯಾಳ, ಮುಂಡಗೋಡ, ದಾಂಡೇಲಿ ಮತ್ತು ಜೊಯಿಡಾ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ಟಿ.ಎಸ್.ಎಸ್ ವಿನಾಯಕ ಸಭಾ ಭವನ ಶಿರಸಿ ಇಲ್ಲಿ ಹಮ್ಮಿಕೊಳ್ಳಲಾಯಿತು. ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ಶ್ರೀ ಮೋಹನದಾಸ ಜೆ ನಾಯಕ, ಮಾನ್ಯ ನಿರ್ದೇಶಕರು, ಕ ರಾ ಸೌ ಸಂ ಸ ನಿ, ಬೆಂಗಳೂರು ಇವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಂಜುನಾಥ ಶೆಟ್ಟಿ ಸನ್ನದು ಲೆಕ್ಕಪರಿಶೋಧಕರು. ಶಿರಸಿ ಇವರು ಆಗಮಿಸಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯ ಮಾನ್ಯರ ಸ್ವಾಗತವನ್ನು ಶ್ರೀ ಗಂಗಾರಾಮ ಕೊಳಾಪ್ಟೆ ವ್ಯವಸ್ಥಾಪಕ ಕ.ರಾ.ಸೌ.ಸಂ.ಸ. ನಿ ಬೆಳಗಾವಿ ಪ್ರಾಂತ ಇವರು ಮತ್ತು ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಬಸವರಾಜ ಹೊಂಗಲ ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ ಪ್ರಾಂತ ಇವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಉತ್ತರಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಕುಮಾರ್ ಎಂ ಜೆ ರವರು

ನೆರವೇರಿಸಿದರು.ಮೊದಲನೆಯ ಅವಧಿಯ ವಿಷಯ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ. ವಿಷಯದ ಕುರಿತು ಶ್ರೀ ಮಂಜುನಾಥ ಶೆಟ್ಟಿ ಸನ್ನದು ಲೆಕ್ಕಪರಿಶೋಧಕರು ಶಿರಸಿ ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಹಾಗೂ ಅಮಲ್ಜಾರಿ ಪ್ರಕ್ರಿಯೆ ಕುರಿತು ಶ್ರೀ ಗಂಗಾರಾಮ ಕೊಳಾಪ್ಟೆ ಇವರು ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 34 ಸೌಹಾರ್ದ ಸಹಕಾರಿಗಳಿಂದ 48 ಜನ ಭಾಗವಹಿಸಿದ್ದರು.



- **ಬಾಗಲಕೋಟ ಜಿಲ್ಲೆ:** ದಿನಾಂಕ 18.08.2023ರಂದು ಸಾಯಿ ಮಂದಿರ, ವಿದ್ಯಾಗಿರಿ, ಬಾಗಲಕೋಟೆ ಇಲ್ಲಿ ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ್‌ರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್ ಹಾಗೂ ಎಮ್. ಹೆಚ್. ದಡೆನ್ನವರ, ಅಧ್ಯಕ್ಷರು, ಶಿವಶಕ್ತಿ ಸೌಹಾರ್ದ ಸಹಕಾರಿ ನಿ, ಇವರು ರವರು ಭಾಗವಹಿಸಿದ್ದರು. ಸಭೆಯಲ್ಲಿ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಗಣ್ಯರ ಸ್ವಾಗತವನ್ನು ಶ್ರೀ ವೆಂಕಟೇಶ್ ರಾಥೋಡ್ ಇವರು ನೆರೆವೇರಿಸಿದರು.

ತರಬೇತಿಯ ಮೊದಲನೇಯ ಅವಧಿಯಲ್ಲಿ ಆಡಳಿತ ಮಂಡಳಿ ಸದಸ್ಯರ ಕರ್ತವ್ಯ,ಜವಾಬ್ದಾರಿ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ ವಿಷಯದ ಕುರಿತು ಶ್ರೀ ಗಂಗಾರಾಂ ಕೆ.ರವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಗೆ ದಾವಾ ದಾಖಲಾತಿ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ರಾಚಯ್ಯ ಹಿರೇಮಠ ಇವರು ಉಪನ್ಯಾಸ ನೀಡಿದರು.ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ವೆಂಕಟೇಶ ರಾಠೋಡ ಮತ್ತು ವಂದನಾರ್ಪಣೆಯನ್ನು ಶ್ರೀಮತಿ ರೇಷ್ಮಾ ಪಾಟೀಲ ಇವರುಗಳು ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 255 ಸೌಹಾರ್ದ ಸಹಕಾರಿಗಳಿಂದ 329 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



❖ **ಸಂಪರ್ಕ ಸಭೆ:**

➢ **ವಿಜಯಪುರ ಜಿಲ್ಲೆ:** ದಿನಾಂಕ 19.08.2023 ರಂದು ಶ್ರೀ ಸಂಗನ ಬಸವ ಮಂಗಲ ಕಾರ್ಯಲಯ ವಿಜಯಪುರ,. ಇಲ್ಲಿ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ ಪಾಟೀಲ ಯತ್ನಾಳರವರು ವಹಿಸಿದ್ದರು, ಅತಿಥಿಗಳಾಗಿ ಶ್ರೀ ಸುಭಾಷ ಇಂಡಿ, ಮಾನ್ಯ ವೃತ್ತಿಪರ ನಿರ್ದೇಶಕರು, ಶ್ರೀ ಸಿದ್ರಾಮಪ ಉಪ್ಪಿನ, ಮಾನ್ಯ ನಿಕಟಪೂರ್ವ ನಿರ್ದೇಶಕರು, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರ ಹಾಗೂ ಮಾನ್ಯ ವ್ಯವಸ್ಥಾಪಕರಾದ ಶ್ರೀ ಗಂಗಾರಾಮ ಕೊಳಾಪ್ಟೆರವರು ಭಾಗವಹಿಸಿದ್ದರು.

ಸಭೆಯಲ್ಲಿ ಗಣ್ಯ ಮಾನ್ಯರ ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಬಸವರಾಜ ಎಸ್.ರವರು ನೆರವೇರಿಸಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಭೆಯಲ್ಲಿ ಆಡಳಿತ ಮಂಡಳಿ ಸದಸ್ಯರ ಕರ್ತವ್ಯ, ಜವಾಬ್ದಾರಿ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ ವಿಷಯದ ಕುರಿತು ಶ್ರೀ ಗಂಗಾರಾಂ ಕೊಳಾಪ್ಟೆರವರು ಉಪನ್ಯಾಸ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ಪ್ರಭಯ್ಯ ಹಿರೇಮಠರವರು ನಿರೂಪಣೆ ಹಾಗೂ ಶ್ರೀಮತಿ ಪ್ರತಿಭಾ ಮಠರವರು ವಂದನಾರ್ಪಣೆ ಮಾಡಿದರು. ಒಟ್ಟು 258 ಸೌಹಾರ್ದ ಸಹಕಾರಿಗಳಿಂದ 319 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

➢ **ಹಾವೇರಿ ಜಿಲ್ಲೆ:** ದಿನಾಂಕ 15 ಸೆಪ್ಟೆಂಬರ್ 2023ರಂದು ರಾಣೇಬೆನ್ನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಜರುಗಿಸಲಾಯಿತು. ತರಬೇತಿಯ ಅಧ್ಯಕ್ಷತೆಯನ್ನು ಮಾನ್ಯ ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪರವರು ವಹಿಸಿದ್ದರು. ಮತ್ತು ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ ರವರುವಹಿಸಿದ್ದರು ಮತ್ತು ಹಾವೇರಿ ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಎಸ್ ಎಂ ಇವರು ಹಾಜರಿದ್ದರು. ತರಬೇತಿಯಲ್ಲಿ ಸಹಕಾರಿಗಳನ್ನು ಉದ್ದೇಶಿಸಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ

ಶರಣಗೌಡ ಪಾಟೀಲರವರು ಮಾತನಾಡಿದರು ರಾಣೆಬೆನ್ನೂರು ತಾಲ್ಲೂಕಿನ 18 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು.

❖ **ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ**

➢ **ಹಾವೇರಿ ಜಿಲ್ಲೆ:** ದಿನಾಂಕ 10.08.2023ರಂದು ಶಿವಾ ರೆಸಿಡೆನ್ಸಿ, ಹಾವೇರಿ ಇಲ್ಲಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ  ಶ್ರೀ ಕೆ ಶಿವಲಿಂಗಪ್ಪರವರು ವಹಿಸಿದ್ದರು. ಸಭೆಯಲ್ಲಿ ಉಪಸ್ಥಿತರಿದ್ದ ಗಣ್ಯ ಮಾನ್ಯರ ಸ್ವಾಗತವನ್ನು ಟಾಸ್ಕಫೋರ್ಸ್ ಮುಖ್ಯಸ್ಥರಾದ ಶ್ರೀ ಗಂಗಾರಾಮ ಕೊಳಾಪ್ಟೆ ರವರು ನಡೆಸಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲರವರು ಪ್ರಾಸ್ತಾವಿಕ ಭಾಷಣವನ್ನು ನಡೆಸಿಕೊಟ್ಟರು. ಮದ್ಯಾಹ್ನದ ಅವಧಿಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು ವಿಷಯದ ಕುರಿತು ಟಾಸ್ಕ್ ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮ ಕೊಳಾಪ್ಟೆರವರು ಉಪನ್ಯಾಸವನ್ನು ನೀಡಿದರು.ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಕಲ್ಮೇಶ್ ಎಸ್.ಎಮ್. ಇವರು ನಿರ್ವಹಿಸಿದರು.  ಸಭೆಯಲ್ಲಿ 106 ಸೌಹಾರ್ದ ಸಹಕಾರಿಗಳಿಂದ 144 ಜನ ಬಾಗವಹಿಸಿದ್ದರು.




➢ **ಉತ್ತರಕನ್ನಡ ಜಿಲ್ಲೆ:** ದಿನಾಂಕ 11.08.2023 ರ ಶುಕ್ರವಾರದಂದು ಟಿ.ಎಂ.ಎಸ್ ಸಭಾ ಭವನ ಶಿರಸಿ ಇಲ್ಲಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನಿರ್ವಹಿಸಿದರು. ವಿಶೇಷ ಆಹ್ವಾನಿತರಾಗಿ ಶ್ರೀ ಶಂಭುಲಿಂಗ ಹೆಗಡೆ, ಅಧ್ಯಕ್ಷರು ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಶ್ರೀ ಭಾಸ್ಕರ್ ಹೆಗಡೆ ಕಾಗೇರಿ, ಹಿರಿಯ ಸಹಕಾರಿಗಳು ಹಾಗೂ ಶ್ರೀಮತಿ ಸರಸ್ವತಿ ಎನ್ ರವಿ, ಸಂಯುಕ್ತ ಸಹಕಾರಿಯ ನಿಕಟ ಪೂರ್ವ ನಿರ್ದೇಶಕರು, ಇವರು ಭಾಗವಹಿಸಿದ್ದರು. ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಮಾನ್ಯ ಟಾಸ್ಕಫೋರ್ಸ ಮುಖ್ಯಸ್ಥರಾದ ಶ್ರೀ ಗಂಗಾರಾಮ ಕೊಳಾಪ್ಟೆ ಉಪಸ್ಥಿತರಿದ್ದರು. ಸಭೆಯ ಸ್ವಾಗತ ಕಾರ್ಯಕ್ರಮವನ್ನು ಶ್ರೀ ಗಣಪತಿ ನಾಯ್ಕ, ಮುಖ್ಯ ಕಾರ್ಯನಿರ್ವಾಹಕರು, ಸ್ಕೋಡ್ ವೇಸ್ ಮಹಿಳಾ

ಸೌಹಾರ್ದ ಸಹಕಾರಿ ನಿ., ಶಿರಸಿ ಇವರು ನಡೆಸಿಕೊಟ್ಟರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಮದ್ಯಾಹ್ನದ ಅವಧಿಗೆ ಸಹಕಾರಿಗಳ ಆರ್ಥಿಕ ಅಭಿವೃದ್ಧಿ ಯೋಜನೆಗಳು ಎಂಬ ವಿಷಯವಾಗಿ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಹೆಚ್.ಹರೀಶ್ ಕಾರ್ಪೊರೇಟ್ ಟ್ರೈನರ್, ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷಕುಮಾರ ಎಂ.ಜೆ. ಇವರು ನಡೆಸಿಕೊಟ್ಟರು. ಸಭೆಯಲ್ಲಿ ಒಟ್ಟು 103 ಸಹಕಾರಿಗಳಿಂದ 125 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಧಾರವಾಡ ಮತ್ತು ಗದಗ ಜಿಲ್ಲೆ:** ದಿನಾಂಕ 12.08.2023ರಂದು ಮಂತ್ರ ರೆಸಿಡೆನ್ಸಿ ಹುಬ್ಬಳ್ಳಿ., ಇಲ್ಲಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ್ ಹೊರಕೇರಿಯವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆರವರು ಭಾಗವಹಿಸಿದ್ದರು. ಸಭೆಯ ಸ್ವಾಗತವನ್ನು ಮಾನ್ಯ ಟಾಸ್ಕಫೋರ್ಸ ಮುಖ್ಯಸ್ಥರಾದ ಶ್ರೀ ಗಂಗಾರಾಮ ಕೊಳಪ್ಪೆಯವರು ನಡೆಸಿಕೊಟ್ಟರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು.ಮದ್ಯಾಹ್ನದ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಗಂಗಾರಾಮ ಕೊಳಾಪ್ಪೆ ಇವರು ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಜವಾಬ್ದಾರಿಗಳು ಹಾಗೂ ಕರ್ತವ್ಯಗಳ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು.ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಕಲ್ಮೇಶ್ ಎಸ್.ಎಮ್. ಇವರು ನಿರ್ವಹಿಸಿದರು. ಸಭೆಯಲ್ಲಿ ಒಟ್ಟು 117 ಸಹಕಾರಿಗಳಿಂದ 148 ಪ್ರತಿನಿಧಿಗಳು ಭಾಗವಹಿಸಿದ್ದರು.



- **ಬೆಳಗಾವಿ ಜಿಲ್ಲೆಯ ಬೆಳಗಾವಿ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಕಿತ್ತೂರು, ಯರಗಟ್ಟಿ, ಮುನವಳ್ಳಿ, ಖಾನಾಪುರ ಹಾಗೂ ಹುಕ್ಕೇರಿ ತಾಲ್ಲೂಕು :** ದಿನಾಂಕ 16.08.2023ರಂದು ಕನ್ನಡ ಭವನ, ರಾಮದೇವ ಹೋಟೆಲ್ ಹತ್ತಿರ, ಬೆಳಗಾವಿ, ಇಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಕಿತ್ತೂರು, ಯರಗಟ್ಟಿ,ಮುನವಳ್ಳಿ, ಖಾನಾಪುರ ಹಾಗೂ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು, ಅತಿಥಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲ್ ಹಾಗೂ ಶ್ರೀ ಸೂರ್ಯಕಾಂತ ರ್‍ಯಾಕಲೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಕಲಬುರಗಿ ಪ್ರಾಂತೀಯ ಕಛೇರಿ ಇವರುಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಹೇಳಿದರು. ಶ್ರೀ ರಾಚಯ್ಯ ಹಿರೇಮಠ ಸಹಾಯಕ/ಜಿಲ್ಲಾ ಸಂಯೋಜಕರು ಇವರು ಗಣ್ಯ ಮಾನ್ಯರ ಸ್ವಾಗತವನ್ನು ಮಾಡಿದರು. ಮದ್ಯಾಹ್ನದ ಅವಧಿಗೆ ಆಡಳಿತ ಮಂಡಳಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು ಈ ವಿಷಯದ ಕುರಿತು ಶ್ರೀ ಸೂರ್ಯಕಾಂತ ರಾಕಲೆ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಸಹಕಾರಿಗಳಿಂದ 580 ಕ್ಕೂ ಹೆಚ್ಚಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಮಲ್ಲಮ್ಮ ದೇಗಾಂವ., ಸಹಾಯಕಿ ಇವರು ನಿರ್ವಹಿಸಿದರು.




- **ಬೆಳಗಾವಿ ಜಿಲ್ಲೆ:** ದಿನಾಂಕ 16.08.2023 ರಂದು ಶ್ರೀ ಎಂ.ಕೆ.ಕವಟಗಿಮಠ ಕನ್ವೆನ್ಷನ್ ಹಾಲ್ ಚಿಕ್ಕೋಡಿ ಇಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಭಾಗ, ಕಾಗವಾಡ, ನಿಪ್ಪಾಣಿ ಹಾಗು ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ ವನ್ನು

ಹಮ್ಮಿಕೊಳ್ಳಲಾಯಿತು. ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು ಹಾಗೂ ಅತಿಥಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ವ್ಯವಸ್ಥಾಪಕರಾದ ಶ್ರೀ ಗಂಗಾರಾಮ ಕೊಳಾಪ್ಪೆರವರು ಭಾಗವಹಿಸಿದ್ದರು. ಸಭೆಯಲ್ಲಿ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬೆಳಗಿನ ಅವಧಿಯಲ್ಲಿ ಆಡಳಿತ ಮಂಡಳಿ ಸದಸ್ಯರ ಕರ್ತವ್ಯ, ಜವಾಬ್ದಾರಿ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ ವಿಷಯದ ಕುರಿತು ಶ್ರೀ ಗಂಗಾರಾಮ ಕೊಳಾಪ್ಪೆರವರು ಉಪನ್ಯಾಸ ನೀಡಿದರು. ನಂತರ ಮಧ್ಯಾಹ್ನ ಅವಧಿಗೆ ಸಂಪರ್ಕ ಸಭೆ ಜರುಗಿಸಲಾಯಿತು. ಒಟ್ಟು 205 ಸೌಹಾರ್ದ ಸಹಕಾರಿಗಳಿಂದ 814 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಬೆಳವಿ ರವರು ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು.




- **ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಮೂಡಲಗಿ ತಾಲೂಕು :** ದಿನಾಂಕ 17.08.2023 ರಂದು ರೋಟರಿ ಕ್ಲಬ್,ಬ್ಲಡ್ ಬ್ಯಾಂಕ್,ಯೋಗಿಕೊಳ್ಳ ರಸ್ತೆ, ಗೋಕಾಕ ಇಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಮೂಡಲಗಿ ತಾಲ್ಲೂಕಿನಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಯಿತು. ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು ಹಾಗೂ ಅತಿಥಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್ ಹಾಗೂ ಶ್ರೀ ಬಾಳಪ್ಪ ಬ. ಬೆಳಕೂಡ ಅಧ್ಯಕ್ಷರು, ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಕಲ್ಲೋಳಿ ರವರು ಭಾಗವಹಿಸಿದ್ದರು. ಸಭೆಯಲ್ಲಿ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ರಾಚಯ್ಯ ಹಿರೇಮಠರರವರು ಗಣ್ಯಮಾನ್ಯರ ಸ್ವಾಗತವನ್ನು ನಡೆಸಿಕೊಟ್ಟರು.ಮದ್ಯಾಹ್ನ ಅವಧಿಗೆ ಆಡಳಿತ ಮಂಡಳಿ

ಸದಸ್ಯರ ಕರ್ತವ್ಯ,ಜವಾಬ್ದಾರಿ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ ವಿಷಯದ ಕುರಿತು ಶ್ರೀ ಗಂಗಾರಾಮ ಕೆ. ಇವರು ಉಪನ್ಯಾಸ ನೀಡಿದರು. ಒಟ್ಟು 104 ಸೌಹಾರ್ದ ಸಹಕಾರಿಗಳಿಂದ 289 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವ್ಯವಸ್ಥಾಪಕರಾದ ಶ್ರೀ ಗಂಗರಾಮ ಕೆ. ಟಾಸ್ಕ್ ಫೋರ್ಸ್ ಅಧಿಕಾರಿರವರು ನಿರೂಪಣೆ ಹಾಗೂ ಹಾಗೂ ಶ್ರೀ ಸುಜಯ ಬೆಳವಿ, ವಂದನಾರ್ಪಣೆ ಮಾಡಿದರು.



❖ **ಇ–ಸ್ಟ್ಯಾಂಪ್ ತರಬೇತಿ:**

➢ **ವಿಜಯಪುರ ಜಿಲ್ಲೆ:** ದಿನಾಂಕ 28.07.2023ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ, ಇ–ಸ್ಟಾಂಪಿಂಗ್ ಕುರಿತು ತರಬೇತಿ ಕಾರ್ಯಕ್ರಮವನ್ನು, ಹೋಟೆಲ್ ಬೆಂಗಳೂರು ರೆಸ್ಟೋರೆಂಟ್., ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ವಿಜಯಪುರ ಜಿಲ್ಲೆಯ ಹಿರಿಯ ಸಹಕಾರಿಗಳು ಮತ್ತು ನೆರೆದಿದ್ದ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಸಹಯೋಗದಲ್ಲಿ ನೆರವೇರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ ಎಸ್ ನಾಯಕ, ಜಿಲ್ಲಾ ನೋಂದಣಿ ಕಛೇರಿ ವಿಜಯಪುರ ಇವರು ಭಾಗವಹಿಸಿದ್ದರು.

ಮೊದಲನೆಯ ಅವಧಿಗೆ ಇ–ಸ್ಟಾಂಪಿಂಗ್ ವಿಷಯದ ಕುರಿತು ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಸಿಂಧೆ ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯನ್ನು ಶ್ರೀ ವಿನೋದವ ಹೆಚ್.ಎ. ಹಿರಿಯ ಸಹಾಯಕರು, ಇವರು ಓ.ಟಿ.ಪಿ ಬೇಸ್ಡ್, ಇ–ಸ್ಟಾಂಪಿಂಗ್ ಫಾರಂಗಳು ಮತ್ತು ಸ್ಟೇಟ್ಮೆಂಟ್‌ಗಳ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 45 ಸೌಹಾರ್ದ ಸಹಕಾರಿಗಳಿಂದ 52 ಪ್ರತಿನಿಧಿಗಳು ಭಾಗವಹಿಸಿದ್ದರು.ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಪ್ರಭಯ್ಯ ಹಿರೇಮಠ್ ರವರು ನೆರವೇರಿಸಿದರು. ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್.ರವರು ನೆರವೇರಿಸಿದರು




- **ಬಾಗಲಕೋಟ ಜಿಲ್ಲೆ:** ದಿನಾಂಕ 29.07.2023 ರಂದು, ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ, ಇ–ಸ್ಟಾಂಪಿಂಗ್ ಕುರಿತು ತರಬೇತಿ ಕಾರ್ಯಕ್ರಮವನ್ನು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಬಾಗಲಕೋಟೆ ಜಿಲ್ಲಾ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ್, ಸ್ಟಾಕ್ ಹೋಲ್ಡಿಂಗ್ ಅಧಿಕಾರಿಯಾದ ಅನಿಲ್ ಕುಮಾರ್ ಮತ್ತು ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಸಹಯೋಗದಲ್ಲಿ ನೆರವೇರಿಸಲಾಯಿತು. ಶ್ರೀ ಅನಿಲ್ ಜಮಖಂಡಿ, ಜಿಲ್ಲಾ ನೋಂದಣಿ ಕಛೇರಿ ಬಾಗಲಕೋಟೆ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮೊದಲನೆ ಅವಧಿಗೆ ಇ–ಸ್ಟಾಂಪಿಂಗ್ ಕುರಿತು ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಸಿಂಧೆ ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯನ್ನು ಶ್ರೀ ವಿನೋದ ಮಾನ್ಯ ಹಿರಿಯ ಸಹಾಯಕರು, ಇವರು ಓಟಿಪಿ ಬೇಸ್ಡ್, ಇ–ಸ್ಟಾಂಪಿಂಗ್ ಫಾರಂಗಳು ಮತ್ತು ಸ್ಟೇಟ್ಮೆಂಟ್ ಗಳ ಕುರಿತು ಉಪನ್ಯಾಸ ನೀಡಿದರು. ಸ್ಟಾಕ್ ಹೋಲ್ಡಿಂಗ್ ಅಧಿಕಾರಿಗಳು ಈ ಸ್ಟಾಂಪಿಂಗ್ ಆರ್ಟಿಕಲ್ಸ್ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 58 ಸೌಹಾರ್ದ ಸಹಕಾರಿಗಳಿಂದ 75 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ವೆಂಕಟೇಶ್ ರಾಠೋಡ್ ರವರು ನೆರವೇರಿಸಿದರು. ವಂದನಾರ್ಪಣೆಯನ್ನು ಸಹಾಯಕಿಯಾದ ಶ್ರೀಮತಿ ರೇಷ್ಮಾ ಪಾಟೀಲ್‌ರವರು ನೆರವೇರಿಸಿದರು.



- **ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಮೂಡಲಗಿ, ಯರಗಟ್ಟಿ, ಗೋಕಾಕ ಮತ್ತು ಕಿತ್ತೂರು ತಾಲ್ಲೂಕು :** ದಿನಾಂಕ 03.08.2023ರಂದು ಇಂದು ನಡೆದ ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಮೂಡಲಗಿ, ಯರಗಟ್ಟಿ, ಗೋಕಾಕ ಮತ್ತು ಕಿತ್ತೂರು ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ "ಇ-ಸ್ಟಾಂಪಿಂಗ್ ಕೇಂದ್ರದ ಸಿಬ್ಬಂದಿಗಳ" ತರಬೇತಿಯನ್ನು ಬೆಳಗಾವಿಯ ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗಣದಲ್ಲಿ ಜರುಗಿಸಲಾಯಿತು. ತರಬೇತಿಯ ಉದ್ಘಾಟನೆಯನ್ನು ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದ ಶ್ರೀ ಪುರುಶೋತ್ತಮ್‌ರವರು, ಹುಕ್ಕೇರಿಯ ನೋಂದಣಾಧಿಕಾರಿಗಳಾದ ಶ್ರೀ ಎಂ.ಬಿ.ಬಾನಿಮಠರವರು, ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು, ಮಾನ್ಯ ಟಾಸ್ಕ್‌ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮ ಕೊಳಾಪ್ಪೆರವರು ಹಾಗೂ ಹಿರಿಯ ಸಹಾಯಕರಾದ ಶ್ರೀ ವಿನೋದ ಹೆಚ್.ಎ.ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಪ್ರಾಂತೀಯ ಕಛೇರಿಯ ಸಹಾಯಕಿಯರಾದ ಶ್ರೀಮತಿ ಅಶ್ವಿನಿ ಕಮ್ಮಾರ ಮತ್ತು ಶ್ರೀಮತಿ ಮಲ್ಲಮ್ಮ ದೇಗಾಂವ ಇವರುಗಳು ನಡೆಸಿಕೊಟ್ಟರು. ಕಾರ್ಯಕ್ರದಲ್ಲಿ ಉಪಸ್ಥಿತರಿರುವ ಗಣ್ಯ ಮಾನ್ಯರ ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಶ್ರೀ ಭವನ್‌ರಾವ್ ಇವರು ನಡೆಸಿಕೊಟ್ಟರು. ತರಬೇತಿಯ ಮೊದಲನೆಯ ಅವಧಿಯನ್ನು ಸ್ಟಾಕ್ ಹೋಲ್ಡಿಂಗ್ ಅಧಿಕಾರಿಗಳು ಮತ್ತು ಉಪನೊಂದಣಾಧಿಕಾರಿಗಳು ನಡೆಸಿಕೊಟ್ಟರು. ಎರಡನೆಯ ಅವಧಿಯನ್ನು ಸಂಪನ್ಮೂಲ ವ್ಯಕ್ತಿಯಾದ ಶ್ರೀ ವಿನೋದ್. ಹೆಚ್.ಎರವರು ನಡೆಸಿಕೊಟ್ಟರು.ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಭವನ್‌ರಾವ್ ಇವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ರಾಚಯ್ಯ ಹಿರೇಮಠ ಇವರು ನಿರ್ವಹಿಸರು. ಸದರಿ ಸಭೆಯಲ್ಲಿ 60 ಸೌಹಾರ್ದ ಸಹಕಾರಿಗಳ 90 ಪ್ರತಿನಿಧಿಗಳು ಹಾಜರಿದ್ದರು.



- **ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಭಾಗ, ಕಾಗವಾಡ, ನಿಪ್ಪಾಣಿ ಮತ್ತು ಹುಕ್ಕೇರಿ ತಾಲ್ಲೂಕು:** ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಭಾಗ, ಕಾಗವಾಡ, ನಿಪ್ಪಾಣಿ ಮತ್ತು ಹುಕ್ಕೇರಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಇ-ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ ಇಂದು ದಿನಾಂಕ: 04.08.2023ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಸಭಾಭವನ ಚಿಕ್ಕೋಡಿ, ಇಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ವೇದಿಕೆ ಮೇಲಿನ ಗಣ್ಯಮಾನ್ಯರು ನೆರವೇರಿಸಿದರು.




ಕಾರ್ಯಕ್ರಮದಲ್ಲಿ ಗಣ್ಯ ಮಾನ್ಯರ ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಬೆಳವಿರವರು ನೆರವೇರಿಸಿದರು. ತರಬೇತಿ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಬೆಳಗಾವಿ ಪ್ರಾಂತ್ಯದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಹೇಳಿದರು. ಹುಕ್ಕೇರಿ ತಾಲ್ಲೂಕಿನ ನೋಂದಣಿ ಅಧಿಕಾರಿಗಳಾದ ಶ್ರೀ ಎಂ.ಬಿ.ಬಾನಿಮಠರವರು, ಕೇಂದ್ರ ಕಚೇರಿಯ ಈ ಸ್ಟ್ಯಾಂಪಿಂಗ್ ವಿಭಾಗದ ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ರಾವ್‌ಶಿಂಧೆರವರು ಹಾಗೂ ಹಿರಿಯ ಸಹಾಯಕರಾದ ಶ್ರೀ ವಿನೋದ ಹೆಚ್.ಎ.ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಬೆಳವಿರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ 48 ಸೌಹಾರ್ದ ಸಹಕಾರಿಗಳಿಂದ 54 ಪ್ರತಿನಿಧಿಗಳು ಭಾಗವಹಿಸಿದ್ದರು.




- **ಧಾರವಾಡ ಗದಗ ಮತ್ತು ಹಾವೇರಿ ಜಿಲ್ಲೆ :** ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ ದಿನಾಂಕ 05.08.2023ರಂದು ಮಂತ್ರ ರೆಸಿಡೆನ್ಸಿ., ಹುಬ್ಬಳ್ಳಿ ಇಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ವೇದಿಕೆ ಮೇಲಿನ ಗಣ್ಯಮಾನ್ಯರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸ್ಟಾಕ್ ಹೋಲ್ಡಿಂಗ್ ಅಧಿಕಾರಿಗಳಾದ ಶ್ರೀ ರಾಘವೇಂದ್ರ ಮತ್ತು ಶ್ರೀ ಸುಧಾಕರ ಹುಬ್ಬಳ್ಳಿ ತಾಲ್ಲೂಕಿನ ನೋಂದಣಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ್‌ರವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಗಣ್ಯಮಾನ್ಯರ ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ್‌ರವರು ನೆರವೇರಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಶಿಂಧೆರವರು ಹೇಳಿದರು.

ಕೇಂದ್ರ ಕಚೇರಿಯ ಇ– ಸ್ಟ್ಯಾಂಪಿಂಗ್ ವಿಭಾಗದ ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ರಾವ್ ಶಿಂಧೆರವರು ಹಾಗೂ ಹಿರಿಯ ಸಹಾಯಕರಾದ ಶ್ರೀ ವಿನೋದರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ್‌ರವರು ನೆರವೇರಿಸಿದರು.ಕಾರ್ಯಕ್ರಮದಲ್ಲಿ 61 ಸೌಹಾರ್ದ ಸಹಕಾರಿಗಳಿಂದ 79 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



❖ **ಸಮಾಲೋಚನೆ ಸಭೆ**

➢ **ಬೆಳಗಾವಿ ಜಿಲ್ಲೆ:** ದಿನಾಂಕ 28 ಮಾರ್ಚ 2024ರಂದು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಸಹಕಾರಿಯ ಸಭಾಂಗಣದಲ್ಲಿ ಚಿಕ್ಕೋಡಿ, ಅಥಣಿ, ನಿಪ್ಪಾಣಿ, ರಾಯಭಾಗ ಮತ್ತು ಕಾಗವಾಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಸಮಾಲೋಚನೆ ಸಭೆಯನ್ನು ಜರುಗಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಯಲ್ಲಿ ವಕೀಲರು ಹಾಗೂ ಸಹಕಾರಿಗಳಾದ ಶ್ರೀ ಬಾಬುರಾವ ಯಾದವರವರು ಸೇರಿದಂತೆ ವಿವಿಧ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿದ್ದರು. ಒಟ್ಟು 22 ಸೌಹಾರ್ದ ಸಹಕಾರಿಗಳಿಂದ 26 ಪ್ರತಿನಿಧಿಗಳು ಹಾಗೂ ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ 'ಇತ್ತೀಚೆಗೆ ರಾಜ್ಯ ಸರ್ಕಾರವು ದಿನಾಂಕ 16 ಮಾರ್ಚ 2024ರಂದು ಹೊರಡಿಸಿರುವ ಆದೇಶದ ಪ್ರಕಾರ ಸೌಹಾರ್ದ ಸಹಕಾರಿಗಳು ಸಂಗ್ರಹಿಸುತ್ತಿರುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವುದು ಸೇರಿದಂತೆ ಇನ್ನಿತರ ಅಂಶಗಳನ್ನು ಸೇರಿಸಿ ಹೊರಡಿಸಿದ ನಿರ್ದೇಶನದ ಕುರಿತು ಸಹಕಾರಿಗಳ ಮೇಲೆ ಜರಗುವ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲಾಯಿತು. ಈ ವಿಷಯದ ಕುರಿತು ಸಹಕಾರಿಗಳಿಂದ ಅಭಿಪ್ರಾಯ, ಸಲಹೆಗಳನ್ನು ಪಡೆದುಕೊಂಡು ಮುಂದಿನ ಕ್ರಮ ಜರುಗಿಸುವ ಕುರಿತು ನಿರ್ಣಯ ಕೈಗೊಳ್ಳಲಾಯಿತು.



❖ **ಬೆಳಗಾವಿ ಜಿಲ್ಲೆ:** ದಿನಾಂಕ 29 ಮಾರ್ಚ 2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ, ಬೆಳಗಾವಿ. ಬೆಳಗಾವಿಯ ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗಣದಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಹುಕ್ಕೇರಿ, ಯರಗಟ್ಟಿ, ಗೋಕಾಕ, ಚೆನ್ನಮ್ಮನ ಕಿತ್ತೂರು ಮತ್ತು ಮೂಡಲಗಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಸಮಾಲೋಚನೆ ಸಭೆಯನ್ನು ಜರುಗಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಯಲ್ಲಿ ಶ್ರೀ ಬಸವರಾಜ್ ಸುಲ್ತಾನಪುರೆ ವಕೀಲರು ಹಾಗೂ ಅಧ್ಯಕ್ಷರು, ಶಿವಾ ಪತ್ತಿನ ಸೌಹಾರ್ದ ಸಹಕಾರಿ ನಿ ಬೆಳಗಾವಿ, ಶ್ರೀ ಸಿ. ಟಿ. ಮಜ್ಜಿಗೆ ವಕೀಲರು, ಅಧ್ಯಕ್ಷರು ಶ್ರೀ ಸಾಯಿ ಶ್ಯಾಮ ಸೌಹಾರ್ದ ಸಹಕಾರಿ ನಿ ಬೆಳಗಾವಿ, ಶ್ರೀ ನಿಂಗನಗೌಡ ದೊಡಗೌಡರ, ನಿರ್ದೇಶಕರು, ವಿಜಯಲಕ್ಷ್ಮಿ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ ಹಾಗೂ ಶ್ರೀ ಅನೀಲ ಪಾಟೀಲ, ಅಧ್ಯಕ್ಷರು ಪ್ಯಾಟ್ಸನ್ ಸೌಹಾರ್ದ ಸಹಕಾರಿ ನಿ, ಬೆಳಗಾವಿ ಇವರುಗಳು ಉಪಸ್ಥಿತರಿದ್ದರು.



ಸಭೆಯಲ್ಲಿ ಒಟ್ಟು 73 ಸೌಹಾರ್ದ ಸಹಕಾರಿಗಳಿಂದ 89 ಪ್ರತಿನಿಧಿಗಳು ಸೇರಿದಂತೆ ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ 'ಇತ್ತೀಚೆಗೆ ರಾಜ್ಯ ಸರ್ಕಾರವು ದಿನಾಂಕ 16 ಮಾರ್ಚ 2024ರಂದು ಹೊರಡಿಸಿರುವ ಆದೇಶದ ಪ್ರಕಾರ ಸೌಹಾರ್ದ ಸಹಕಾರಿಗಳು ಸಂಗ್ರಹಿಸುತ್ತಿರುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವುದು ಸೇರಿದಂತೆ ಇನ್ನಿತರ ಅಂಶಗಳನ್ನು ಸೇರಿಸಿ ಹೊರಡಿಸಿದ ನಿರ್ದೇಶನದ ಕುರಿತು ಸಹಕಾರಿಗಳ ಮೇಲೆ ಜರಗುವ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ಸಹಕಾರಿಗಳಿಂದ ಅಭಿಪ್ರಾಯ, ಸಲಹೆಗಳನ್ನು ಪಡೆದುಕೊಂಡು ಮುಂದಿನ ಕ್ರಮ ಜರುಗಿಸುವ ಕುರಿತು ನಿರ್ಣಯ ಕೈಗೊಳ್ಳಲಾಯಿತು.



❖ **ಆಡಳಿತ ಪರಿಣಿತಿ ತರಬೇತಿ ಸಭೆ:**ದಿನಾಂಕ: 29.01.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತದ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ಆಡಳಿತ ಪರಿಣಿತಿ ತರಬೇತಿ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ನೆರವೇರಿಸಿದರು. ವೇದಿಕೆ ಅದ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿರವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಎಸ್.ಜಿಜೋಶಿಯವರು, ಭಾಗವಹಿಸಿದ್ದರು. ವೇದಿಕೆ ಮೇಲೆ ಸಹಕಾರಿಗಳಾದ ಮಾನ್ಯ ಶ್ರೀ ಹೆಚ್ ವಿ ಭರಮಗೌಡ್ರ ಮತ್ತು ಶ್ರೀ ಹನಮಂತಪ್ಪ ವಡ್ಡರ್ ಮತ್ತು ವಸುಂಧರಾ ಸೌಹಾರ್ದ ಸಹಕಾರಿ ಅಧ್ಯಕ್ಷರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ವಿಷಯದ ಕುರಿತು ಶ್ರೀ ಎಸ್ ಜಿ ಜೋಶಿ ಉಪನ್ಯಾಸಕರು ಮಾಹಿತಿ ನೀಡಿದರು. ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಮತ್ತು ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 134 ಸೌಹಾರ್ದ ಸಹಕಾರಿಗಳಿಂದ 183 ಜನ ಭಾಗವಹಿಸಿದ್ದರು.



**ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು**

➢ **ಹಾವೇರಿ ಜಿಲ್ಲೆ:** ದಿನಾಂಕ 26.12.2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಹಾವೇರಿ ಜಿಲ್ಲೆ ವತಿಯಿಂದ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ರಜನಿ ಸಭಾಂಗಣ, ಹಾವೇರಿ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅದ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ವೇದಿಕೆ ಅದ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ ಶಿವಲಿಂಗಪ್ಪನವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಜಿ ಕೆ ರಾಮಪ್ಪ ತರಬೇತಿ ಉಪನ್ಯಾಸಕರು ಭಾಗವಹಿಸಿದ್ದರು. ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್

ಹೊಂಗಲ್‌ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕಲ್ಮೇಶ ಎಸ್ ಎಂ ರವರು ಉಪಸ್ಥಿತರಿದ್ದರು. ಸಹಕಾರಿಗಳಿಗೆ ನೂತನ ಲೆಕ್ಕಪರಿಶೋಧನಾ ನಮೂನೆ ಹಾಗೂ ಸಹಕಾರ ಆರ್ಥಿಕ ಶಿಸ್ತು ಕುರಿತಾಗಿ ಶ್ರೀ ಜಿ ಕೆ ರಾಮಪ್ಪ ತರಬೇತಿ ಉಪನ್ಯಾಸಕರು ಮಾಹಿತಿ ನೀಡಿದರು. ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು, ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್‌ರವರು ಮಾಹಿತಿ ನೀಡಿದರು. ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 96 ಸೌಹಾರ್ದ ಸಹಕಾರಿಗಳಿಂದ 114 ಜನ ಭಾಗವಹಿಸಿದ್ದರು.




- **ಬಾಗಲಕೋಟ ಜಿಲ್ಲೆ:** ದಿನಾಂಕ 27.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಇದರ ವತಿಯಿಂದ ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಸ್. ಆರ್. ಪಾಟೀಲ್, ಮಾಜಿ ಸಚಿವರು ಇವರು ನೆರೆವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಎನ್. ಪಾಟೀಲ್‌ರವರು ವಹಿಸಿದ್ದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲರವರು ಉಪಸ್ಥಿತರಿದ್ದರು. ಸಹಕಾರಿಗಳಿಗೆ ಆರ್ಥಿಕ್ ಸಬಲತೆ ಮಾನದಂಡಗಳು, ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲ ರವರು ಉಪನ್ಯಾಸ ನೀಡಿದರು. ಲೆಕ್ಕ ಪರಿಶೋಧನೆ ವರದಿ ಬಗ್ಗೆ ಮಾನ್ಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಸುನಿಲ್ ಪತ್ತಾರ, ಉಪನ್ಯಾಸವನ್ನು ನೀಡಿದರು. ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 290 ಜನರು ಭಾಗವಹಿಸಿದ್ದರು.ಕಾರ್ಯಕ್ರಮದ ನಿರೂಪಣೆ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೆಂಕಟೇಶ್ ರಾಥೋಡ್ ನೆರೆವೇರಿಸಿದರು ಮತ್ತು ವಂದನಾರ್ಪಣೆಯನ್ನು ಶ್ರೀಮತಿ ರೇಷ್ಮಾ ಪಾಟೀಲ್ ಇವರು ನಡೆಸಿಕೊಟ್ಟರು.



- **ಉತ್ತರಕನ್ನಡ ಜಿಲ್ಲೆ:** ದಿನಾಂಕ 27.12.2023 ರಂದು ಶಿರಸಿ, ಸಿದ್ದಾಪುರ, ಯಲ್ಲಾಪುರ, ಹಳಿಯಾಳ, ದಾಂಡೇಲಿ ಮತ್ತು ಮುಂಡಗೋಡ ತಾಲ್ಲುಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಕರ ವಾರ್ಷಿಕ ಸಭೆಯನ್ನು ವಿನಾಯಕ ಸಭಾ ಭವನ, ಸಾಮ್ರಾಟ್ ಅತಿಥಿ ಗೃಹ, ಯಲ್ಲಾಪುರ ರಸ್ತೆ, ಶಿರಸಿ ಇಲ್ಲಿ ಹಮ್ಮಿಕೊಳ್ಳಲಾಯಿತು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ಜೆ. ನಾಯಕರವರು ವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಜಿ ಕೆ ರಾಮಪ್ಪ, ನಿವೃತ್ತ ಉಪ ನಿರ್ದೇಶಕರು ಲೆಕ್ಕಪರಿಶೋಧನಾ ಇಲಾಖೆ ಇವರು ಭಾಗವಹಿಸಿದ್ದರು, ಕಾರ್ಯಕ್ರಮಕ್ಕೆ ಶ್ರೀ ಶಿವಾನಂದ ಶೇಟ್, ಉಪ ಪ್ರಧಾನ ವ್ಯವಸ್ಥಾಪಕರು, ಶ್ರೀಮಾತಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಹಿರೇಸರ, ಉಮ್ಮಚಗಿ, ಇವರು ಸ್ವಾಗತಕೋರಿದರು, ಶ್ರೀ ಸಂತೋಷ್‌ಕುಮಾರ್ ಎಂ ಜೆ ಸೌಹಾರ್ದ ಅಭಿವೃದ್ದಿ ಅಧಿಕಾರಿ ಇವರು ನಿರೂಪಿಸಿ ವಂದಿಸಿದರು. ನೂತನ ಲೆಕ್ಕಪರಿಶೋಧನಾ ಮಾದರಿ ಮತ್ತು ಹಣಕಾಸು ನಿರ್ವಹಣೆ ಎಂಬ ವಿಷಯವಾಗಿ ಶ್ರೀ ಜಿ ಕೆ ರಾಮಪ್ಪ ನಿವೃತ್ತ ಉಪ ನಿರ್ದೇಶಕರು ಲೆಕ್ಕಪರಿಶೋಧನಾ ಇಲಾಖೆ ಇವರು ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಯ ಸುತ್ತೋಲೆ ಮತ್ತು ಸೌಹಾರ್ದ ಸಹಕಾರಿಗಳಿಗೆ ಇತರೆ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ ಎಮ.ಜೆ. ಇವರು ಉಪನ್ಯಾಸ ನೀಡಿದರು. ಒಟ್ಟು 36 ಸೌಹಾರ್ದ ಸಹಕಾರಿಗಳಿಂದ 44 ಸಿಬ್ಬಂದಿಗಳು ಸಭೆಯಲ್ಲಿ ಹಾಜರಿದ್ದರು.



- **ಉತ್ತರಕನ್ನಡ ಜಿಲ್ಲೆ:** ದಿನಾಂಕ 28.12.2023 ರಂದು ತಾಲ್ಲೂಕುಗಳಾದ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ಮತ್ತು ಜೋಯಿಡಾ ತಾಲ್ಲುಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಕರ ವಾರ್ಷಿಕ ಸಭೆಯನ್ನು ಮಹಾಲಕ್ಷ್ಮೀ ಕಂಫರ್ಟ್, ಬಿ ಎಂ ರಸ್ತೆ, ಕುಮಟಾ ಇಲ್ಲಿ ಹಮ್ಮಿಕೊಳ್ಳಲಾಯಿತು, ಸಂಪನ್ಮೂಲ ವ್ಯಕ್ತಿಯಾದ ಶ್ರೀ ಜಿ ಕೆ ರಾಮಪ್ಪ, ಹಾಗೂ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಪ್ರಶಾಂತ್ ಕೆ ಪಿ ಹವ್ಯಕ ಸೌಹಾರ್ದ ಸಹಕಾರಿ ಸಂಘ ನಿ ಕುಮಟಾ ಇವರು ಸ್ವಾಗತ ಕೋರಿದರು ಶ್ರೀ ಸಂತೋಷ್‌ಕುಮಾರ್ ಎಂ ಜೆ ಸೌಹಾರ್ದ ಅಭಿವೃದ್ದಿ ಅಧಿಕಾರಿ ಇವರು ನಿರೂಪಿಸಿ ವಂದಿಸಿದರು. ನೂತನ ಲೆಕ್ಕಪರಿಶೋಧನಾ ಮಾದರಿ ಮತ್ತು ಹಣಕಾಸು ನಿರ್ವಹಣೆ ಎಂಬ ವಿಷಯವಾಗಿ ಶ್ರೀ ಜಿ ಕೆ ರಾಮಪ್ಪ ನಿವೃತ್ತ ಉಪ ನಿರ್ದೇಶಕರು ಲೆಕ್ಕಪರಿಶೋಧನಾ ಇಲಾಖೆ ಇವರು ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಯ ಸುತ್ತೋಲೆ ಮತ್ತು ಸೌಹಾರ್ದ ಸಹಕಾರಿಗಳಿಗೆ ಇತರೆ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಶ್ರೀ ಸಂತೋಷ ಎಮ.ಜೆ. ಉಪನ್ಯಾಸ ನೀಡಿದರು. ಒಟ್ಟು 86 ಸೌಹಾರ್ದ ಸಹಕಾರಿಗಳಿಂದ 94 ಸಿಬ್ಬಂದಿಗಳು ಸಭೆಯಲ್ಲಿ ಹಾಜರಿದ್ದರು.



- **ಬೆಳಗಾವಿ ಜಿಲ್ಲೆ:** ದಿನಾಂಕ: 29.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಇದರ ವತಿಯಿಂದ ' ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುನೀಲ ಪತ್ತಾರ, ಸಹಾಯಕ ನಿರ್ದೆಶಕರು, ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ನೆರವೇರಿಸಿದರು. ಕಾರ್ಯ ಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲರವರು ಉಪಸ್ಥಿತರಿದ್ದರು. ಸಹಕಾರಿಗಳಿಗೆ ಆರ್ಥಿಕ ಸಬಲತೆಯ ಮಾನದಂಡಗಳು, ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲ ರವರು ಉಪನ್ಯಾಸ ನೀಡಿದರು. ಲೆಕ್ಕ ಪರಿಶೋಧನೆ ವರದಿ ಬಗ್ಗೆ ಶ್ರೀ ಸುನೀಲ ಪತ್ತಾರ ಇವರು ಉಪನ್ಯಾಸವನ್ನು ನೀಡಿದರು ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಮೂಡಲಗಿ ತಾಲೂಕಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 131 ಜನರು ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆ ಮತ್ತು ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯ ಹಿರೇಮಠ ನೆರವೇರಿಸಿದರು.



- **ವಿಜಯಪುರ ಜಿಲ್ಲೆ:** ದಿನಾಂಕ: 29.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಇದರ ವತಿಯಿಂದ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಸಂಗನಬಸವ ಮಂಗಲಕಾರ್ಯಾಲಯ, ವಿಜಯಪುರ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟಕರಾಗಿ ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ.ಪಾಟೀಲ ಇವರು ವಹಿಸಿದ್ದರು. ಸಭೆಯಲ್ಲಿ ಅತಿಥಿಗಳಾಗಿ ಶ್ರೀ ಅಮರನಾಥ ಬಿರಾದಾರ ಇವರು ಉಪಸ್ಥಿತರಿದ್ದರು. ಲೆಕ್ಕ ಪರಿಶೋಧನೆ ವರದಿಯ ನೂತನ ನಮೂನೆಯ ಬಗ್ಗೆ ಮಾನ್ಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಚಂದ್ರಕಾಂತ ಕಪಟಕರ ಇವರು ಉಪನ್ಯಾಸವನ್ನು ನೀಡಿದರು. ಸಹಕಾರಿಗಳಿಗೆ ಆರ್ಥಿಕ ಸಬಲತೆಯ ಮಾನದಂಡಗಳು, ಮುಖ್ಯ ಕಾರ್ಯನಿರ್ವಾಹಕರ ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಮಾನ್ಯ ವ್ಯವಸ್ಥಾಪಕರಾದ ಶ್ರೀ ಗಂಗಾರಾಮ ಕೊಳಾಪ್ಪೆ ಇವರು ಉಪನ್ಯಾಸ ನೀಡಿದರು. ಸಭೆಯಲ್ಲಿ 259 ಸಹಕಾರಿಗಳಿಂದ 318 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಪ್ರಭಯ್ಯ ಹಿರೇಮಠ, ಇವರು ಮತ್ತು ಗಣ್ಯಮಾನ್ಯರ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್ ಇವರು ಹಾಗೂ ವಂದನಾರ್ಪಣೆಯನ್ನು ಶ್ರೀಮತಿ ಪ್ರತಿಭಾ ಮಠ ನೆರವೇರಿಸಿದರು.



- **ಬೆಳಗಾವಿ ಜಿಲ್ಲೆ:** ದಿನಾಂಕ: 30.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಇದರ ವತಿಯಿಂದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ, ರಾಯಭಾಗ, ನಿಪ್ಪಾಣಿ ಮತ್ತು ಕಾಗವಾಡ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ತರಬೇತಿ ಸಭಾಭವನ ಚಿಕ್ಕೋಡಿ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು.ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆ, ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುಜಯ ಬೆಳವಿ ಇವರು ನೆರವೇರಿಸಿದರು. ಶಾಸನಾತ್ಮಕ ಕರ್ತವ್ಯಗಳು,ವಿವಿಧ ಪ್ರಾಧಿಕಾರಗಳಿಗೆ ವರದಿ/ಮಾಹಿತಿ ಸಲ್ಲಿಕೆ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವ ವಿವಿಧ ಕಾಯ್ದೆಗಳು ಆರ್ಥಿಕ ಸಬಲತೆಯ ಮಾನದಂಡಗಳು ವಿಷಯಗಳ ಕುರಿತು ಶ್ರೀ ಬಸವರಾಜ ಹೊಂಗಲರವರು ಉಪನ್ಯಾಸ ನೀಡಿದರು. ಹೊಸ ಲೆಕ್ಕ ಪರಿಶೋಧನೆ ವರದಿ ನಮೂನೆ,ಲೆಕ್ಕಾಪರಿಶೋಧನಾ ವರದಿಯಲ್ಲಿ ಗಮನಿಸಿದ ಸಾಮಾನ್ಯ ನ್ಯೂನ್ಯತೆಗಳು, ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ವಿಷಯಗಳ ಕುರಿತು ಶ್ರೀ ಗಂಗಾರಾಮ ಕೋಳಾಪ್ಪೆ ಇವರು ಉಪನ್ಯಾಸವನ್ನು ನೀಡಿದರು. ಈ ಸಭೆಯಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಅಥಣಿ, ರಾಯಭಾಗ, ನಿಪ್ಪಾಣಿ ಮತ್ತು ಕಾಗವಾಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಒಟ್ಟು 178 ಜನ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.




- **ಧಾರವಾಡ ಜಿಲ್ಲೆ:**ದಿನಾಂಕ: 30.12.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಧಾರವಾಡ ಜಿಲ್ಲೆ ವತಿಯಿಂದ ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಹುಬ್ಬಳ್ಳಿ ರೆಸಿಡೆನ್ಸಿ, ಹುಬ್ಬಳ್ಳಿ, ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿಯವರು ನೆರವೇರಿಸಿದರು. ವೇದಿಕೆ ಅಧ್ಯಕ್ಷತೆಯನ್ನು

ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ರವರು ವಹಿಸಿದ್ದರು ಅತಿಥಿಗಳಾಗಿ ಶ್ರೀ ಜಿ ಕೆ ರಾಮಪ್ಪ ತರಬೇತಿ ಉಪನ್ಯಾಸಕರು ಭಾಗವಹಿಸಿದ್ದರು ಮತ್ತು ವೇದಿಕೆ ಮೇಲೆ ಮಾನ್ಯ ಶ್ರೀ ಮನೋಜ್ ಜೋಷಿ ಮತ್ತು ಶ್ರೀ ಅಶೋಕ್ ಬ್ಯಾಹಟ್ಟಿ ಮತ್ತು ಶ್ರೀಮತಿ ಉಮಾ ಜಿ ತಾರ್ಯಾಳ ಮುಖ್ಯ ಕಾರ್ಯನಿರ್ವಾಹಕರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಹಕಾರಿಗಳಿಗೆ ನೂತನ ಲೆಕ್ಕಪರಿಶೋಧನಾ ನಮೂನೆ ಹಾಗೂ ಸಹಕಾರ ಆರ್ಥಿಕ ಶಿಸ್ತು ಕುರಿತಾಗಿ ಶ್ರೀ ಜಿ ಕೆ ರಾಮಪ್ಪ ತರಬೇತಿ ಉಪನ್ಯಾಸಕರು ಮಾಹಿತಿ ನೀಡಿದರು. ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು, ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕಲ್ಮೇಶ ಎಸ್ ಎಂ ರವರು ಮಾಹಿತಿ ನೀಡಿದರು. ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 79 ಸೌಹಾರ್ದ ಸಹಕಾರಿಗಳಿಂದ 88 ಜನ ಭಾಗವಹಿಸಿದ್ದರು.



- **ಬೆಳಗಾವಿ ಜಿಲ್ಲೆ:** ದಿನಾಂಕ 02.01.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಇದರ ವತಿಯಿಂದ ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಸವದತ್ತಿ, ರಾಮದುರ್ಗ, ಮತ್ತು ಯರಗಟ್ಟಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಕಿತ್ತೂರು ರಾಣಿ ಚೆನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ. ಜಿ.ಕೆ.ರಾಮಪ್ಪಾ, ಮಾನ್ಯ ಉಪ ನಿರ್ದೇಶಕರು (ನಿ,)ಲೆಕ್ಕ ಪರಿಶೋಧನ ಇಲಾಖೆ ಹಾಗೂ ಸಂಯುಕ್ತ ಸಹಕಾರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲರವರು ಉಪಸ್ಥಿತರಿದ್ದರು. ಸಹಕಾರಿಗಳಿಗೆ ಆರ್ಥಿಕ ಸಬಲತೆ ಮಾನದಂಡಗಳು, ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಟಾಸ್ಕ್ ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮರವರು ಉಪನ್ಯಾಸ ನೀಡಿದರು. ಲೆಕ್ಕ ಪರಿಶೋಧನೆ ವರದಿಯ ಬಗ್ಗೆ ಮಾನ್ಯ ಶ್ರೀ ಜಿ.ಕೆ.ರಾಮಪ್ಪ ಇವರು ಉಪನ್ಯಾಸವನ್ನು ನೀಡಿದರು.ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ರಾಮದುರ್ಗ, ಸವದತ್ತಿ, ಮತ್ತು ಯರಗಟ್ಟಿ ತಾಲೂಕಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು 47 ಹಾಗೂ ಇತರೆ ಸಿಬ್ಬಂದಿಗಳು ಸೇರಿ ಒಟ್ಟು 81 ಜನರು

ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆ ಮತ್ತು ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯ ಹಿರೇಮಠ ಇವರು ನೆರವೇರಿಸಿದರು.




- **ಬೆಳಗಾವಿ ಜಿಲ್ಲೆ:** ದಿನಾಂಕ 3.01.2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಚೇರಿ ವತಿಯಿಂದ ಬೆಳಗಾವಿ, ಖಾನಾಪುರ, ಹುಕ್ಕೇರಿ ಹಾಗೂ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಮಹಾಂತ ಭವನ ಮಹಾಂತೇಶ ನಗರ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು.. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ. ಜಿ.ಕೆ.ರಾಮಪ್ಪಾ, ಮಾನ್ಯ ಉಪ ನಿರ್ದೇಶಕರು (ನಿ.)ಲೆಕ್ಕ ಪರಿಶೋಧನ ಇಲಾಖೆರವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್‌ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿ ಮಠರವರು ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳನ್ನು ಉದ್ದೇಶಿಸಿ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ನಿರೂಪಣೆಯನ್ನು ಶಿವಕಾಂತ, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹುಕ್ಕೇರಿರವರು ನೆರವೇರಿಸಿದರು. ಸ್ವಾಗತವನ್ನು ರಾಚಯ್ಯ ಹಿರೇಮಠ; ಸೌಹಾರ್ದ ಅಭಿವೃದ್ಧಿ ಅಧಿಕಾರಿರವರು ನೆರವೇರಿಸಿದರು. ವಂದನಾರ್ಪಣೆಯನ್ನುಭವನ್‌ರಾವ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ಹಾಗೂ ಖಾನಾಪುರ ತಾಲ್ಲೂಕು ನೆರವೇರಿಸಿದರು.

ಲೆಕ್ಕಪರಿಶೋಧನೆ ವರದಿ ಬಗ್ಗೆ ಮಾನ್ಯ ಶ್ರೀ ಜಿ.ಕೆ.ರಾಮಪ್ಪ ಸರ್ ಇವರು ಉಪನ್ಯಾಸವನ್ನು ನೀಡಿದರು. ಶಾಸನಾತ್ಮಕ ಕರ್ತವ್ಯಗಳು,ವಿವಿಧ ಪ್ರಾಧಿಕಾರಗಳಿಗೆ ವರದಿ/ಮಾಹಿತಿ ಸಲ್ಲಿಕೆ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವ ವಿವಿಧ ಕಾಯ್ದೆಗಳು ಕುರಿತು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಬಸವರಾಜ ಹೊಂಗಲ್ ರವರು ಉಪನ್ಯಾಸ ನೀಡಿದರು. ಆರ್ಥಿಕ ಸಬಲತೆಯ ಮಾನದಂಡಗಳು,ಹೊಸ ಲೆಕ್ಕ ಪರಿಶೋಧನೆ ವರದಿ ನಮೂನೆ,ಲೆಕ್ಕಾಪರಿಶೋಧನಾ ವರದಿಯಲ್ಲಿ ಗಮನಿಸಬೇಕಾದ ಸಾಮಾನ್ಯ ನ್ಯೂನ್ಯತೆಗಳು ಕುರಿತು ಟಾಸ್ಕ್ ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮ್ ಕೊಳಪ್ಪೆರವರು



ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳ ಒಟ್ಟು 285 ಜನ ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಇತರೆ ಸಿಬ್ಬಂದಿ ಸೇರಿ ಒಟ್ಟು 346 ಜನ ಭಾಗವಹಿಸಿದ್ದರು.

- **ಗದಗ ಜಿಲ್ಲೆ:**ದಿನಾಂಕ: 03.01.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ ಗದಗ ಜಿಲ್ಲೆ ವತಿಯಿಂದ ಇದರ ವತಿಯಿಂದ ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ನಕ್ಷತ್ರ ಹೋಟೆಲ್, ರೈತ ಭವನ ಹತ್ತಿರ, ಗದಗ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆರವರು ನೆರವೇರಿಸಿದರು. ವೇದಿಕೆ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆರವರು ವಹಿಸಿದ್ದರು, ಅತಿಥಿಗಳಾಗಿ ಡಾ. ಶಶಿಕಾಂತ್‌ರವರು ತರಬೇತಿ ಉಪನ್ಯಾಸಕರು ಭಾಗವಹಿಸಿದ್ದರು ಮತ್ತು ವೇದಿಕೆ ಮೇಲೆ ಮಾನ್ಯ ಶ್ರೀ ವಿವೇಕ್ ಕುಲಕರ್ಣಿ ಮತ್ತು ಶ್ರೀ ಬಸವರಾಜ ಹಳ್ಳಿಕೇರಿ ಮತ್ತು ಶ್ರೀಮತಿ ಪ್ರೇಮಾ, ನೆರವು ಮಹಿಳಾ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ವೇದಿಕೆ ಮೇಲೆ ಉಪಸ್ಥಿತರಿದ್ದರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕಲ್ಮೇಶ ಎಸ್ ಎಂ ರವರು ಉಪಸ್ಥಿತರಿದ್ದರು. ಸಹಕಾರಿಗಳಿಗೆ ನೂತನ ಲೆಕ್ಕಪರಿಶೋಧನಾ ನಮೂನೆ ಹಾಗೂ ಸಹಕಾರ ಆರ್ಥಿಕ ಶಿಸ್ತು ಕುರಿತಾಗಿ ಡಾ. ಶಶಿಕಾಂತ್ ರವರು ತರಬೇತಿ ಉಪನ್ಯಾಸಕರು ಮಾಹಿತಿ ನೀಡಿದರು. ಸಹಕಾರಿಗಳಿಗೆ ಅನ್ವಯಿಸುವ ವಿವಿಧ ಕಾಯ್ದೆಗಳು, ಆರ್ಥಿಕ ಸಬಲತೆಯ ಮಾನದಂಡಗಳ ಸುತ್ತೋಲೆ, ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕಲ್ಮೇಶ ಎಸ್ ಎಂ ರವರು ಮಾಹಿತಿ ನೀಡಿದರು. ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳು ಸೇರಿ 43 ಸೌಹಾರ್ದ ಸಹಕಾರಿಗಳಿಂದ 51 ಜನ ಭಾಗವಹಿಸಿದ್ದರು.



**ಕರ್ನಾಟಕ ರಾಜಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು**

**ಇದರ ವತಿಯಿಂದ 2023–4ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ವಿವಿಧ ರೀತಿಯ ಕಾರ್ಯಕ್ರಮಗಳ**

**ಸಂಕ್ಷಿಪ್ತ ವರದಿ**